
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

24 ಮೇ 2017 ಪುಟ 16 ರೂ. 15/-


ಗ್ರಾಮೀಣ ಮೀಸಲಾತಿ ಎಂಬ ಅನ್ಯಾಯ

ಸಂತೋಷ್ ಎಂಬ ಅಂಕುಶ





ಬಳ್ಳಾರಿ ಬ್ರಿಗೇಡ್ ಗಾಯಕ್ಕೆ ಯಡ್ಡಿಯ ಮುಲಾಮು




ದಾವಣಗೆರೆ ಜಾತಿ ಬಾಂಬ್‌ಗೆ ಬಲಿ ಯಾರು?

ಮಂಗಳೂರು ಂಗಿ ತಲಬೂ ಂಫಿ ಸಂಬೂ





ಕೊಡಗು ದಿಡ್ಡಳ್ಳಿ ಹೋರಾಟದ ದುರಂತ ಮಗ್ಗಲುಗಳು



■ ಪ್ರೊ| ಕೆ. ಎಸ್. ಭಗವಾನ್

ಬುದ್ಧನನ್ನು ನಿಂದಿಸಿದ ರಾಮನಿಗೆ ಮಂದಿರವೇ

ರಾಮ ವನವಾಸ ಮುಗಿಸಿಕೊಂಡು ಬಂದನಂತರ ಅವನು ಅಯೋಧ್ಯೆಯ ಮಹಾರಾಜನಾಗಿ ಪಟ್ಟಾಭಿಷಿಕ್ತನಾಗುತ್ತಾನೆ. ವಾಲ್ಮೀಕಿಯ ಪ್ರಕಾರ ಹನ್ನೊಂದು ಸಾವಿರ ವರ್ಷಗಳ ಕಾಲ ಅವನು ರಾಜ್ಯಭಾರ ಮಾಡಿದ: "ದಶವರ್ಷ ಸಹಸ್ರಾಣಿ, ದಶವರ್ಷ ಶತಾನಿ ಚ" (ಬಾಲಕಾಂಡ 1. 97; 15. 28.; ಯುದ್ಧಕಾಂಡ 131. 106; ಉತ್ತರಕಾಂಡ 51. 22; 104. 12). ಮನುಷ್ಯನ ಗರಿಷ್ಠ ಆಯಸ್ಸು ನೂರು ವರ್ಷ ಎಂದು ಭಾವಿಸುವುದರಿಂದ ಹನ್ನೊಂದು ಸಾವಿರ ವರ್ಷ ಎಂಬುದನ್ನು ಹನ್ನೊಂದು ವರ್ಷ ಎಂದು ತೆಗೆದುಕೊಂಡರೆ ವಾಸ್ತವ ಎನಿಸುತ್ತದೆ.

ರಾಮಾಯಣ ಕಾವ್ಯದಲ್ಲಿ ಚಿತ್ರಿತವಾಗಿರುವಂತೆ ರಾಮ ವಿಧೇಯ ಮಗ, ತಮ್ಮಂದಿರಿಗೆ ಒಳ್ಳೆಯ ಅಣ್ಣ, ಆದರೆ ರಾಮನಿಗೆ ಹೆಂಡತಿ ಸೀತೆಯ ಮೇಲೆ ಪ್ರೀತಿಗಿಂತ ಕಠೋರತೆ ಇದೆ. ಮಕ್ಕಳ ಮೇಲೆ ಮಮತೆ ಕಾಣುವುದಿಲ್ಲ, ರಾಮನಲ್ಲಿ ಗುಣಗಳಿಗಿಂತ ಅವಗುಣಗಳೇ ಅಧಿಕವಾಗಿ ಇವೆ. ಅಲ್ಲದೆ ಅವನಿಗೆ ಯಾವ ರೀತಿಯಲ್ಲೂ ಕಾಟ ಕೊಡದ ತಾಟಕಿ, ಮಾರೀಚ, ಸುಬಾಹು, ಖರ, ಖರನ ಹದಿನಾಲ್ಕು ಸಾವಿರ ಸೈನಿಕರು, ಖರದೂಷಣ, ತ್ರಿಶಿರರ ವಧೆ, ಮಾಯಾಮೃಗದ ಕೊಲೆ, ಶೂರ್ಪನಖಿಯ ಮೂಗು ಕುಯ್ಯುವುದು, ವಾಲಿಯ ವಧೆ, ರಾವಣಾದಿಗಳ ಸಂಹಾರ - ಇವೆಲ್ಲದರಿಂದ ರಾಮ ಮಹಾ ಪರಾಕ್ರಮಶಾಲಿ ಎಂದು ಹೇಳುವ ಉದ್ದೇಶ ಇರಬಹುದು. ಆದರೆ ಕೊಲ್ಲುವವನು ದೊಡ್ಡವನಾಗುತ್ತಾನೆಯೇ? ರಾಮ ದೇವರು ಎಂದು ಹೇಳುವುದಾದರೆ ಅವನು ತಪ್ಪು ಮಾಡಿದವರನ್ನು ತಿದ್ದಬೇಕಲ್ಲವೆ? ಬದಲಿಗೆ ರಾಮಾಯಣದಲ್ಲಿ ಸಿಗುವ ಕಾರಣಗಳು ಏನೆಂದರೆ ಅವರೆಲ್ಲ ರಾಕ್ಷಸರು, ಅವರು ಯಜ್ಞಗಳನ್ನು ಕೆಡಿಸುತ್ತಿದ್ದರು ಎಂಬುದು.


ಹಾಗಾದರೆ ರಾಕ್ಷಸರು ಎಂದರೆ ಯಾರು? ರಾಮನ ಕಾಲದಲ್ಲಿದ್ದ ನರಮನುಷ್ಯರು ಈಗಲೂ ಇದ್ದಾರೆ. ಆದರೆ ರಾಕ್ಷಸರು ಯಾರೂ ಇಲ್ಲ. "ಸಾಕ್ಷರಾ ವಿಪರೀತೇಶ್ಚೇತ್ ರಾಕ್ಷಸ ಏವ ಕೇವಲಂ" - ಅಂದರೆ ಸಾಕ್ಷರಾ ಪದದ ಅಕ್ಷರಗಳನ್ನು ಹಿಂದು ಮುಂದೆ ಮಾಡಿದರೆ ರಾಕ್ಷಸಾ ಆಗುತ್ತದೆ. ಆದರೆ ಎಲ್ಲ ಜಾತಿಮತಗಳು ಇರುವಂತೆ ರಾಕ್ಷಸರು ಎಂಬ ಜನಾಂಗ ಇಲ್ಲ.

ರಾಕ್ಷಸರು ಯಾರು? ಎಂದು ಇದುವರೆಗೆ ಯಾರೂ ಸಂಶೋಧನೆ ಅಥವಾ ಊಹೆ ಮಾಡಿರುವುದು ಕಂಡುಬಂದಿಲ್ಲ, ರಾಕ್ಷಸ ಎಂಬುದು ಸಂಕೇತ ಅಥವಾ ರೂಪಕ ಎನ್ನಬಹುದು. ಆದರೆ ವಾಸ್ತವ ಇಲ್ಲದೆ ರೂಪಕ ಇಲ್ಲ, ರೂಪಕ ಬರುವುದು ಅಥವಾ ಆಗುವುದು ವಸ್ತುಸ್ಥಿತಿಯಿಂದಲೇ ಹೊರತು ಊಹೆಯಿಂದಲ್ಲ, ಹೇಗೆ ವಾಚ್ಯಾರ್ಥದಿಂದ ಧ್ವನ್ಯಾರ್ಥ ಹುಟ್ಟುತ್ತದೋ ಹಾಗೆ ವ್ಯಕ್ತಿಯಿಂದ, ವಸ್ತುವಿನಿಂದ ರೂಪಕ ಬರುತ್ತದೆ.

ಭಗವಾನ್ ಬುದ್ಧ ಗುರುಗಳು 'ಆದಿತ್ತ ಪರಿಯಾಯ ಸುತ್ತ - ಅಗ್ನಿ ಶಮನ ಉಪದೇಶ' - ನೀಡಿದ್ದಾರೆ. ಇದು ಅವರ ಮೂರನೆಯ ಬೋಧನೆ, ಗಯಾಶೀಸದಲ್ಲಿ ನೀಡಿದ್ದು; ಇಂಥ ಅದ್ಭುತ ಉಪದೇಶ ವಿಶ್ವದ ಯಾವುದೇ ಧರ್ಮ ಮತ್ತು ಸಾಹಿತ್ಯದಲ್ಲಿ ಕಾಣಸಿಗದು. ಭಗವಾನ್ ಬುದ್ಧ ಅತ್ಯಂತ ಸ್ವೋಪಜ್ಞ ಚಿಂತಕರಾಗಿದ್ದಾರೆ. ಆ ಸುತ್ತ ಹೀಗಿದೆ:

ಉರುವೇಲ ಕಶ್ಯಪ ವೈದಿಕ ಮತದ ದೊಡ್ಡ ಅನುಯಾಯಿ ಆಗಿದ್ದನು. ನಾನು ಅರ್ಹಂತ ಆಗಿರುವೆ, ಬುದ್ಧ ಆಗಿಲ್ಲ ಎಂದು ಅವನು ಭಾವಿಸಿಕೊಂಡಿದ್ದನು. ಈತನನ್ನು ಮೂರು ತಿಂಗಳ ಕಾಲ ಗಮನಿಸಿದ ಬುದ್ಧ ಗುರುಗಳು, ನೀನಿನ್ನೂ ಅರ್ಹಂತನಾಗಿಲ್ಲ, ನಿನ್ನಲ್ಲಿ ಆಸವಗಳು - ರಾಗಭಾವಗಳು - ಇವೆ. ಅಗ್ನಿ ಪೂಜೆ ಮಾಡುವುದರಿಂದ ಪ್ರಯೋಜನ ಇಲ್ಲ, ಮನುಷ್ಯನ ಒಳಗೇ ಅನೇಕ ಅಗ್ನಿಗಳು ಉರಿಯುತ್ತಿವೆ: ಕಾಮಾಗ್ನಿ, ಕ್ರೋಧಾಗ್ನಿ, ವೈರಾಗ್ನಿ, ಲೋಭಾಗ್ನಿ - ಇವುಗಳನ್ನು ಆರಿಸಬೇಕು. ಬುದ್ಧನ ಈ ಹೊಚ್ಚ ಹೊಸ ಮನಶಾಸ್ತ್ರೀಯ ನುಡಿಗಳು ಕಶ್ಯಪನನ್ನು ಸಂಪೂರ್ಣ ಬದಲಿಸಿದವು. ಅವನು ವೈದಿಕ ಮತ ತೊರೆದು ಬುದ್ಧ ಗುರುಗಳ ಅನುಯಾಯಿ ಆದನು. ಈತನ ತಮ್ಮಂದಿರಿಬ್ಬರು - ನದಿ ಕಶ್ಯಪ ಮತ್ತು ಗಯಾ ಕಶ್ಯಪ - ಮತ್ತು ಇವರ ಎಲ್ಲಾ ಶಿಷ್ಯರು ಸೇರಿ ಒಟ್ಟು ಒಂದು ಸಾವಿರದ ಮೂರು ಜನ ಬುದ್ಧ ಗುರುಗಳ ಭಿಕ್ಖುಗಳಾದರು. (ವಿವರಗಳಿಗೆ ನನ್ನ ಕೃತಿ - 'ಭಾರತದ ಬೇಸಾಯಗಾರರೆಲ್ಲ ಬೌದ್ಧರು' - ಪು. 92 - 100; ಮೂರನೆಯ ಮುದ್ರಣ 2015 ನೋಡಿ.)

ಬುದ್ಧ ಗುರುಗಳ 'ಅಗ್ನಿ ಉಪಶಮನ ಉಪದೇಶ' ಯುಜ್ಞ ಯಾಗಗಳ ನಿಸ್ಸಾರತೆಯನ್ನು ಬಯಲು ಮಾಡಿತು. ತಿಂಗಳುಗಟ್ಟಲೆ ಧರ್ಮದ ಹೆಸರಿನಲ್ಲಿ ಪುರೋಹಿತ ವರ್ಗದ ಹೊಟ್ಟೆಪಾಡಿಗಾಗಿ ನಡೆಯುತ್ತಿದ್ದ ಯಜ್ಞಗಳು ನಿಂತುಹೋದವು. ಇದರಿಂದ ಬ್ರಾಹ್ಮಣರ ಪ್ರತಿಷ್ಠೆಗೆ ಲಾಭಕ್ಕೆ ಗೌರವಕ್ಕೆ ದೊಡ್ಡ ಧಕ್ಕೆ ಉಂಟಾಯಿತು. ಅಗ್ನಿ ಪೂಜೆಗೆ ಪ್ರಾಮುಖ್ಯತೆ ಇರುವುದರಿಂದ ವೈದಿಕ ಮತ ಸುಡುವ ಮತವಾಗಿದೆ. ಅವರು ತಮ್ಮ ಪಟ್ಟಭದ್ರಹಿತಾಸಕ್ತಿಗೆ ಅಡ್ಡಿಯಾದ ಭಗವಾನ್ ಬುದ್ಧರನ್ನು ದ್ವೇಷಿಸಲು




ಪ್ರಾರಂಭಿಸಿದರು. ಅವರ ವೈರ ಈ ಮುಂದಿನ ರೂಪವನ್ನು ಪಡೆಯಿತು.

ಯಥಾ ಹಿ ಚೋರಃ ಸ ತಥಾ ಹಿ ಬುದ್ಧಃ
ತಥಾಗತಂ ನಾಸ್ತಿಕಂ ಅತ್ರ ವಿದ್ಧಿ
ತಸ್ಮಾದ್ಧಿ ಯಃ ಶಂಕ್ಯತಮಃ ಪ್ರಜಾನಾಂ
ನ ನಾಸ್ತಿಕೇನಾಭಿಮುಖೋ ಬುಧಃ ಸ್ಯಾತ್.

"ಬುದ್ಧನನ್ನು ಕಳ್ಳನೆಂದು ತಿಳಿಯಬೇಕು. ನಾಸ್ತಿಕನೂ ಬುದ್ಧನಂತೆಯೇ ಎಂದು ತಿಳಿಯಿರಿ. ಆದ್ದರಿಂದ ನಾಸ್ತಿಕನು ಪ್ರಜೆಗಳ ನಂಬಿಕೆಗೆ ಯೋಗ್ಯನಲ್ಲ, ನಾಸ್ತಿಕನನ್ನು ವಿದ್ಯಾವಂತ ಗೌರವಿಸಬಾರದು." (ಅಯೋಧ್ಯಾಕಾಂಡ, ಸರ್ಗ 109 ಶ್ಲೋಕ 34)

ಇದು ಬುದ್ಧನನ್ನು ರಾಮ ನಿಂದಿಸುವ ರೀತಿ. ಬುದ್ಧ ಸಮತೆಯ ಮಾತನಾಡುವುದರಿಂದ ಬ್ರಾಹ್ಮಣರಿಗೆ ಬುದ್ಧನನ್ನು ಕಂಡರೆ ಆಗುವುದಿಲ್ಲ, ಏಕೆಂದರೆ ಇವರು ಜನ ಒಟ್ಟಾಗಿ ಬಾಳುವುದನ್ನು ಸಹಿಸದವರು. ಜಾತಿಯ ಪ್ರತಿಪಾದನೆಯ ಹಿಂದಿನ ಗುಟ್ಟೇ ಅದಲ್ಲವೇ? ಅವರ ಹಗೆತನ ರಾಮನ ಕಾಲದಿಂದ ಇಂದಿನವರೆಗೂ ಮುಂದುವರೆದಿರುವುದನ್ನ ನೋಡಬಹುದು. ಬುದ್ಧ ಪೂರ್ಣಿಮೆಯಂದು ಜನರನ್ನು ಕೊಲ್ಲುವ ಕ್ಷಿಪಣಿಯನ್ನು ಪ್ರಯೋಗಾರ್ಥ ಉಡಾಯಿಸಿದ್ದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. ಆದ್ದರಿಂದಲೇ ರಾಮನನ್ನು ದೇವರೆಂದು ಅಬ್ರಾಹ್ಮಣರಲ್ಲಿ ನಂಬಿಕೆ ಹುಟ್ಟಿಸಿ, ಅವನ ಮೂಲಕ ಬುದ್ಧನನ್ನು ನಿಂದಿಸುವ ಮಾತುಗಳನ್ನು ಆಡಿಸುತ್ತಾರೆ. ದೇವರೇ ಆಡಿದ ಮಾತೆಂದು ಭಕ್ತರು ನಂಬುತ್ತಾರೆ. ಆದ್ದರಿಂದ ಇವರ ಅನಿಸಿಕೆಗಳನ್ನೇ ರಾಮನ ಮೂಲಕ ಹೇಳಿಸುವ ಪರಿಪಾಟ ಇವರದು. ಆಗ ಸಮಾಜದಲ್ಲಿ ಶಾಂತಿ ನೆಲೆಸಲು ಅತ್ಯಗತ್ಯವಾಗಿ ಬೇಕಾದ ಬುದ್ಧನ ಉಪದೇಶಗಳನ್ನು ಜನ ತಿರಸ್ಕರಿಸುತ್ತಾರೆ ಎಂಬುದು ಇವರ ದುರಾಲೋಚನೆ. ಇವರು ಜನರನ್ನು ಅನಕ್ಷರಸ್ಥರನ್ನಾಗಿ ಇಟ್ಟಿದ್ದು ಅವರಿಗೆ ಇಂಥ ಆಟಾಟೋಪಗಳು ಜನರಿಗೆ ಅರ್ಥವಾಗದಿರಲಿ ಎಂದೇ. ಈಗಲೂ ನಾವು ಇದನ್ನು ಪ್ರತಿಭಟಿಸಿದರೆ ಅವರು ರಾಮನನ್ನೇ ಪ್ರಶ್ನಿಸಿದರು ಎಂಬಂತೆ ಜನರನ್ನು ಪ್ರಚೋದಿಸುತ್ತಾರೆ. ಹೀಗೆ ರಾಮಾಯಣದಲ್ಲಿ ಬ್ರಾಹ್ಮಣರ ಮೇಲ್ಮೆಯನ್ನ ಪ್ರತಿಪಾದಿಸಲು ರಾಮನನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಆದ್ದರಿಂದ ಬುದ್ಧ ನಿಂದನೆ ಮಾಡುವ ರಾಮನಿಗೆ ಇದು ಶೋಭೆ ತರುವುದಿಲ್ಲ, ರಾಮಾಯಣಕ್ಕೂ ಕೀರ್ತಿಕರ ಅಲ್ಲ.

ಇದು ಬ್ರಾಹ್ಮಣರು ಎಷ್ಟು ಕುಬ್ಜರು ಮತ್ತು ವೈದಿಕ ಮತ ಎಷ್ಟೊಂದು ಕ್ರೂರವಾಗಿದೆ ಎಂದು ತೋರಿಸುತ್ತದೆ. ಇವರು ಪರನಿಂದನೆಯನ್ನೇ ಧರ್ಮ ಎನ್ನುತ್ತಿರುವ ವೇಳೆಯಲ್ಲೇ ಬುದ್ಧ ಯಾರನ್ನೂ ನಿಂದಿಸಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಬುದ್ಧ ಮಾನವರೆಲ್ಲ ಒಂದು ಎಂಬುದಕ್ಕೆ ಅರ್ಥಪೂರ್ಣ ಚಿರಪ್ರತಿಮೆಯಾಗಿದ್ದಾರೆ. ಆದರೆ ರಾಮ, ಕೊನೆಯ ಪಕ್ಷ, ಎಲ್ಲಾ ಹಿಂದೂಗಳು ಒಂದು ಎಂಬುದಕ್ಕೆ ಸಂಕೇತವಾಗಿಲ್ಲ, ಅವನು ಭೇದ ಭಾವನೆಗೆ, ಅಸಮಾನತೆಗೆ, ಅನ್ಯಾಯಕ್ಕೆ ಮೂರ್ತಿಯಾಗಿದ್ದಾನೆ. ಇಂಥವನನ್ನು ದೇವರು



ಎಂದು ಬಿಂಬಿಸಿ ದೇಶದೆಲ್ಲೆಡೆ ರಾಮ ದೇವಸ್ಥಾನಗಳನ್ನು ಕಟ್ಟಿಸಿದ್ದಾರಲ್ಲಾ, ಹಾರುವರ ಚಾಲಾಕು ಎಂಥದ್ದು? ಇದನ್ನು ನಂಬಿದ್ದಾರಲ್ಲಾ ಬ್ರಾಹ್ಮಣೇತರರು ಎಂಥ ಪೆದ್ದರು! ಪುರೋಹಿತರು ಹೇಳಿದಂತೆ ನಡೆದುಕೊಂಡರಲ್ಲಾ ರಾಜಮಹಾರಾಜರುಗಳು, ಅವರೆಂಥ ಮುಠ್ಠಾಳರು! ಎಂದು ಯೋಚಿಸಿದರೆ ಶ್ರೀಸಾಮಾನ್ಯರು ಮತ್ತು ಶ್ರಮಜೀವಿಗಳು ಪುರೋಹಿತಶಾಹಿಯ ತುಳಿತಕ್ಕೆ ತರಗೆಲೆಯಾಗಿ ಪುಡಿಪುಡಿಯಾದರಲ್ಲಾ! ಎಂದು ವ್ಯಥೆಯಾಗುತ್ತದೆ. ಬ್ರಾಹ್ಮಣರು ಶೂದ್ರರನ್ನು ತುಳಿಯುವುದಕ್ಕೆ ಬದಲಾಗಿ ಅವರಿಗೆ ವಿದ್ಯಾಬುದ್ಧಿಗಳನ್ನು ದಯಪಾಲಿಸಿ ಬೆಳೆಸಿದ್ದರೆ ದೇಶ ಎಷ್ಟೊಂದು ಅಭಿವೃದ್ಧಿಯಾಗುತ್ತಿತ್ತು, ಶೂದ್ರರು ಅವರಿಗೆ ಎಷ್ಟೊಂದು ಕೃತಜ್ಞರಾಗಿರುತ್ತಿದ್ದರು, ಅವರನ್ನು ಗೌರವಿಸುತ್ತಿದ್ದರು! ಬ್ರಾಹ್ಮಣರಿಗೇಕೆ ಇಷ್ಟೊಂದು ಸಂಕುಚಿತ ಮನಸ್ಸು ಬಂತು? ಬಸವಣ್ಣನವರು, ಪರಮಹಂಸರು ಏಕೆ ಅವರಿಗೆ ಆದರ್ಶವಾಗಲಿಲ್ಲ, ಹಾರು... ಅಬ್ರಾಹ್ಮಣರ ದಮನ ರಾಷ್ಟ್ರದ ದುರದೃಷ್ಟ, ... ಅಪ್ಪಟ ಜನಪ್ರೇಮಿ ಸ್ವಾಮಿ ವಿವೇಕಾನಂದರು ... ಯಿಂದ ಪ್ರಾರ್ಥಿಸುತ್ತಾರೆ: "ಕಲಿಯುಗದಲ್ಲಿ ಬ... ರೂಪದಲ್ಲಿರುವ ರಾಕ್ಷಸರಿಂದ ಜನರನ್ನು ಆ ... ಕಾಪಾಡಬೇಕು" (ಸಂ. 8, ಪು. 290; 1971)...

ರಾಮ ಮಾಡುವ ಬುದ್ಧನಿಂದನೆಯಿಂದ ರಾಮ... ರಾಮಾಯಣ ಬುದ್ಧನ ನಂತರ ಬಂದವು ಎಂಬ ... ಸತ್ಯ ಸ್ಥಾಪನೆಯಾಗುತ್ತದೆ, ಸ್ಥಿರವಾಗುತ್ತದೆ. ಆ ... ತಮ್ಮ ಧರ್ಮವೇ ಪುರಾತನವಾದುದು ಎಂಬ ಬ... ವಾದ ಅರ್ಥಹೀನವಾಗುವುದು.

ಬುದ್ಧನು ವಿಷ್ಣುವಿನ ಒಂಬತ್ತನೆಯ ಅವತಾರ ... ಇದು ನಿಜವಾದರೆ, ಒಂದು ಅವತಾರ ಇ... ಅವತಾರವನ್ನು ಬೈಯ್ಯುವುದು ಸಂಸ್ಕೃತಿಯೇ? ... ಅವತಾರ ದೃಷ್ಟಿಯೇ ತಪ್ಪು ಎಂದಂತಾಯಿತು, ... ಬುದ್ಧನದು ಸಂಪೂರ್ಣ ಜನೋದ್ಧಾರಕ ಕೆಲಸ; ... ಮತ್ತು ಕೃಷ್ಣರದು ಚಾತುರ್ವರ್ಣ ರಕ್ಷಣೆ ಮತ್ತು ... ದಮನ. ತಮ್ಮ ಹಿತ ಕಾಪಾಡಿಕೊಳ್ಳಲು ಬ್ರಾ... ಇವರನ್ನು ದೇವರನ್ನಾಗಿ ಮಾಡಿದ್ದಾರೆ. ಇದನ್ನು ತಿ... ಅಬ್ರಾಹ್ಮಣರು ಪೂಜಿಸುವ ರಾಮ, ಕೃಷ್ಣ ದೇವ... ಅವರನ್ನು ಧ್ವಂಸ ಮಾಡುವವರಾಗಿದ್ದಾರೆ.

ಬುದ್ಧನನ್ನು ಸ್ವಾಮಿ ವಿವೇಕಾನಂದರು ಕ... ರೀತಿಯನ್ನು ಗಮನಿಸಬೇಕು:

"ಬುದ್ಧ ನನ್ನ ಇಷ್ಟ ದೇವತೆ. ಆತ ಪರಿ... ದೇವರಾಗಿದ್ದ. ಇದರಲ್ಲಿ ನನಗೆ ಸಂಪೂರ್ಣ ಶ್ರದ್ಧ... (ಸಂ. 6. ಪು. 227). "ಪ್ರಪಂಚದಲ್ಲಿ ಹುಟ್ಟಿದ ... ಮಹತ್ವದ ವ್ಯಕ್ತಿ ಬುದ್ಧ ಎಂದು ಇತಿಹಾಸ ತೋರಿ... ('ದ ಕಂಪ್ಲೀಟ್ ವರ್ಕ್ಸ್ ಆಫ್ ಸ್ವಾಮಿ ವಿವೇಕಾನ... 1, ಪು. 117). ನೊಬೆಲ್ ಪ್ರಶಸ್ತಿ ಪುರಸ್ಕೃತರಾದ... ತತ್ವಜ್ಞಾನಿ ಬರ್ಟ್ರೆಂಡ್ ರಸೆಲ್ ಮತ್ತು ಮಹಾ... ಐನ್‌ಸ್ಟಿನ್ ಅವರುಗಳು ಬುದ್ಧನನ್ನು ಅಪ್ರತಿಮ... ಎಂದು ಕೊಂಡಾಡಿದ್ದಾರೆ.

ಅನೇಕ ರಾಷ್ಟ್ರಗಳಲ್ಲಿ ಬುದ್ಧ ಧಮ್ಮ ಉ... ಸ್ಥಿತಿಯಲ್ಲಿದೆ. ಬ್ರಾಹ್ಮಣ ಮತವು ಭಾರತ ಬಿಟ್ಟರೆ ... ಇದೆ? ಭಾರತದಲ್ಲೂ ಅದು ಪೂರ್ಣವಾಗಿಲ್ಲ, ಇ... ಇತರ ಮತಗಳಿರುವುದನ್ನು ಅಲಕ್ಷಿಸಬಾರದು.

ಇಂಥ ಅನುಪಮ ಬುದ್ಧನನ್ನು ಬೈಯುವ... ಪೂಜೆಗೆ ಅರ್ಹನೆ? ಇಷ್ಟೊಂದು ಸಣ್ಣತನ ಇರುವ ... ದೇವಸ್ಥಾನ ಅಗತ್ಯವೇ? ಇದರಿಂದ ನಿಂದಿಸುವ ಸಂಸ್ಕೃ... ವೈಭವೀಕರಿಸಿದಂತೆ ಆಗುತ್ತದಲ್ಲವೆ? ಇದು ... ಭರತಖಂಡಕ್ಕೇ ಅವಮಾನ ಎಂದು ತಿಳಿಯಬೇಕು. ... ರಾಮನ ಸಂದೇಶ ಏನು? ಅವನು ಮಾಡಿರುವ ... ಕೆಲಸ ಯಾವುದು? ಭೇದ ಮಾಡುವ ರಾಮ ಜ್ಞಾ... ಅಜ್ಞಾನಿ. ಭಾರತಕ್ಕೆ ಬುದ್ಧನಿಂದ ಕೀರ್ತಿ ಬಂದಿ... ಹೊರತು ರಾಮನಿಂದಲ್ಲ, ಹಾಗೆಯೇ ಪ್ರಪಂಚದ... ದೇಶಗಳು ಅತ್ಯಂತ ಸತ್ವಯುತವಾದ ಬುದ್ಧ ಧಮ... ಸ್ವೀಕರಿಸಿ ತಮ್ಮ ರಾಷ್ಟ್ರ ಧರ್ಮವನ್ನಾಗಿ ಮಾಡಿಕೊಂ... ಹೊರತು ಭೇದ ಭಾವದ ಹಿಂದೂ ಧರ್ಮವನ್ನ...

(ಮುಂದುವರೆಯು...

ನೋಟು ರದ್ದತಿಯಿಂದ ಜನರಿಗಾದ ನಷ್ಟ, ಮೋದಿಗಾದ ಲಾಭ



• ಗೌರಿ ಲಂಕೇಶ್
editorlankesh@gmail.com

ಆರು ತಿಂಗಳ ಹಿಂದೆ 1,000 ಮತ್ತು 500 ...ಾಯಿ ಮುಖಬೆಲೆಯ ನೋಟು ರದ್ದತಿಯ ...ರವು ದೇಶದಲ್ಲಿ ಆಲ್ಲೋಲಕಲ್ಲೋಲವನ್ನೇ ...ಿತು. ಆ ಹೆಜ್ಜೆಯು ಹಲವಾರು ಜನರ ಬದುಕು, ...ಮ, ಆರ್ಥಿಕ ಸ್ಥಿತಿಗತಿಗಳನ್ನೇ ನಾಶ ಮಾಡಿತು. ...ಧ್ಯಮಗಳ ಮೇಲೂ ಪರಿಣಾಮ ಬೀರಿತು. ಜನರ ...ಲ್ಲಿ ಹಣವೇ ಇಲ್ಲದಂತಾಗಿದ್ದರಿಂದ ಕಂಪನಿಗಳು ...ೇರಾತುಗಳನ್ನು ತಡೆಹಿಡಿದಿದ್ದರಿಂದ ದಿನಪತ್ರಿಕೆಗಳು ... ಅನುಭವಿಸಿದವು.

ದಿನಪತ್ರಿಕೆಗಳಾದರೂ 'ಅಭ್ಯಾಸ' ಕಾರಣಕ್ಕೆ ಬೆಳಗ್ಗೆ ... ಬಾಗಿಲಿಗೆ ಬಂದು ಬೀಳುತ್ತವೆ. ಆದರೆ ವಾರ ...ಕೆಗಳ ಕತೆ ಹಾಗಲ್ಲ. ಇವು ಜನರು ಆಶಿಸಿ ಅಥವಾ ...ಖಪುಟ ನೋಡಿ ಅಂಗಡಿಗಳಲ್ಲಿ ಕೊಳ್ಳುವಂತಹವು. ...ರ ಕೈಯಲ್ಲಿ ದಿನ ನಿತ್ಯದ ಅಗತ್ಯಗಳಾದ ಹಾಲು, ...ಾರಿ, ದಿನಸಿ ಇತ್ಯಾದಿಗಳಿಗೆ ಹಣ ಇಲ್ಲದಿದ್ದರೆ ...ರು ವಾರಪತ್ರಿಕೆಯೊಂದನ್ನು ಖರೀದಿಸುವುದೇ ...ಾರಿ ಆಗುತ್ತದೆ. ಇದು ಕನ್ನಡ ವಾರಪತ್ರಿಕೆಗಳ ...ನ ಸ್ಥಿತಿ ಮಾತ್ರವಲ್ಲ, ನಾನು ವಿಚಾರಿಸಿದಂತೆ ಇತರೆ ...ಗಳ ಸ್ಥಳೀಯ ಭಾಷಾ ವಾರಪತ್ರಿಕೆಗಳ ...ತಿಯೂ ಹೌದು. ಇಂಗ್ಲಿಷ್ ವಾರಪತ್ರಿಕೆಗಳಲ್ಲಿ ...ಖವಾದ ಮೊದಲೆರಡು ಹೊರತಾಗಿ ಉಳಿದವೂ ...ಸಿರು ಬಿಡುತ್ತಿವೆ.

ಪತ್ರಿಕೆಯ ಮಾರಾಟದೊಂದಿಗೆ ಪುಸ್ತಕಗಳ ...ರಾಟವೂ ಕುಸಿದಿದೆ. ಕರ್ನಾಟಕದ ಒಂದು ದೊಡ್ಡ



...ಕ ಮಳಿಗೆಯಲ್ಲಿ ಕಳೆದ ನವೆಂಬರ್ ತಿಂಗಳಿಂದ ...ಸರಿ ವಹಿವಾಟು ಶೇ. 60 ...ಮೆಯಾಗಿದೆಯಂತೆ. ಒಂದು ಪ್ರಮುಖ ಪ್ರಕಾಶನ ...ಯು ತಾನು ಪ್ರತಿವರ್ಷ ಮುದ್ರಿಸುತ್ತಿದ್ದ ಪುಸ್ತಕಗಳ ...ಖ್ಯೆಯನ್ನು ಶೇ. 50ಕ್ಕೆ ಕಡಿತಗೊಳಿಸಿದೆ. ಇದಕ್ಕೆ ... ಸಂಸ್ಥೆಯೂ ಹೊರತಲ್ಲ.

...ಮೊದಲೇ ಮುದ್ರಣ ಮಾಧ್ಯಮ ಈಗ ...ತ್ತಿನಾದ್ಯಂತ ಕಷ್ಟಗಳನ್ನು ಎದುರಿಸುತ್ತಿದೆ. ಇತ್ತೀಚೆಗೆ ...ರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ...ವಾರು ಪ್ರಮುಖ ಪತ್ರಿಕೆಗಳೇ ಕಣ್ಣುಮುಚ್ಚಿವೆ. ... ಹಲವು ತಮ್ಮ ಸಿಬ್ಬಂದಿಗಳಲ್ಲಿ ಬಹಳಷ್ಟು ...ನ್ನು ಮನೆಗೆ ಕಳುಹಿಸಿವೆ. ಅದೆಷ್ಟೋ ಪತ್ರಿಕೆಗಳು ...ಲೈನ್'ಗೆ ವರ್ಗಾವಣೆಯಾಗಿವೆ.

ನಮ್ಮ ಸಂಸ್ಥೆ ಹುಟ್ಟಿದ ದಿನದಿಂದಲೂ ...ರ್ಣನಿಗಾ ಘಟಕದಲ್ಲಿ ಇದ್ದದ್ದು ಎಲ್ಲರಿಗೂ ...ತ್ತಿರುವಂತಹದ್ದೇ. ಈ ನಿಮ್ಮ ವಾರ ಪತ್ರಿಕೆಗೆ ...ಕ 'ಉಸಿರು' ನೀಡಿ ಜೀವಂತವಾಗಿಟ್ಟದ್ದದ್ದು ...' ಎಂಬ ಮಾಸ ಪತ್ರಿಕೆ, 'ಉದ್ಯೋಗ ಎಲ್ಲಿ ...' ಎಂಬ ಪಾಕ್ಷಿಕ ಮತ್ತು 'ಲಂಕೇಶ್ ಪ್ರಕಾಶನ' ...ೂ 'ಗೈಡ್ ಪ್ರಕಾಶನ'ದ ಪುಸ್ತಕಗಳ ಮಾರಾಟ. ...ೀಗ ನೋಟು ರದ್ದತಿಯಿಂದಾಗಿ ನಮ್ಮ ಎಲ್ಲಾ ... ಮತ್ತು ಪುಸ್ತಕಗಳ ಮಾರಾಟಕ್ಕೆ ದೊಡ್ಡ ಪೆಟ್ಟು ...ದೆ. ನಮ್ಮ ಸಂಸ್ಥೆಯ ಆಡಿಟರ್ ಪ್ರಕಾರ ...ಬರ್ ತಿಂಗಳಿಂದ ನಮ್ಮ ಸಂಸ್ಥೆಯ ವಹಿವಾಟು ...50 ಕುಸಿದಿದೆ. ಹೀಗಾಗಿ ಮೊದಲೇ 'ತುರ್ತುನಿಗಾ ...'ದಲ್ಲಿದ್ದ ನಮ್ಮ ಸಂಸ್ಥೆಯ ಮೇಲೆ ಸರ್ಜಿಕಲ್ ಎಗರಿಬಿದ್ದಂತಾಗಿದೆ.

ನಮ್ಮ ಸಂಸ್ಥೆಯ ಕತೆ ಹೀಗಿದ್ದಿರಲಿ, ಮೋದಿಯ ಈ ...ಕಾರಿ ನೋಟು ರದ್ದತಿಯ ನಿರ್ಧಾರದಿಂದಾಗಿ ಈ ...ಕ್ಕೆ ಆದ ಲಾಭ ಎಷ್ಟು ಎಂದು ನೋಡಿದರೆ ...ಷ್ಟೂ ಎಷ್ಟು ಕಾಣಿಸುತ್ತದೆ. ಕಳೆದ ನವೆಂಬರ್ 8 ರಂದು ಮೋದಿ ಮಹಾಶಯ ಇದ್ದಕ್ಕಿದ್ದಂತೆ ನೋಟು ರದ್ದತಿಯನ್ನು ಘೋಷಿಸಿದನಲ್ಲವೇ. ಆಗ, ಆರ್‌ಬಿಐ ಪ್ರಕಾರ ದೇಶದಲ್ಲಿ 15.44 ಲಕ್ಷ ಕೋಟಿ ರೂಪಾಯಿಗಳು ನಗದಿನ ರೂಪದಲ್ಲಿ ಚಲಾವಣೆಯಲ್ಲಿದ್ದವು. ಚಲಾವಣೆಯಲ್ಲಿದ್ದ ನೋಟುಗಳಲ್ಲಿ 1,000 ಮತ್ತು 500 ರೂಪಾಯಿಗಳ ಪ್ರಮಾಣ ಶೇ. 86. ಹಳೇ ನೋಟುಗಳನ್ನು ಬ್ಯಾಂಕುಗಳಿಗೆ ಕೊಟ್ಟು ಹೊಸ ನೋಟು ಪಡೆದು ಜೀವನ ಸಾಗಿಸಲು ಪರದಾಡಿದ ಜನಸಾಮಾನ್ಯರು ಡಿಸೆಂಬರ್ 10ರ ಹೊತ್ತಿಗೆ 12.4 ಲಕ್ಷ ಕೋಟಿ (ಇದನ್ನು ಆರ್‌ಬಿಐ ಒಪ್ಪಿಕೊಂಡಿದೆ) ರೂಪಾಯಿಗಳನ್ನು ಜಮೆ ಮಾಡಿ ಆಗಿತ್ತು. ಆದರೆ ಆನಂತರ ಎಷ್ಟು ಹಣ ಬ್ಯಾಂಕುಗಳಿಗೆ ವಾಪಸ್ ಬಂದಿದೆ ಎಂಬುದರ ಬಗ್ಗೆ ಆರ್‌ಬಿಐ ಆಗಲಿ, ಮೋದಿಯಾಗಲಿ ತುಟಿಪಿಟಕ್ ಎಂದಿಲ್ಲ. ಒಂದು ತಿಂಗಳಲ್ಲಿ 12.4 ಲಕ್ಷ ಕೋಟಿ ರೂಪಾಯಿಗಳನ್ನು ಎಣಿಸಿದ್ದ ಆರ್‌ಬಿಐ ಕಳೆದ ಐದು ತಿಂಗಳುಗಳಿಂದ ಜುಜುಬಿ ಉಳಿಕೆ 3.04 ಲಕ್ಷ ಕೋಟಿ ರೂಪಾಯಿಗಳನ್ನು ಎಣಿಸುತ್ತಲೇ ಇದೆ. ಮಜಾ ಸಂಗತಿ ಎಂದರೆ ಇದೇ ತಿಂಗಳ ಐದರಂದು ಆರ್ಥಿಕ ಇಲಾಖೆಯ ಕಾರ್ಯದರ್ಶಿ "ಹಳೆ ನೋಟುಗಳನ್ನು ಎಣಿಸಲು ಇನ್ನೂ ಹಲವಾರು ತಿಂಗಳುಗಳು ಬೇಕು" ಎಂದಿದ್ದಾರೆ!

ಹಳೆ ನೋಟುಗಳು ಪ್ರವಾಹೋಪಾದಿಯಲ್ಲಿ ಬಂದು ಜಮೆ ಆಗುತ್ತಿದ್ದಂತೆ ಪೀಕಲಾಟಕ್ಕೆ ಬಿದ್ದ ಮೋದಿ "ಕಪ್ಪು ಹಣ ಹೊಂದಿರುವವರು ಶೇ. 50 ತೆರಿಗೆ ಕಟ್ಟಿ, ಶೇ. 25ರಷ್ಟನ್ನು ಪ್ರಧಾನಮಂತ್ರಿ ಗರೀಬಿ ಕಲ್ಯಾಣ ಯೋಜನೆಯಲ್ಲಿ ನಾಲ್ಕು ವರ್ಷಗಳ ಕಾಲ ಬಡ್ಡಿರಹಿತ ಡಿಪಾಸಿಟ್ ಆಗಿ ಜಮೆ ಮಾಡಿ" ಎಂದು ಕರೆ ಕೊಟ್ಟ. ಅದಕ್ಕೆ ಸರಿಯಾಗಿ ಮೋದಿಯನ್ನು ಬೆಂಬಲಿಸುವ ಜಗದೀಶ್ ಭಗವತಿ ತರಹದ ಆರ್ಥಿಕ ತಜ್ಞರು "ದೇಶದಲ್ಲಿ ನಗದು ರೂಪದಲ್ಲಿ ಐದು ಲಕ್ಷ ಕೋಟಿ ಕಪ್ಪು ಹಣ ಇದೆ" ಎಂದು ಹೇಳಿದರು. ಮೋದಿ ಮತ್ತು ಭಗವತಿ ತರಹದವರ ಅಂದಾಜು ಸರಿಯಾಗಿದ್ದಿದ್ದರೆ, ಕಪ್ಪು ಹಣ ಹೊಂದಿದವರೆಲ್ಲರೂ ಈ ಹೊಸ ಯೋಜನೆಯಡಿ ಶೇ. 50 ತೆರಿಗೆ ಕಟ್ಟಿ, ಶೇ. 25ರಷ್ಟನ್ನು ಬಡ್ಡಿರಹಿತ ಡಿಪಾಸಿಟ್ ಆಗಿ ಜಮೆ ಮಾಡಿದ್ದರೆ ಸರ್ಕಾರಕ್ಕೆ ಬರೋಬ್ಬರಿ 2.5 ಲಕ್ಷ ಕೋಟಿ ರೂಪಾಯಿಗಳಷ್ಟು ಸಿಗಬೇಕಿತ್ತು. ಆದರೆ ಬಂದದ್ದು ಎಷ್ಟು? ಕೇವಲ 2,300 ಕೋಟಿ ರೂಪಾಯಿಗಳು. ಎಲ್ಲಿಯ ಐದು ಲಕ್ಷ ಕೋಟಿ ರೂಪಾಯಿಗಳು? ಎಲ್ಲಿಯ 2,300 ಕೋಟಿ ರೂಪಾಯಿಗಳು?

ಇದೆಲ್ಲದರ ಅರ್ಥ ಇಷ್ಟೇ: ಮೋದಿಯ ಈ 'ಮಹತ್ವದ' ನಿರ್ಧಾರದಿಂದಾಗಿ ಕಪ್ಪು ಹಣ ಮತ್ತು ಖೋಟಾನೋಟುಗಳು ನಿರ್ನಾಮವಾಗುವ ಬದಲು ಬಿಳಿ ಹಣವಾಗಿ ಅನಾಯಾಸವಾಗಿ ಪರಿವರ್ತನೆಗೊಂಡಿವೆ. ಮಾತ್ರವಲ್ಲ ಕಪ್ಪು ಹಣ ಈಗಾಗಲೇ ಹೊಸ ನೋಟುಗಳ ಮೂಲಕ ಸಂಗ್ರಹವಾಗುತ್ತಿದ್ದು ಹೊಸ ನೋಟುಗಳ ನಕಲಿಗಳೂ ಚಲಾವಣೆಗೆ ಅಂದು ಆಗಿದೆ.

ಇನ್ನು ನೋಟು ರದ್ದತಿಯಿಂದಾಗಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೇನೆಂದಿದ್ದ ಮೋದಿಯ ಬೊಗಳೆ ಏನಾಯಿತು? ಇತ್ತೀಚೆಗೆ ಹಲವು ಆದಾಯ ತೆರಿಗೆ ಅಧಿಕಾರಿಗಳೇ ಹೊಸ ನೋಟನಲ್ಲಿ ಲಂಚ ಸ್ವೀಕರಿಸುತ್ತಿದ್ದಾಗ ಮುಂಬೈಯಲ್ಲಿ ಸಿಕ್ಕಿಬಿದ್ದಿದ್ದಾರೆ. ಹಾಗೆಯೇ ಹೊಸ ನೋಟುಗಳ ಹೊಸ ಖೋಟಾ ನೋಟುಗಳನ್ನು ಹೊಂದಿದ್ದ ಜನ ದೆಹಲಿಯಲ್ಲಿ ಸಿಕ್ಕಿಬಿದ್ದಿದ್ದಾರೆ.

ನೋಟು ರದ್ದತಿಯ ಮೂಲಕ ಭ್ರಷ್ಟಾಚಾರ ಮತ್ತು ಕಪ್ಪು ಹಣವನ್ನು ತಡೆಯುತ್ತೇನೆ ಎಂದಿದ್ದ ಮೋದಿ ಅವುಗಳ ಜೊತೆಗೆ ಭಯೋತ್ಪಾದಕರ ಮತ್ತು ನಕ್ಸಲೀಯರ ಬೆನ್ನೆಲುಬು ಮುರಿಯುತ್ತೇನೆ ಎಂದೂ ಕೊಚ್ಚಿಕೊಂಡಿದ್ದ. ಅಷ್ಟೇ ಅಲ್ಲ, ಕಳೆದ ಫೆಬ್ರವರಿಯಲ್ಲಿ ಮೋದಿ ಸಂಸತ್ತಿನಲ್ಲಿ "ನೋಟು ರದ್ದತಿಯ ನಂತರ 700 ನಕ್ಸಲೀಯರು ಶರಣಾಗಿದ್ದಾರೆ" ಎಂದು ಹೇಳುವ ಮೂಲಕ ತನ್ನ ಈ ಕ್ರಮ ಯಶಸ್ವಿಯಾಗಿದೆ ಎಂದು ಸೂಚಿಸಿದ್ದ.

ಆದರೆ ವಾಸ್ತವವಾಗಿ ಏನಾಗಿದೆ? ಪ್ರತ್ಯೇಕತಾವಾದಿ ಬುರ್ಹಾನ್ ವಾನಿಯ ಸಾವಿನ ನಂತರ ಕಾಶ್ಮೀರದಲ್ಲಿ ಶುರುವಾದ ಪ್ರತಿರೋಧ ಇವತ್ತಿಗೂ ಮುಂದುವರೆದಿದೆ. ಹಾಗೆಯೇ ಇತ್ತೀಚೆಗೆ ಛತ್ತೀಸಗಡದಲ್ಲಿ ನಕ್ಸಲರು ದಾಳಿ ಮಾಡಿ 24 ಸಿಆರ್‌ಪಿಎಫ್ ಯೋಧರನ್ನು ಕೊಂದು ಹಾಕಿದ್ದಾರೆ. ಅಂಕಣಕಾರರೊಬ್ಬರು ಬರೆದಿರುವಂತೆ "ನೋಟು ರದ್ದತಿಯಿಂದಾಗಿ ಭಯೋತ್ಪಾದಕರ ಮತ್ತು ನಕ್ಸಲರ ಬೆನ್ನೆಲುಬು ಮುರಿದಿಲ್ಲ, ಬದಲಾಗಿ ಅವರ ಕಾಲಿನ ಉಗುರು ಒಂದಿಷ್ಟು ಮುರಿದಿರಬಹುದಷ್ಟೇ."

ಇನ್ನು ತಮ್ಮ ಆರ್ಥಿಕ ಶಕ್ತಿಗಿಂತ ಹೆಚ್ಚು ಹಣವನ್ನು ಬ್ಯಾಂಕುಗಳಲ್ಲಿ ಜಮೆ ಮಾಡುವವರ ಮೇಲೆ ನಿಗಾ ಇರಿಸುವುದಾಗಿ ಮೋದಿ ಸರ್ಕಾರ ಬೆದರಿಸಿತ್ತಲ್ಲವೇ? ಅದಕ್ಕೂ ಈಗ ಏನಾಗಿದೆ ಎಂದು ನೋಡುವುದು ಸೂಕ್ತ. ನೇರ ಆದಾಯ ತೆರಿಗೆ ಇಲಾಖೆಯು ಇತ್ತೀಚೆಗೆ 18 ಲಕ್ಷ ಜನ ತಮ್ಮ ಆರ್ಥಿಕ ಶಕ್ತಿಗಿಂತ ಹೆಚ್ಚು ಹಣವನ್ನು ಜಮೆ ಮಾಡಿದ್ದಾರೆ ಎಂದು ಪ್ರಕಟಿಸಿದೆ. ಶೇ. 30 ರಷ್ಟು ಖಾಲಿ ಹುದ್ದೆಗಳಿರುವ ಆದಾಯ ತೆರಿಗೆ ಇಲಾಖೆಯಲ್ಲಿ ಈಗ 72,000 ನೌಕರರು ಇದ್ದಾರೆ. ಅವರೆಲ್ಲ ಪ್ರತಿವರ್ಷ ತನಿಖೆಗೊಳಪಡಿಸುವುದು ಕೇವಲ 3.5 ಲಕ್ಷ ಪ್ರಕರಣಗಳನ್ನು. ಆದಾಯ ತೆರಿಗೆ ಇಲಾಖೆಯ ಎಲ್ಲಾ ನೌಕರರು ಇತರೆ ಕಲಸಗಳನ್ನೆಲ್ಲ ಬದಿಗೊತ್ತಿ ಈ 18 ಲಕ್ಷ ಜನರ ಆರ್ಥಿಕ ಸ್ಥಿತಿಗತಿಗಳನ್ನು ತನಿಖೆಗೊಳಪಡಿಸಿದರೂ, ಅವೆಲ್ಲ ಮುಗಿಯುವುದಕ್ಕೆ ಐದು ವರ್ಷಗಳೇ ಬೇಕಾಗುತ್ತದೆ!!

ನೋಟು ರದ್ದತಿಯಿಂದಾದ ಎಡವಟ್ಟು ಜನರಿಗೆ ತಾಕಲಾರಂಭಿಸಿದಾಗ ಮೋದಿ ತನ್ನ ರಾಗ ಬದಲಿಸಿದ. ಕಪ್ಪು ಹಣ ಮತ್ತು ಖೋಟಾನೋಟುಗಳಿಗೆ ಕಡಿವಾಣ, ಭ್ರಷ್ಟಾಚಾರಕ್ಕೆ ಅಂಕುಶ, ಭಯೋತ್ಪಾದನೆ ಮತ್ತು ನಕ್ಸಲ್ ದಮನ ಎಂದೆಲ್ಲ ಅರಚಾಡಿದ್ದ ಮೋದಿ ಆನಂತರ ಇದರ ಮೂಲ ಉದ್ದೇಶ ನಗದು ರಹಿತ ವಹಿವಾಟನ್ನು ಉತ್ತೇಜಿಸುವುದು ಎಂದಿದ್ದ. ಇದಕ್ಕೆ ಸರಿಯಾಗಿ ಯೋಜನಾ ಆಯೋಗವನ್ನು ರದ್ದು ಮಾಡಿ ತನ್ನ ಚೇಲಾಗಳನ್ನೇ ನೇಮಿಸಿ ರಚಿಸಿರುವ ನೀತಿ ಆಯೋಗ ನಗದು ರಹಿತ ವಹಿವಾಟು ನವೆಂಬರ್ ತಿಂಗಳ ನಂತರ 23 ಪಟ್ಟು ಹೆಚ್ಚಾಗಿದೆ ಎಂದಿತ್ತು. ತನ್ನ ಈ ಲೆಕ್ಕವನ್ನು ಪುಷ್ಟೀಕರಿಸಲು "2016ರ ನವೆಂಬರ್ ತಿಂಗಳಲ್ಲಿ ಕೇವಲ 101 ಕೋಟಿ ರೂಪಾಯಿಗಳಷ್ಟು ವ್ಯವಹಾರ 2,80,00 ನಗದುರಹಿತ ವಹಿವಾಟಿನ ಮೂಲಕ ನಡೆದಿತ್ತು. ಆದರೆ 2017ರ ಮಾರ್ಚ್ ತಿಂಗಳಲ್ಲಿ 2,425 ಕೋಟಿ ರೂಪಾಯಿಗಳಷ್ಟು ವ್ಯವಹಾರಗಳು 63,80,000 ನಗದುರಹಿತ ವಹಿವಾಟಿನ ಮೂಲಕ ನಡೆಯುವ ತನಕ ಏರಿದೆ" ಎಂದು ಅಂಕಿಅಂಶಗಳನ್ನು ಒದಗಿಸಿತ್ತು. ಆದರೆ ಇದಾದ ಕೆಲವೇ ದಿನಗಳಲ್ಲಿ ಸ್ವತಃ ಆರ್‌ಬಿಐ ನೋಟು ರದ್ದತಿಯ ನಂತರ ನಗದುರಹಿತ ವಹಿವಾಟು ಕೇವಲ 1.43 ಪಟ್ಟು ಹೆಚ್ಚಾಗಿದೆ ಎಂದು ಪ್ರಕಟಿಸಿತ್ತು. ಎಲ್ಲಿಯ 23 ಪಟ್ಟು ಹೆಚ್ಚಳ? ಎಲ್ಲಿಯ 1.43 ಪಟ್ಟು ಹೆಚ್ಚಳ? ಅದಕ್ಕಿಂತ ಮುಖ್ಯವಾದ ಇನ್ನೊಂದು ಅಂಶ ಯಾವುದೆಂದರೆ ಹೊಸ ನೋಟುಗಳ ಕೊರತೆ ನೀಗುತ್ತಿದ್ದಂತೆ ನಗದು ರಹಿತ ವಹಿವಾಟೂ ಕುಗ್ಗುತ್ತಿದೆ. ಯಾಕೆಂದರೆ ನಮ್ಮ ದೇಶದಲ್ಲಿ ಶೇ. 70ರಷ್ಟು ಆರ್ಥಿಕ ವಹಿವಾಟು ನಡೆಯುವುದು ನೋಟುಗಳ ಮೂಲಕವೇ.

ಇದೆಲ್ಲದರ ಅರ್ಥ ನೋಟು ರದ್ದತಿಯಿಂದಾಗಿ ಮೋದಿ ಸಾಧಿಸುತ್ತೇನೆ ಎಂದು ಅಬ್ಬರಿಸಿದ್ದ ಎಲ್ಲವೂ ಠುಸ್ ಆಗಿವೆ. ಆದರೆ ಇದರಿಂದಾಗಿ ಜನರಿಗಾದ ಕಷ್ಟ ಮತ್ತು ನಷ್ಟ? ಪ್ರತಿವರ್ಷ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತೇನೆ ಎಂದಿದ್ದ ಮೋದಿ ಈ ನೋಟು ರದ್ದತಿಯಿಂದಾಗಿ ಸುಮಾರು 1.52 ಲಕ್ಷ ಜನ ಕೆಲಸ ಕಳೆದುಕೊಳ್ಳುವಂತೆ ಮಾಡಿದ. ಜೊತೆಗೆ ನೂರಾರು ಜನ ಹೊಸ ನೋಟುಗಳ ಪಡಿಪಾಟಲಿನಲ್ಲಿ ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಬ್ಯಾಂಕು ಖಾತೆಗಳಿಲ್ಲದ ಅದೆಷ್ಟೋ ಜನ ಕೂಡಿಟ್ಟ ಹಣವೆಲ್ಲ ಬೆಲೆ ಕಳೆದುಕೊಳ್ಳುವಂತಾಯಿತು. ಕುಚೋದ್ಯವೆಂದರೆ ಯಾರು ಕಪ್ಪು ಹಣ ಇಟ್ಟುಕೊಂಡಿದ್ದಾರೋ ಅವರನ್ನೆಲ್ಲ ಮೋದಿ ಮಟ್ಟಹಾಕುತ್ತೇನೆಂದಿದ್ದರೂ, ಅವರೆಲ್ಲ ತಮ್ಮ ಕಪ್ಪು ಹಣವನ್ನು ಸುಲಭವಾಗಿ ಬಿಳಿ ಹಣವಾಗಿ ಬದಲಾಯಿಸಿ ಈಗ ನೆಮ್ಮದಿಯಿಂದಿದ್ದಾರೆ. ಬಳ್ಳಾರಿ ರೆಡ್ಡಿ ಮಗಳ ಅದ್ದೂರಿ ಮದುವೆಯೇ ಇದಕ್ಕೆ ಸಾಕ್ಷಿ.

ವಿಚಿತ್ರವೆಂದರೆ, ಮೋದಿಯ ಈ ಪೆದ್ದು ನಿರ್ಧಾರದಿಂದಾಗಿ ಜನ ಪಡಬಾರದ ಕಷ್ಟ ಪಟ್ಟಿದ್ದರೂ ಆತನ ಪಕ್ಷವನ್ನು ಮತ್ತೆಮತ್ತೆ ಗೆಲ್ಲಿಸುತ್ತಿದ್ದಾರೆ. ಮಹಾರಾಷ್ಟ್ರದ ಮುನಿಸಿಪಾಲ್ ಚುನಾವಣೆಯಲ್ಲಿ ಬಿಜೆಪಿ ದೊಡ್ಡ ಪ್ರಮಾಣದಲ್ಲಿ ಗೆದ್ದಿತು. ಆನಂತರ ಉತ್ತರ ಪ್ರದೇಶದಲ್ಲಿ ವಿರೋಧ ಪಕ್ಷಗಳನ್ನೆಲ್ಲ ಹಣ್ಣುಗಾಯಿ ನೀರುಗಾಯಿ ಮಾಡಿತು. ಇತ್ತೀಚೆಗೆ ದೆಹಲಿ ಮುನಿಸಿಪಾಲ್ ಚುನಾವಣೆಯಲ್ಲೂ ಬಿಜೆಪಿ ಅಭೂತಪೂರ್ವ ಜಯ ಗಳಿಸಿದೆ. ಇದನ್ನೆಲ್ಲ ನೋಡಿದರೆ ಕಷ್ಟನಷ್ಟ ಅನುಭವಿಸಿದ ಜನ ಯಾರು? ಮೋದಿಯ ಸನ್ನಿಗೆ ಬಲಿಯಾಗಿ ಬಿಜೆಪಿಯನ್ನು ಗೆಲ್ಲಿಸುತ್ತಿರುವ ಮತದಾರರು ಯಾರು? ಎಂಬ ಪ್ರಶ್ನೆ ಹುಟ್ಟುತ್ತದೆ.

ನನಗನ್ನಿಸುತ್ತೆ, ಎಟಿಎಮ್‌ಗಳ ಮುಂದೆ ಸಾಲುಗಟ್ಟಿ ನಿಂತಿದ್ದ ಮಧ್ಯಮ ವರ್ಗದ ಜನರಲ್ಲಿ ತಾವು ತಾತ್ಕಾಲಿಕವಾಗಿ ದೇಶದ ಹಿತಾಸಕ್ತಿಗೆ ಕಷ್ಟ ಅನುಭವಿಸುತ್ತಿದ್ದೇವೆ ಎಂದೂ; ಸಾಲುಗಟ್ಟನಿಂತಿರುವ ಮಧ್ಯಮವರ್ಗದ ಜನರನ್ನು ನೋಡಿ 'ಮೋದಿ ಇಂತಹ ಸಾಹುಕಾರರನ್ನು ಮಟ್ಟಹಾಕಿದ್ದಾನೆ' ಎಂಬ ಭಾವನೆಯನ್ನು ಬಡವರಲ್ಲೂ ಮೂಡಿಸುವಲ್ಲಿ ಮೋದಿ ಯಶಸ್ವಿಯಾಗಿದ್ದಾನೆ. ವಾಸ್ತವವಾಗಿ ಸುಶಿಕ್ಷಿತರಾದ ಮಧ್ಯಮವರ್ಗದ ಜನರಲ್ಲಿ ನೋಟು ರದ್ದತಿಯಿಂದಾಗಿ ದೇಶಕ್ಕೆ ನಯಾಪೈಸೆಯ ಲಾಭವಾಗಿಲ್ಲ ಎಂಬ ಅರಿವೂ ಬಂದಿಲ್ಲದಿರುವಾಗ ವಿಜಯ್ ಮಲ್ಯ, ಅಂಬಾನಿ, ಅದಾನಿ ತರಹದ ಕೋಟ್ಯಾಧಿಪತಿಗಳ ಒಂದು ಕೂದಲೂ ಕೊಂಕಿಲ್ಲ ಎಂಬುದು ಅನಕ್ಷರಸ್ಥ ಬಡವರಿಗೆ ಅರ್ಥವಾಗುವುದಾದರೂ ಹೇಗೆ?

ನೋಟು ರದ್ದತಿಯಿಂದಾಗಿ ಸಾಮಾನ್ಯ ಜನ ಕಷ್ಟನಷ್ಟಗಳನ್ನು ಅನುಭವಿಸಿದ್ದರೂ, ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ನಯಾಪೈಸೆಯ ಲಾಭ ಆಗಿಲ್ಲದಿದ್ದರೂ, ಮತದಾರರಿಗೆ ಮಂಕುಬೂದಿ ಎರಚುವಲ್ಲಿ ಎತ್ತಿದ ಕೈಯಾಗಿರುವ ಮೋದಿ ಮಾತ್ರ ಈ ಕ್ರಮದಿಂದಾಗಿ ರಾಜಕೀಯ ಲಾಭ ಪಡೆಯುತ್ತಿದ್ದಾನೆ.


ಜನ ಮರುಳೋ, ಜಾತ್ರೆ ಮರುಳೋ ಗೊತ್ತಿಲ್ಲ, ಆದರೆ ಆರ್ಥಿಕ ಬಿಕ್ಕಟ್ಟಿನಲ್ಲಿರುವ ನಾವು ಪ್ರತಿದಿನ ಮೋದಿಗೆ ಹಿಡಿಶಾಪ ಹಾಕುತ್ತಲೇ ಇದ್ದೇವೆ.

(ಮಾಹಿತಿ ಆಧಾರ 'ಸ್ಕ್ರೋಲ್.ಇನ್'ನಲ್ಲಿ ಟೋನಿ ಜೋಸೆಫ್ ಮತ್ತು 'ಫಸ್ಟ್‌ಪೋಸ್ಟ್'ನಲ್ಲಿ ವಿನೀತ್ ಉನ್ನಿಕೃಷ್ಣನ್ ಅವರ ಲೇಖನಗಳು)

ಸಿಎಂ ಸಿದ್ದುಗಿದು ಗೊತ್ತಾ

ಗ್ರಾಮೀಣ ಮೀಸಲಾತಿ ಎಂಬ ಸಾಮಾಜಿಕ ಅನ್ಯಾಯ

ಇವತ್ತು ಸರ್ಕಾರಿ ಶಾಲೆಗಳಿಗೆ ದಾಖಲಾಗುತ್ತಿರುವವರು ಬಡತನದ ಅನಿವಾರ್ಯತೆಯವರು ಮಾತ್ರ ಎಂಬಂತಾಗಿದೆ. ಕನ್ನಡದ ಪ್ರೀತಿಯಿಂದ-ಅಭಿಮಾನದಿಂದ ಕನ್ನಡ ಮಾಧ್ಯಮ ಶಾಲೆ ಸೇರುವವರು ಅತೀ ವಿರಳ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಖಾಸಗಿ ಶಾಲೆಯ ಮಕ್ಕಳೊಂದಿಗಿನ ಸಂಘರ್ಷದಲ್ಲಿ ಸೋಲುತ್ತಿದ್ದಾರೆ. ಕನ್ನಡದಲ್ಲಿ ಕಲಿತರ ಭವಿಷ್ಯ ವಿದೆ ಎಂಬ ಭರವಸೆ-ಭಾವನೆ ಇಲ್ಲದಾಗಿದೆ. ಕನ್ನಡದಲ್ಲಿ ಕಲಿತರೆ ಉನ್ನತ ಶಿಕ್ಷಣದಲ್ಲಿ-ಉದ್ಯೋಗ ಬೇಟೆಯಲ್ಲಿ ಅವಕಾಶವಿದೆಯೆಂಬ ವಿಶ್ವಾಸ ಮೂಡಿಸಬೇಕಾಗಿದೆ ಸರ್ಕಾರಿ ಪ್ರಭೃತಿಗಳು- ಕನ್ನಡ ಗುತ್ತಿಗೆ ಹಿಡಿದಂತೆ ಹಾರಾಡುವ ಓರಾಟಗಾರರು ಮತ್ತು ಆಳುವವರು. ಇಂಥದೊಂದು ಸ್ಪರ್ಧಾತ್ಮಕ ಛಲವಿದ್ದರಷ್ಟೇ ಸರ್ಕಾರಿ ಶಾಲೆಗಳು ಮತ್ತೆ ಜೀವಕಳೆ ತುಂಬಿಕೊಳ್ಳಲು ಸಾಧ್ಯ!!



ಸಿದ್ದು

ಸಿಎಂ ಸಿದ್ದು ಆಗಾಗ ತಮ್ಮ ಶೈಕ್ಷಣಿಕ ಸಾಹಸದ ಬಗ್ಗೆಯೊಂದು ಕತೆ ಹೇಳುತ್ತಿರುತ್ತಾರೆ. ತಾನು ನೇರವಾಗಿ ಐದನೇ ಈಯತ್ತೆಗೆ ಸೇರಿದ ಕೂಸು; ವಾರಿಗೆಯವರು ಒಂದರಿಂದ ನಾಲ್ಕನೇ ತರಗತಿ ತನಕ ಶಾಲೆಯಲ್ಲಿ ಕಲಿಯುತ್ತ-ನಲಿಯುತ್ತ ಇದ್ದಾಗ ತಾನು ಹೊಲ-ಬೀದಿ-ಕುರಿಗಳ ಹಿಂದೆ ಅಂಡಲೆಯುತ್ತಿದ್ದೆ. ಮೊದಲ ನಾಲ್ಕು ವರ್ಷ ಶಾಲೆಯ ಮುಖವನ್ನೇ ನೋಡಲಾಗದ ಸಾಮಾಜಿಕ ಸಂಕಷ್ಟದಲ್ಲಿದ್ದೆ ಎಂದು 'ಅಕ್ಯಾಡೆಮಿಕ್' ಸಂದರ್ಭ ಸಿಕ್ಕಾಗೆಲ್ಲ ಸಿದ್ದು ಹೇಳುತ್ತಿರುತ್ತಾರೆ. ಅಂದರೆ ಸಿಎಂ ಸಿದ್ದು ಸ್ಟೂಡೆಂಟ್ ಅಂತಾಗಿದ್ದೇ ಅವರ ಹತ್ತನೇ ವಯಸ್ಸಿನಲ್ಲಿ, ಆ ನಂತರ ಹತ್ತನೇ ವರ್ಗದವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತು ಸಿಎಂ ಸಾಹೇಬರು ವಕೀಲರೂ ಆಗಿದ್ದಾರೆ.

ಸಿದ್ದು ಅಚ್ಚ ಕನ್ನಡದ ಗ್ರಾಮೀಣ ಸೊಗಡಿನ ಪ್ರತಿಭೆ. ಹಾಗಂತ ಸಿಎಂ ಸಾಹೇಬರೇನಾದರೂ ಕನ್ನಡ ಮಾಧ್ಯಮ ಅಥವಾ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ಕೋರಿ ಸರ್ಕಾರಕ್ಕೆ ಅರ್ಜಿ ಗುಜರಾಯಿಸಿದರೆ ಅದು ಖಂಡಿತ ದಕ್ಕದು! ಸರ್ಕಾರದ ವಿಚಿತ್ರ ನಿಯಮಾವಳಿಗಳೇ ಹಾಗಿದೆ. ಒಂದರಿಂದ ಹತ್ತನೇ ತರಗತಿ ತನಕದ ಭರ್ತಿ ಹತ್ತು ಶೈಕ್ಷಣಿಕ ವರ್ಷ ಸಿದ್ದು ಶಾಲೆಯಲ್ಲಿ ಕುಳಿತು ಕಲಿತಿಲ್ಲ ತಾನೆ? ಹಾಗಾಗಿ ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಎಂಬೆರಡೂ ಮೀಸಲಾತಿಗೆ ಸಿಎಂ ಅನರ್ಹರು. ಇಂಥದ್ದೇ ದುರಂತಕ್ಕೆ ರಾಜ್ಯದ ಲಕ್ಷಾಂತರ ಅರ್ಹ ವಿದ್ಯಾರ್ಥಿ ಸಮೂಹ ಈಡಾಗಿ ವಿಲ-ವಿಲ ಒದ್ದಾಡುತ್ತಿದೆ!!

ರಾಜ್ಯ ಸರ್ಕಾರ ಶೇಕಡಾ 5ರಷ್ಟು ಕನ್ನಡ ಮಾಧ್ಯಮ ಮತ್ತು ಶೇಕಡಾ 15ರಷ್ಟು ಗ್ರಾಮೀಣ ಸಮಾನಾಂತರ ಮೀಸಲಾತಿ ಶೈಕ್ಷಣಿಕ ಹಾಗು ಉದ್ಯೋಗ ನೇಮಕಾತಿಯಲ್ಲಿ ಒದಗಿಸಿದೆ. ಈ ಮೀಸಲಾತಿ ನೀಡಿಕೆಗೆ ಅಳವಡಿಸಿರುವ ಮಾನದಂಡ ಮಾತ್ರ ಮೀಸಲಾತಿ ಪರಿಕಲ್ಪನೆ ಹಾಗೂ ನೈಜ ಉದ್ದೇಶಕ್ಕೆ ವ್ಯತಿರಿಕ್ತವಾಗಿದೆ. ಹಲವು ವಿರೋಧಾಭಾಸಗಳಿಂದ ಕೂಡಿರುವ ಈ ಮೀಸಲಾತಿ ನಿಯಮ ಅರ್ಹರಿಗೆ-ದುರ್ಬಲರಿಗೆ ವ್ಯವಸ್ಥಿತವಾಗಿ ಅವಕಾಶ ನಿರಾಕರಿಸುತ್ತಿದೆ. ವಿಪರ್ಯಾಸ ಎಂದರೆ, ಬಲಾಢ್ಯ ಅನರ್ಹರು ಈ ಹುಚ್ಚು ನೀತಿಯ ದೌರ್ಬಲ್ಯ ಬಳಸಿಕೊಂಡು ಲಾಭ ಹೊಡೆಯುತ್ತಿದ್ದಾರೆ. ಸಮಾನತೆಯ ಆಶಯಕ್ಕೇ ಆಘಾತಕಾರಿಯಾಗಿದೆ ಕನ್ನಡ ಮಾಧ್ಯಮ-ಗ್ರಾಮೀಣ ಮೀಸಲಾತಿ (ಅ)ವ್ಯವಸ್ಥೆ!

ಪೂರ್ಣ ಹತ್ತು ಶೈಕ್ಷಣಿಕ ವರ್ಷ ಶಾಲೆಯಲ್ಲಿ ಪೂರೈಸಿದವರಿಗಷ್ಟೇ ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಮೀಸಲಾತಿ ಎಂಬ ಷರತ್ತೇ ಅನ್ಯಾಯ ಮತ್ತು ಅವಾಸ್ತವಿಕ. ಈಗ ಸರ್ಕಾರ ವಿವಿಧ ಕಾರಣಗಳಿಂದ ಶಾಲೆಗೆ ಸೇರಲಾಗದವರನ್ನು ಹಾಗು ಶಾಲೆ ಬಿಟ್ಟವರನ್ನು ವಿದ್ಯಾಭ್ಯಾಸದೆಡೆ ಆಕರ್ಷಿಸುತ್ತಿದೆ. ಅನೇಕ ರಿಯಾಯಿತಿ ನೀಡಿ ಶಿಕ್ಷಣದ ಅವಕಾಶ ಕಲ್ಪಿಸುತ್ತಿದೆ ಶಿಕ್ಷಣಾರ್ಥಿಗಳ ಸಾಮರ್ಥ್ಯಕ್ಕೆ ತಕ್ಕಂತೆ ಬೇರೆ-ಬೇರೆ ತರಗತಿಗಳಿಗೆ ಸೇರಿಸಿಕೊಳ್ಳಲಾಗುತ್ತಿದೆ. ಇಂಥ ವರಿಗೆ ಗ್ರಾಮೀಣ-ಕನ್ನಡ ಮಾಧ್ಯಮ ಮೀಸಲಾತಿ ಭಾಗ್ಯವಿಲ್ಲ. ಯಾವುದೇ ಸಾಂಪ್ರದಾಯಿಕ ಶಿಕ್ಷಣ ಪಡೆಯದೇ ಬಾಹ್ಯವಾಗಿ ಎಸ್‌ಎಸ್‌ಎಲ್‌ಸಿ ಮುಗಿಸಿದವರಿಗೂ ಸದ್ರಿ ಮೀಸಲಾತಿ ಸಿಗದು. ಇಲ್ಲಿ ಮತ್ತೂ ಒಂದು ಎಡವಟ್ಟಿದೆ. ಹತ್ತು ವರ್ಷದ ಕಲಿಕಾ ಸರಣಿಯಲ್ಲಿ ಒಂದು ವರ್ಷವೇನಾದರೂ ಪಟ್ಟಣ ಅಥವಾ ನಗರದಲ್ಲಿ ವಿದ್ಯಾಭ್ಯಾಸ ಮಾಡಿದರೆ ಗಂಡಾಂತರ ಖಂಡಿತ.

ಇವರೆಲ್ಲ ಸಾಮಾಜಿಕ ನ್ಯಾಯ ತತ್ವದಂತೆ ಮೀಸಲಾತಿ ಪರಿಕಲ್ಪನೆಯ ಕಕ್ಷೆಯಲ್ಲೇ ಇರುವಂಥವರು; ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ಮೀಸಲಾತಿಗೆ ಅಷ್ಟೂ ಹಕ್ಕು-ಯೋಗ್ಯತೆ ಇರುವವರು. ಗ್ರಾಮೀಣ ಪರಿಸರದಲ್ಲಿ ಕನ್ನಡ ಮಾಧ್ಯಮ ಶಿಕ್ಷಣವನ್ನು ಪ್ರತಿ ಹೆಜ್ಜೆಗೂ ಹೋರಾಡುತ್ತ ಮಾಡುವ ದುರ್ಬಲರಿಗೆ ಮೀಸಲಾತಿ ವಂಚಿಸುವ ಅದ್ವಾದಿ ನಿಯಮಗಳ ಸಶಕ್ತ-ಪ್ರಭಾವಿ-ಪ್ರತಿಷ್ಠಿತ 'ಸಂಸ್ಕೃತಿ'ಯ ಮೋಸಗಾರರಿಗೆ ಅನುಕೂಲಕರವಾಗಿರುವುದು ಘೋರವಾಗಿದೆ. ಗ್ರಾಮೀಣ ಅಭ್ಯರ್ಥಿಯೆಂದು ನಿರ್ಧರಿಸಲು ಅಭ್ಯರ್ಥಿಯ ಗ್ರಾಮೀಣ ಹಿನ್ನೆಲೆ, ಸನ್ನಿವೇಶ, ಸಂಸ್ಕೃತಿ ಹಾಗೂ ಸಾಮಾಜಿಕ ಸ್ಥಿತಿಗತಿ ಮಾನದಂಡವಾಗಬೇಕಿತ್ತು, ಆದರೆ ಸರ್ಕಾರಿ ಪ್ರಭೃತಿಗಳು ಮೀಸಲು ನಿಯಮ-ಷರತ್ತು ರೂಪಿಸುವಾಗ ಈ ಸರಳ ಸಾಮಾಜಿಕ ನ್ಯಾಯ ಧರ್ಮವನ್ನೇ ಪಾಲಿಸಿಲ್ಲ, ಬದಲಿಗೆ ಅಭ್ಯರ್ಥಿ ಕಲಿತ ಶಾಲೆಯ ಅಸ್ತಿತ್ವ ಭೌಗೋಳಿಕವಾಗಿ ಪಟ್ಟಣ ಪ್ರದೇಶದಲ್ಲಿಯೋ ಅಥವಾ ಗ್ರಾಮೀಣ ಪರಿಸರದಲ್ಲಿದೆಯೇ ಎಂಬ ವಿಕಟ ವ್ಯಂಗ್ಯ ನಿಯಮವಾಗಿದೆ!

ಅಭ್ಯರ್ಥಿ ಬಾಳಿ-ಬದುಕಿದ ಸ್ಥಳಕ್ಕಿಂತಲೂ ಶಾಲೆಯ ಸ್ಥಾವರ ಸ್ಥಿತಿಗೆ ಪ್ರಾಧಾನ್ಯತೆ ಕೊಡಲಾಗಿದೆ. ಸರ್ಕಾರದ ಮೀಸಲಾತಿ ನಿರ್ಧರಿಸುವಿಕೆ ಎಷ್ಟು ಅನಾಹುತಕಾರಿ ಎಂದರೆ, ಶಾಲೆ-ಹೈಸ್ಕೂಲುಗಳೇ ಇಲ್ಲದ ಕುಗ್ರಾಮದ ಮಕ್ಕಳು ಹಾಸ್ಟೆಲುಗಳಲ್ಲಿ ಉಳಿದು ಪಟ್ಟಣದ ಶಾಲೆಯಲ್ಲಿ ಕಲಿತರೂ ಸಾಕು, ಅಂಥವರಿಗೆ ಸದ್ರಿ ಮೀಸಲಾತಿ ಸಿಗಲಾರದು! ಇದು ಅರ್ಹರಿಗೆ ಮಾಡುವ ಮೋಸವಾದರೆ, ಅನರ್ಹರಿಗೆ ಹಿತ ಮಾಡುವ 'ಷರತ್ತು' ಈ ನಿಯಮದಲ್ಲಡಗಿದೆ. ಸಕಲ ಸೌಲಭ್ಯ, ಆಧುನಿಕ ಸೌಲಭ್ಯವಿರುವ ಖಾಸಗಿ ಶಾಲೆ ಸರ್ಕಾರಿ ದಾಖಲೆ ಪ್ರಕಾರ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟರೆ ಅಲ್ಲಿ ಕಲಿತ ಪಟ್ಟಣ ಪ್ರದೇಶದ ಮುಂದುವರಿದ ಕುಟುಂಬದ ಅಭ್ಯರ್ಥಿ ಸಲೀಸಾಗಿ ಗ್ರಾಮೀಣ ಪ್ರಮಾಣ ಪತ್ರ ಗಿಟ್ಟಿಸುತ್ತಾನೆ. ರಾಜ್ಯದ ಹಲವು ಪ್ರದೇಶದಲ್ಲಿ ಇಂತಹ ನಕಲಿ ಗ್ರಾಮೀಣ ಶಾಲೆಗಳ ಹಾವಳಿ ಜೋರಾಗಿದೆ. ಉತ್ತರ ಕನ್ನಡದ ಎರಡು 'ಗ್ರಾಮೀಣ ಶಾಲೆ'ಗಳ ವಸ್ತುಸ್ಥಿತಿ ನಿದರ್ಶನಗಳು ಈ ಮೀಸಲಾತಿ ಅವಾಂತರಕ್ಕೆ ಸ್ಯಾಂಪಲ್‌ನಂತಿದೆ!

ಕುಮಟಾ ಪಟ್ಟಣದ ಆಯುಷ್ ಆಸ್ಪತ್ರೆಯ ಆವರಣದ ಅಂಚಲ್ಲೇ ಕೊಂಕಣ ಎಜುಕೇಷನ್ ಟ್ರಸ್ಟ್‌ನ ಶಾಲೆಯಿದೆ. ಆಯುಷ್ ಆಸ್ಪತ್ರೆ ಹಾಗು ಶಾಲೆ ಅಕ್ಕ-ಪಕ್ಕದಲ್ಲಿದ್ದರೂ ಸರ್ಕಾರಿ ಸರ್ವೆ ಪ್ರಕಾರ ಆಸ್ಪತ್ರೆ ಕುಮಟಾ ಪುರಸಭೆ ವ್ಯಾಪ್ತಿಗೆ ಬಂದರೆ, ಶಾಲೆ ಕೆಲಭಾಗ ಗ್ರಾಮಪಂಚಾಯ್ತಿ ಪರಿಧಿಯಲ್ಲಿದೆ. ಈ ಖಾಸಗಿ ಶಾಲೆಯಲ್ಲಿ ಕಲಿತರೆ ಗ್ರಾಮೀಣ ಮೀಸಲಾತಿ ಪ್ರೌಢಶಾಲೆ ಸೌಲಭ್ಯ ಖಾತ್ರಿ. ಇದೇ ಕೆಲಭಾಗ ಗ್ರಾಪಂ ಪರಿಸರದಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲದಿರುವುದರಿಂದ ಈ ಊರಿನ ಮಕ್ಕಳೂ ಕುಮಟಾ ಪಟ್ಟಣದ ಪ್ರೌಢಶಾಲೆಗಳಿಗೆ ಹೋಗಬೇಕಾಗಿದೆ. ಇದು ಅನಿವಾರ್ಯ ಆ ಹಳ್ಳಿಯ ಮಕ್ಕಳಿಗೆ. ಗ್ರಾಮೀಣ ಪರಿಸರದಲ್ಲಿ ಅನಾನುಕೂಲತೆ, ಬಡತನ, ಕಷ್ಟ-ನಷ್ಟದ ನಡುವೆ ಬದುಕುತ್ತಿದ್ದರೂ ಈ ಹಳ್ಳಿ ಮಕ್ಕಳು ಗ್ರಾಮೀಣ ಅಭ್ಯರ್ಥಿ ಅನ್ನಿಸಿಕೊಳ್ಳುವುದೇ ಇಲ್ಲ, ಆದರೆ ಕೊಂಕಣ ಶಾಲೆಯಲ್ಲಿ ಕಲಿತ ನಗರದ ಅನುಕೂಲಸ್ಥರ ಕುಡಿಗಳಿಗೆ ಅನಾಯಾಸವಾಗಿ ಗ್ರಾಮೀಣ ಪ್ರಮಾಣಪತ್ರ ಸಿಗುತ್ತದೆ.

ಥೇಟ್ ಇಂಥದ್ದೇ ದುರಂತ ರಾಷ್ಟ್ರೀಯ ಹೆದ್ದಾರಿ 66ರ ಮೇಲಿರುವ 'ಮಿರ್ಜಾನ್' ಏರಿಯಾದಲ್ಲಿದೆ! ಆದಿಚುಂಚನಗಿರಿ ಮಠದ ಸಿಬಿಎಸ್‌ಸಿ ಪಠ್ಯದ ಬೃಹತ್ ಹಾಗು ಭವ್ಯ ಶಾಲಾಕಟ್ಟಡ ಇಲ್ಲಿ ತಲೆ ಎತ್ತಿದೆ. ಶಾಲೆ ಭೌಗೋಳಿಕವಾಗಿ ಗ್ರಾಮೀಣ ಪ್ರದೇಶದಲ್ಲಿದೆ. ಶಾಲೆಗೆ ಬರುವ ಹೆಚ್ಚಿನವರು ಪಟ್ಟಣದ ಉಳ್ಳವರ ಕುಲಕಂಠೀರವರು. ನಗರವಾಸಿಗಳು ಮಿರ್ಜಾನ್‌ಗೆ ಬಂದು ಆದಿಚುಂಚನಗಿರಿ ಸಂಸ್ಥೆಯ ಕೇಂದ್ರೀಯ ಪಠ್ಯದಲ್ಲಿ ಅಧ್ಯಯನ ಮಾಡಿದರೆ ಗ್ರಾಮೀಣರಾಗಿ ಬಿಡುತ್ತಾರೆ.


ಇದೇ ಮಿರ್ಜಾನ ಗ್ರಾಪಂ ವ್ಯಾಪ್ತಿಯ ದುರ್ಗಮ ಹಳ್ಳಿಗಳಾದ ಯಲವಳ್ಳಿ, ಖಂಡಗಾರ-ನಾಗೂರು.... ಮುಂತಾದೆಡೆಯ ಮಕ್ಕಳು ಅನಿವಾರ್ಯ ಕಾರಣಗಳಿಂದ ಕುಮಟಾ ಅಥವಾ ಅಂಕೋಲಾ-ಕಾರವಾರ ಪಟ್ಟಣದ ಶಾಲೆಯಲ್ಲಿ ಕಲಿಯಬೇಕಾಗಿ ಬಂದರೆ ಮೀಸಲಾತಿ ಕಟ್. ಸುಪ್ರಸಿದ್ಧ ಕೊಳಚೆ ಕ್ಷೇತ್ರ ಗೋಕರ್ಣ ಗ್ರಾಮೀಣ ಪ್ರದೇಶದಲ್ಲಿದೆ. ಇಲ್ಲಿಯ ಹಾಲಕ್ಕಿ ಒಕ್ಕಲಿಗ ಬುಡಕಟ್ಟಿನ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕಲಿತು ಗ್ರಾಮೀಣ ಪ್ರಮಾಣ ಪತ್ರ ಪಡೆಯುತ್ತಾರೆ. ಆದರೆ ಇದೇ ಹಳ್ಳಿಯ ಇಂಗ್ಲಿಷ್ ಮಾಧ್ಯಮದ ಸುಸಜ್ಜಿತ ಶಾಲೆಯಲ್ಲಿ ಕಲಿತ ವೇದ ವಿದ್ವಾಂಸರ ಬಲಾಢ್ಯರ ಬಲಾಢ್ಯ ವಿದ್ಯಾರ್ಥಿಗಳ ಸಂಗಡ ಮೀಸಲಾತಿ ಸಂಗ್ರಾಮ ಮಾಡಬೇಕಾಗಿದೆ ಬಡ ಹಾಲಕ್ಕಿ ಹುಡುಗರು! ಇದು ಅಪಾಯಕಾರಿ ಮೀಸಲಾತಿ ನಿಯಮದ ಅಡ್ಡ ಪರಿಣಾಮ.

ರಾಜ್ಯದ ನಗರ-ಪಟ್ಟಣಗಳು ರಾತ್ರಿ ಬೆಳಗಾಗುವುದರಲ್ಲಿ ಉಬ್ಬುತ್ತಿರುವ ಕಾಲಘಟ್ಟವಿದು. ಈ ನಗರ-ಪಟ್ಟಣಗಳ ಉದರದಲ್ಲಿ ಹಳ್ಳಿಗಳೂ ಜೀರ್ಣವಾಗುತ್ತಿವೆ. ಹೀಗೆ ಹಳ್ಳಿಗಳು ಪಟ್ಟಣ ಪಾಲಾಗುತ್ತಲೇ ಗ್ರಾಮೀಣ ವ್ಯಾಖ್ಯಾನದಿಂದ ಹೊರದೂಡಲ್ಪಡುತ್ತಿವೆ. ಗ್ರಾಮ ಪಂಚಾಯ್ತಿ ಒಂದು ಪಟ್ಟಣ ಪಂಚಾಯ್ತಿಯಾಗಿ ಪೌರಾಡಳಿತದ ಕಕ್ಷೆಗೆ ಬರುತ್ತದೆ. ಆಗ ವಿದ್ಯಾರ್ಥಿಗಳಿಗೆ-ಉದ್ಯೋಗಾಕಾಂಕ್ಷಿಗಳಿಗೆ ಸತಾಯಿಸುವ ಮೀಸಲಾತಿ ನಿಯಮ ಅನ್ವಯವಾಗುತ್ತದೆ. ಹೊಸ ಪಟ್ಟಣ ಪಂಚಾಯ್ತಿ ಪರಿಸರದಲ್ಲಿ ಕಲಿತವರು ಮತ್ತು ಕಲಿಯುತ್ತಿರುವವರು ಗ್ರಾಮೀಣ ಮೀಸಲಾತಿಯಿಂದ ವಂಚಿತರಾಗುತ್ತಾರೆ. ಇಲ್ಲಾಗುವ ಬದಲಾವಣೆ ಜನಸಂಖ್ಯೆ ಹೆಚ್ಚಳ ಒಂದೇ. ಆದರೆ ಸಾಮಾಜಿಕ-ಸಾಂಸ್ಕೃತಿಕ-ಆಧುನಿಕ-ಅಭಿವೃದ್ಧಿ ಆಗಿರುವುದಿಲ್ಲ, ಪರಿಸರ ಹಳ್ಳಿಗಿಂತಲೂ ಕಡೆಯಾಗಿರುತ್ತದೆ. ಆದರೆ ಮೀಸಲಾತಿ ಮಾನದಂಡ ನೋಡುವುದು ಜನಸಂಖ್ಯೆ ಹೆಚ್ಚಳ ಒಂದೇ. ಈ ಗ್ರಾಮೀಣ ಚಹರೆಯ ಊರು ಪಟ್ಟಣ ಪ್ರದೇಶವೆಂಬ ವ್ಯಾಖ್ಯಾನದಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತದೆ. ಅರ್ಹರು ಮೀಸಲಾತಿ ಸಿಗದೆ ಬಾಯ್ಬಾಯಿ ಬಡಿದುಕೊಳ್ಳುವ ಪರಿಸ್ಥಿತಿ ಬರುತ್ತದೆ.

ಈಗಿತ್ತಲಾಗಿ ಖಾಸಗಿ ಶಿಕ್ಷಣ ದಂಧೆದಾರರು ಅಂಗಡಿಗಳನ್ನು ಗ್ರಾಮೀಣ ಭಾಗದಲ್ಲಿ ತೆರೆಯುವ ತಂತ್ರಗಾರಿಕೆ ನಡೆಸಿದ್ದಾರೆ. ಸ್ಥಳದ ಅಭಾವ, ಪರಿಸರ ಕಾರಣದ ಜತೆಗೆ ವ್ಯಾವಹಾರಿಕ ಮಸಲತ್ತು ಇದರಲ್ಲಿದೆ. ತಮ್ಮಲ್ಲಿ ಕಲಿತರೆ ಗ್ರಾಮೀಣ ಪ್ರಮಾಣಪತ್ರ ಬೋನಸ್ ರೂಪದಲ್ಲಿ ದಕ್ಕುತ್ತದೆ ಎಂಬ ಪ್ರಚಾರವೂ ಮಾಡುತ್ತಾರೆ. ಈ ಪ್ರಲೋಭನೆಯಿಂದ ದಂಧೆ ವೃದ್ಧಿಯೂ ಕಂಡವರಿದ್ದಾರೆ. ಹಳ್ಳಿಗಳಲ್ಲೀಗ ಅಂತಾರಾಷ್ಟ್ರೀಯ ಸೌಲಭ್ಯ-ಸೌಕರ್ಯ-ಸವಲತ್ತಿನ ರೆಸಿಡೆನ್ಸಿಯಲ್ ಶಾಲೆಗಳೆಂದು ಹೇಳಿಕೊಳ್ಳುವ ಶೈಕ್ಷಣಿಕ ಸಂಕೀರ್ಣಗಳು ಸ್ಥಾಪಿತವಾಗಿವೆ. ಇಲ್ಲಿ ಕಲಿಯುವ ಹೈಟೆಕ್ ನಗರದ ಹಣವಂತರ-ಸಾಮಾಜಿಕವಾಗಿ ಮುಂದುವರಿದವರ ಮಕ್ಕಳಿಗೆ ಗ್ರಾಮೀಣ ಮೀಸಲಾತಿಯ ಪ್ರಯೋಜನ ಸಿಗುತ್ತದೆ. ಆದರೆ ಅದೇ ನಗರದ ಕೊಳಚೆ ಪ್ರದೇಶದ ಸರಕಾರಿ



ಸರ್ಕಾರಿ ಶಾಲಾ ಮಕ್ಕಳು



ಆಂಜನೇಯ- ಸಮಾಜಕಲ್ಯಾಣ ಮ


ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿಯುವ
ಸಮಾನಾಂತರ ಮೀಸಲಾತಿ ಗಗನ ಕುಸುಮವೇ!


ಸಾಮಾನ್ಯ ಸರ್ಕಾರಿ ಶಾಲೆಗಳಲ್ಲಿ ಕಲಿತ 'ನತದೃ
ಮತ್ತು ಹೈಟೆಕ್ ಮಂದಿಯ ರೆಸಿಡೆನ್ಸಿಯಲ್ ಶಾ
ಅಭ್ಯಾಸ ಮಾಡಿದವರನ್ನು ಒಂದೇ ತಕ್ಕಡಿ
ತೂಗುವುದಿದೆಯಲ್ಲ, ಅದು ಘನಘೋರ ಸಾ
ಅನ್ಯಾಯ! ಈ ಎರಡು ವಿದ್ಯಾರ್ಥಿ ಸಮೂಹದ
ಅಸಮಾನತೆ ಸಹಜವಾಗೇ ನೆಲೆ ನಿಂತಿದೆ. ಖಾಸಗಿ ಶಾ
ಕಲಿತವರು ಶೈಕ್ಷಣಿಕ-ಔದ್ಯೋಗಿಕ ಸ್ಪರ್ಧೆಯಲ್ಲಿ ಉ
ಸಾಧನೆ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಕಲಿತ
ಹಳ್ಳಿಗಳ ಮಕ್ಕಳೂ ಸ್ವಂತ ಪ್ರತಿಭೆ-ಪರಿಶ್ರಮದಿಂದ
ಮಾಡಿರಬಹುದು. ಆದರೆ ಈ ಪ್ರಮಾಣ ಕಡಿಮೆ
ಅಂಥವರು ಜಾಗತಿಕರಣದ ಪೈಪೋಟಿ
ಎಡವುತ್ತಿರುವುದು ಎದ್ದು ಕಾಣುವಂತಿದೆ.
ಹೊರಹೊಮ್ಮಲು ಪ್ರೋತ್ಸಾಹ ಇಲ್ಲದಾಗಿದೆ. ಸರಿ
ಸೂರಿಲ್ಲದ; ಶಿಕ್ಷಕರಿದ್ದರೂ ಕರ್ತವ್ಯ ಪ್ರಜ್ಞೆ ಇಲ್ಲ
ಹೆಚ್ಚಿರುವ ಸರಕಾರಿ ಶಾಲೆಗಳ ದುರವಸ್ಥೆ ಹೇಳತೀ
ಸರ್ಕಾರಗಳೇ ನೇಮಿಸಿದ ಆಯೋಗ ಸಮಿತಿಗಳು "
ದೃಢಪಡಿಸಿದೆ. "ಕನ್ನಡ... ಕನ್ನಡ..." ಎಂದು ಅ
ಬೊಬ್ಬಿರಿವವರಿಗೆ ಇದೆಲ್ಲ ಅರ್ಥವೇ ಆಗುತ್ತಿಲ್ಲ, ಪದ
ಆಳುವವರ ಉದಾಸೀನ ಈ ಅಧಃಪತನ ಪರ
ವೇಗವರ್ಧಕದಂತಾಗಿದೆ!!

ಕನ್ನಡ ಶಾಲೆಗಳೆಂದೇ ಜನಜನಿತವಾಗಿದ್ದ ಅ
ಮಾನವಾಗಿದ್ದ ಸರ್ಕಾರಿ ಶಾಲೆಗಳೀಗ ಕಣ್ಮರೆ ಆಗುತ್ತಿರು
ಕಟುವಾಸ್ತವ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ
ಕಲಿತರೆ ಪ್ರಯೋಜನವಿಲ್ಲವೆಂಬ ಭಾವನೆ ಮಡ
ಹೋಗಿದೆ. ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗ
ಪೈಪೋಟಿ ನಡೆಸುವುದರಿಲಿ, ಅಸ್ತಿತ್ವ ಉಳಿಸಿಕೊ
ಪರದಾಡಬೇಕಾಗಿದೆ. ಖಾಸಗಿ ಶಾಲೆಗಳು ಉತ್ತಮ ಫ
ನೀಡುತ್ತಿವೆ. ಉತ್ಕೃಷ್ಟತೆ ಕಾಪಾಡಿಕೊಳ್ಳದಿದ್ದರೆ ನೆ
ಕಳೆದುಕೊಳ್ಳುವ ಭಯ ಖಾಸಗಿಯವರನ್ನು ಸದಾ
ಸ್ಥಿತಿಯಲ್ಲಿ ಇಟ್ಟಿದೆ. ಇದವರ 'ದಂಧೆ' ಸವಾಲಾಗಿದೆ.
ಶಾಲೆಗಳಲ್ಲಿ ಈ ಎಚ್ಚರ-ಕರ್ತವ್ಯ ಪ್ರಜ್ಞೆ ಇಲ್ಲ, 'ಚಲ
ಎಂಬ ಧೋರಣೆ ಎಲ್ಲರನ್ನೂ ಆವರಿಸಿದೆ. ಶಾಲೆಯ
ಮಟ್ಟ ಹೆಚ್ಚಿಸಿಕೊಳ್ಳಬೇಕೆಂಬ ನೈತಿಕ ಒತ್ತಡಕ್ಕಿಂತ
ಹೆಚ್ಚಳಕ್ಕೆ ಮೌಲ್ಯಮಾಪನ ಯಾವ ರೀತಿ ಬ
ಸರ್ಕಾರವನ್ನು ಮಣಿಸಬೇಕೆಂಬ ಕಂತ್ರಿ ತಂತ್ರಗಾರಿಕೆ
ಮಾಸ್ತರ್ ವರ್ಗ ಹೆಚ್ಚು ಸಕ್ರಿಯವಾಗಿರುವುದು ನಾಚಿಕ
ಖಾಸಗಿ ಶಾಲೆಗಳು ರಜಾ ದಿನಗಳಲ್ಲಿ ವಿಶೇಷ
ನಡೆಸಿದರೆ ಸರ್ಕಾರಿ ಶಾಲೆ ಮಾಸ್ತರ್-ಮಾಸ್ತರ್ಣಿ
ರಜೆ ಕಡಿತವಾದದ್ದಕ್ಕೆ ಗೊಣಗುತ್ತಿರುತ್ತಾರೆ. ಇದು ಸ
ಶಾಲೆಯ ಸಾಮರ್ಥ್ಯದ ಅಸಲಿಯತ್ತು!

ಇವತ್ತು ಸರ್ಕಾರಿ ಶಾಲೆಗಳಿಗೆ ದಾಖಲಾಗುತ್ತಿರು
ಬಡತನದ ಅನಿವಾರ್ಯತೆಯವರು ಮಾತ್ರ ಎಂಬಂ
ಕನ್ನಡದ ಪ್ರೀತಿಯಿಂದ-ಅಭಿಮಾನದಿಂದ ಕನ್ನಡ ಮ
ಶಾಲೆ ಸೇರುವವರು ಅತೀ ವಿರಳ. ಕನ್ನಡ ಮಾ
ವಿದ್ಯಾರ್ಥಿಗಳು ಖಾಸಗಿ ಶಾಲೆಯ ಮಕ್ಕಳೊ
ಸಂಘರ್ಷದಲ್ಲಿ ಸೋಲುತ್ತಿದ್ದಾರೆ. ಕನ್ನಡದಲ್ಲಿ ಕಲಿತರ
ವಿದೆ ಎಂಬ ಭರವಸೆ-ಭಾವನೆ ಇಲ್ಲದಾಗಿದೆ. ಕನ
ಕಲಿತರೆ ಉನ್ನತ ಶಿಕ್ಷಣದಲ್ಲಿ-ಉದ್ಯೋಗ ಬೇ
ಅವಕಾಶವಿದೆಯೆಂಬ ವಿಶ್ವಾಸ ಮೂಡಿಸಬೇಕಾಗಿದೆ
ಪ್ರಭೃತಿಗಳು- ಕನ್ನಡ ಗುತ್ತಿಗೆ ಹಿಡಿದಂತೆ ಹಾ
ಓರಾಟಗಾರರು ಮತ್ತು ಆಳುವವರು. ಇಂಥದ
ಸ್ಪರ್ಧಾತ್ಮಕ ಛಲವಿದ್ದರಷ್ಟೇ ಸರ್ಕಾರಿ ಶಾಲೆಗಳು
ಜೀವಕಳೆ ತುಂಬಿಕೊಳ್ಳಲು ಸಾಧ್ಯ!!


ಶಾಮನೂರು ಸಿಡಿಸಿದ ಜಾತಿ ಬಾಂಬ್‌ಗೆ ಬಲಿ ಯಾರು?






ಮಧ್ಯ ಕರ್ನಾಟಕದಲ್ಲಿ ಧಣಿ ಶಾಮನೂರು ...ಶಂಕರಪ್ಪನವರ ಬಾಯಿಂದ ಸಿಡಿದ ಜಾತಿ ಬಾಂಬಿಗೂ, ... ಹೈಕಮಾಂಡಿನಿಂದ ವೇಣುಗೋಪಾಲ್ ಬೆಂಗಳೂರಿಗೆ ...ಬಿಳಿದ ಘಳಿಗೆಗೂ, ಕೆಪಿಸಿಸಿ ಅಧ್ಯಕ್ಷಗಿರಿ ಆಯ್ಕೆ ಕಸರತ್ತು ...ದಿರೋ ಸಂದರ್ಭಕ್ಕೂ, ತೀರಾತೀರಾ ನೆಂಟಸ್ತಿಕೆ ...ೋದರಲ್ಲಿ ಯಾವ ಅನುಮಾನವೂ ಇಲ್ಲ, ರಾಜ್ಯ ಸರ್ಕಾರ ...ರಶೈವ ಜನಾಂಗವನ್ನು ತುಳಿಯುತ್ತಿದೆ. ಹೀಗೇ ...ಂದುವರೆದರೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ...ದ್ಧ ವೀರಶೈವ ಮಹಾಸಭಾದಿಂದ ಪ್ರತಿಭಟನೆ ...ಬೇಕಾಗುತ್ತೆ ಎಂಬ ಶಾಮನೂರರ ಮಾತುಗಳು ರಾಜ್ಯ ...ಕಾರಣದಲ್ಲಿ ಸಣ್ಣ ಚರ್ಚೆಯನ್ನು ಹುಟ್ಟುಹಾಕಿದೆ.

ಹಾಗೆ ನೋಡಿದರೆ, ಶಾಮನೂರು ಶಿವಶಂಕರಪ್ಪನವರಿಗೆ ...ರಾಮಯ್ಯನ ಮೇಲೆ ಅದೆಂತದ್ದೇ ಒಳಮುನಿಸಿದ್ದರೂ ... ಮಗನೇ ಮಂತ್ರಿಯಾಗಿರುವ ಸರ್ಕಾರದ ಮೇಲೆ ...ಕಾರುವ ಚಾನ್ಸು ತುಂಬಾ ಕಮ್ಮಿ. 'ತ್ವಾಟ'ದ ಖಾತೆಯಿಂದ ...ಮನೂರರನ್ನು ಸಿದ್ದರಾಮಯ್ಯ ಕೆಳಗಿಳಿಸಿದ ಘಳಿಗೆಯಲ್ಲು ...ೋಗ್ಯಯ್ಯಾ ಸರ್ಕಾರದ ಲಡಾಸಿ ಇನ್ನೋವಾ ಕಾರ್‌ನಲ್ಲಿ ...ಡಿದ್ದ್ವೀನು, ಇನ್ಮುಂದೆ ಮೊಮ್ಮಕ್ಳು ...ಟ್ ಕೊಡಿಸಿರೋ ಬೆಂಜ್ ಕಾರಲ್ಲಿ ...ತ್ತಾಡ್ತೀನಿ" ಅಂತ ತುಂಬಾ ನಿರ್ಲಿಪ್ತ ...ಮಾಧಾನ ಹೊರಚೆಲ್ಲಿದ್ದರೇ ವಿನಃ ...ನಿವಾಸ್ ಪ್ರಸಾದ್, ಎಸ್ಸೆಂಕೆ ಥರಾ ...ರಾ ಮುಜುಗರದ ಸನ್ನಿವೇಶ ...ಟ್ಟಿಸಿರಲಿಲ್ಲ. ತನಗೆ ಮಂತ್ರಿಗಿರಿ ...ದರು, ಮಗನಿಗೆ ಸಿಕ್ಕಿತಲ್ಲಾ ಅನ್ನೋ ... ಸಮಾಧಾನ ಅವರನ್ನು ಆ ...ಗೆಯಲ್ಲಿ ಸಂತೈಸಿತ್ತು. ಆದರೆ ...ದ್ರಮ್ಮನ ಕಾಲದಿಂದಲೂ ಪಕ್ಷಕ್ಕಾಗಿ ತನ್ನನ್ನು ಮತ್ತು ... ಕುಟುಂಬವನ್ನು ಸವೆಸಿಕೊಂಡು ಬಂದಿದ್ದಕ್ಕೆ ಈ ಕೆಲಸಕ್ಕೆ ...ರದ ಖಾತೆಗಳ ಹೊಣೆ ಸಮವಲ್ಲ ಅನ್ನೋ ಕೊರಗು ...ವಣಗೆರೆ ಧಣಿಗಳ ಅಂತರ್ಯದಲ್ಲಿ ಇದ್ದೇ ಇತ್ತು. ...13ರಲ್ಲಿ ಸಿಎಂ ಕುರ್ಚಿಗೆ ಕರ್ಚೀಫು ಹಾಕಲು ಹೆಣಗಾಡಿ ...ೀತಿದ್ದ ಕಾಂಗ್ರೈ ಕುಬೇರನಿಗೆ ಜೀವಮಾನದಲ್ಲಿ ...ಮ್ಮೆಯಾದರೂ ಸಿಎಂ ಆಗಬೇಕು ಅಥವಾ ಕೆಪಿಸಿಸಿ ...ಕ್ಕಾಣಿಯನ್ನಾದರು ಹಿಡಿಯ ...ಬೇಕೆನ್ನುವ ಆಸೆ ಇದೆ. ಸಿಎಂ ಆಗುವ ...ಸ್ಸಂತೂ ಕ್ಷೀಣವಾಗಿದೆ, ಕಡೇಪಕ್ಷ ...ಪಿಸಿ ಅಧ್ಯಕ್ಷಗಾದಿ ದಕ್ಕಿದರೆ ತನ್ನ ...ಕದಾಸೆ ಈಡೇರಿದ ಜೊತೆಗೆ ಮಕ್ಕಳ ...ಜಕೀಯ ಭವಿಷ್ಯವನ್ನೂ ಗಟ್ಟಿ ...ಡಬಹುದೆನ್ನುವ ಲೆಕ್ಕಾಚಾರವೇ ...ತ್ತಿನ ಸಾಮೂಹಿಕ ವಿವಾಹದಲ್ಲಿ ...ಮನೂರು ಧಣಿಗಳು ಹಾಗೆ ...ತನಾಡಿದ್ದರ ಹಿಂದಿನ ಹಿಕಮತ್ತು!






...ಪಿಸಿಸಿ ಕುರ್ಚಿ ಮೇಲೆ ಕಣ್ಣು

...ಶಾಮನೂರು ಶಿವಶಂಕರಪ್ಪ ಕಾಂಗ್ರೆಸ್ ಕಟ್ಟಾಳು ...ನ್ನೋದರ ಜೊತೆಗೆ ಅವರು ಅಖಿಲ ಭಾರತ ವೀರಶೈವ ...ಹಾಸಭಾದ ಅಧ್ಯಕ್ಷರೂ ಹೌದು. ಹಾಗಾಗಿ ತಮ್ಮ ...ಂಗದ ಹಿತದೃಷ್ಟಿಯಿಂದ ಹಾಗೆ ಮಾತನಾಡಿದ್ದಾರೆ ...ತ ವಿಷಯವನ್ನು ತಳ್ಳಿ ಹಾಕಲಿಕ್ಕೆ ಸಾಧ್ಯವಿಲ್ಲ. ಯಾಕೆಂದರೆ ...ಗಳ ಮಾತಿನಲ್ಲಿ ಜಾತಿ ಮೇಲಿನ ಕಾಳಜಿಗಿಂತ ಜಾತಿ ...ಕಾರಣದ ವಾಸನೆಯೇ ಗಾಢವಾಗಿತ್ತು. ದಾವಣಗೆರೆಯ ...ಬಕಾ ಮಂದಿರದಲ್ಲಿ ಮೇ 7ರಂದು ವೀರಶೈವ ...ಕಮಸಾಲಿ ಸಮಾಜ ಹಮ್ಮಿಕೊಂಡಿದ್ದ ಸಾಮೂಹಿಕ ...ಹ ಸಮಾರಂಭವನ್ನು ವೇದಿಕೆಯಾಗಿ ಬಳಸಿಕೊಂಡ ...ಶಂಕರಪ್ಪನವರು "ರಾಜ್ಯ ಸರ್ಕಾರ ವೀರಶೈವ ...ಂಗವನ್ನು ತುಳಿಯುತ್ತಿದೆ" ಅಂತ ಆರೋಪಿಸಿದ್ದಲ್ಲದೆ ...ಜ್ಯದಲ್ಲಿ ಶೇ.16 ರಿಂದ 17ರಷ್ಟಿರುವ ವೀರಶೈವ ...ಗಾಯತ ಸಮುದಾಯವನ್ನು ರಾಜ್ಯ ಸರ್ಕಾರದ ಜಾತಿಗಣತಿಯಲ್ಲಿ ಕೇವಲ ಶೇ.5-6ರಷ್ಟು ಮಾತ್ರ ಎಂದು ತೋರಿಸಿದ್ದಾರೆ", "ಕುರಿಗಳು ಸತ್ತರೆ 10 ಸಾವಿರ ಪರಿಹಾರ ನೀಡುವ ಸರ್ಕಾರ ಇಂಥಾ ಸರಳ ವಿವಾಹಗಳಿಗೆ ಬರೀ 5 ಸಾವಿರ ನೀಡುತ್ತೆ" ಎಂದು ಸಣ್ಣ ಜಾತಿ ಸಮೀಕರಣವನ್ನೂ ಅರ್ಥ ತೆರೆದಿಟ್ಟಿದ್ದರು. ರಾಜ್ಯ ರಾಜಕಾರಣದ ಜಾತಿ ಸುಳಿಯನ್ನು ಅರ್ಥ ಮಾಡಿಕೊಂಡ ಎಂತವರಿಗೇ ಆದರು ಶಿವಶಂಕರಪ್ಪನವರ ಮಾತುಗಳು ಕುರುಬ ಜನಾಂಗದ ಸಿದ್ದರಾಮಯ್ಯನವರಿಗೆ ಏನು ಸಂದೇಶ ಕಳುಹಿಸುತ್ತಿವೆ ಅನ್ನೋದು ಸ್ಪಷ್ಟವಾಗಿ ಅರ್ಥವಾಗಿ ಬಿಡುತ್ತವೆ.


ಅಷ್ಟಕ್ಕೂ ಈ ಮಾತುಗಳು ಶಾಮನೂರು ಧಣಿಯಿಂದ ಅಕಸ್ಮಾತ್ತಾಗಿ ಹೊರಬಿದ್ದದ್ದಲ್ಲ. ಪರಿಸ್ಥಿತಿಗಳ ಅನುಕೂಲಗಳನ್ನೆಲ್ಲ ಲೆಕ್ಕ ಹಾಕಿಯೇ ಸಮಯ ನೋಡಿ ಬಾಣವನ್ನು ಚಿಮ್ಮಿಸಿದಂತಿದೆ. ಒಂದುಕಡೆ, ಕಾಂಗ್ರೆಸ್ ಈಗ 'ಸೀನಿಯರ್-ಫೋಬಿಯಾ' ಎದುರಿಸುತ್ತಿದೆ. ಹಿರಿಯ ಕಾಂಗ್ರೈಗಳು ಅನಿಸಿಕೊಂಡವರು ಒಬ್ಬೊಬ್ಬರಾಗಿ ಕಾಂಗ್ರೆಸ್‌ನಿಂದ ದೂರ ಸರಿಯುತ್ತಿದ್ದಾರೆ. ಶ್ರೀನಿವಾಸ್ ಪ್ರಸಾದ್, ಎಸ್ಸೆಂ ಕೃಷ್ಣ, ಎಚ್. ವಿಶ್ವನಾಥ್ ಹೀಗೆ ಹಲವರನ್ನು ಕಾಂಗ್ರೆಸ್ ಕಳೆದುಕೊಂಡಿದೆ ಅಥವಾ ಕಳೆದುಕೊಳ್ಳುವ ಹಾದಿಯಲ್ಲಿದೆ. ಅವರಿಂದ ಪಕ್ಷಕ್ಕೆ ಭಾರೀ ಲುಕ್ಸಾನೇನೂ ಇಲ್ಲ ಎಂಬ ರಾಜಕಾರಣದ ಸಮಾಧಾನಕ್ಕೆ ಕಾಂಗ್ರೆಸ್ ಅಂಟಿಕೊಳ್ಳಬಹುದಾದರೂ, ಮುಂದೊಂದು ವರ್ಷದಲ್ಲಿ ಸಾರ್ವತ್ರಿಕ ಚುನಾವಣೆ ಎದುರಿಸುವ ಸನ್ನಿವೇಶದಲ್ಲಿ ಈ ಮೈನಸ್‌ಗಳು ಪಕ್ಷದ ಆತ್ಮವಿಶ್ವಾಸದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರಲ್ಲಿ ಅನುಮಾನವಿಲ್ಲ. ಅದು ಪಕ್ಷದ ಹೈಕಮಾಂಡ್‌ಗೆ ಗೊತ್ತಿರುವುದರಿಂದಲೇ ಈಗಾಗಲೇ ಪಾರ್ಟಿಯಿಂದ ಒಂದು ಕಾಲು ಹೊರಗಿಟ್ಟು ಗೌಡರ ಕೈ ಕುಲುಕುತ್ತಿರುವ ಎಚ್.ವಿಶ್ವನಾಥ್‌ರನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನ ಪಡುತ್ತಿರೋದು. ಕರ್ನಾಟಕಕ್ಕೆ ಧಾವಿಸುತ್ತಿದ್ದಂತೆಯೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹೊತ್ತ ಕೆ.ಸಿ. ವೇಣುಗೋಪಾಲ್, ವಿಶ್ವನಾಥ್‌ರನ್ನು ಕರೆಸಿಕೊಂಡು ಮಾತನಾಡಿದ್ದೇ ಇದಕ್ಕೆ ಸಾಕ್ಷಿ. ಇಂಥಾ ಸಂದರ್ಭದಲ್ಲಿ ಮತ್ತೊಬ್ಬ ಹಿರಿಯ ಕಾಂಗ್ರೆಸ್ಸಿಗ, ಅದರಲ್ಲೂ ಇಷ್ಟು ವರ್ಷಗಳ ಕಾಲ ಇಡೀ ರಾಜ್ಯ ಕಾಂಗ್ರೆಸ್‌ಗೆ ಹಣದ ಹೊಳೆ ಹರಿಸುವ ಖಜಾಂಚಿಯಾಗಿದ್ದ ಶಾಮನೂರರು ಕಾಂಗ್ರೆಸ್‌ನ ವಿರುದ್ಧವೇ ಬಂಡೇಳುತ್ತೇನೆಂದರೆ ಪಕ್ಷದ ಹೈಕಮಾಂಡ್ ಖಂಡಿತವಾಗಿಯೂ ತನ್ನನ್ನು ಗಂಭೀರವಾಗಿ ಪರಿಗಣಿಸುತ್ತೆ ಅನ್ನೋದು ಶಾಮನೂರು ಶಿವಶಂಕರಪ್ಪನವರ ಲೆಕ್ಕಾಚಾರ.

ಇನ್ನೊಂದು ಕಡೆ, ಎದುರಾಳಿ ಬಿಜೆಪಿ ಈಗ ಲಿಂಗಾಯತ ಮತಗಳ ಮೇಲೆಯೇ ವಿಪರೀತ ಅವಲಂಬನೆ ಇಟ್ಟುಕೊಂಡಿದ್ದು ಅದಕ್ಕೋಸ್ಕರ ಒಲ್ಲದ ಮನಸ್ಸಿಂದಲೇ ಯಡಿಯೂರಪ್ಪರನ್ನು ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಕೂರಿಸಿದೆ. ಆದರೆ ಇದೀಗ ಕೇಸರಿ ಕಿತಾಪತಿಯ ಕಾರಣದಿಂದ ಯಡ್ಡಿ ಮತ್ತು ಈಶ್ವರಪ್ಪನ ನಡುವೆ ಬೆಂಕಿ ಹತ್ತಿಕೊಂಡು ಲಿಂಗಾಯತ ಮತಗಳು ಅಕ್ಷರಶಃ ಗೊಂದಲಕ್ಕೆ ಈಡಾಗಿವೆ. ಬಿಜೆಪಿಗೆ ಮತ ಹಾಕಿದರೂ ಆರೆಸ್ಸೆಸ್ ಕುತಂತ್ರದಿಂದ ಯಡ್ಡಿ ಮುಖ್ಯಮಂತ್ರಿ ಆಗುತ್ತಾರೆ ಎನ್ನುವ ನಂಬಿಕೆ ಇಲ್ಲದಂತ ವಾತಾವರಣ ಸೃಷ್ಟಿಯಾಗಿದೆ. ಯಾಕೆಂದರೆ ಉತ್ತರ ಪ್ರದೇಶದಲ್ಲಿ ಸಂಘ ಪ್ರಚಾರಕ ಆದಿತ್ಯ ಯೋಗಿಯನ್ನು ಹೇರಿದಂತೆ, ಬಹುಮತ ಸಿಕ್ಕಮೇಲೆ ಇಲ್ಲೂ ಇನ್ಯಾರೋ ಕೇಸರಿ ಮನುಷ್ಯನನ್ನು ಪ್ರತಿಷ್ಠಾಪಿಸಿಬಿಡುವ ಸಂಭವವೇ ಹೆಚ್ಚು. ಅದೇ ಕಾರಣಕ್ಕೆ ಈಶ್ವರಪ್ಪನನ್ನು ಮುಂದೆ ಬಿಟ್ಟು ಈಗಿನಿಂದಲೇ ಯಡ್ಡಿಯನ್ನು ಮೆತ್ತಗಾಗಿಸಲು ಆರೆಸ್ಸೆಸ್ ರಹಸ್ಯ ಕಾರ್ಯಾಚರಣೆ ನಡೆಸುತ್ತಿದೆ. ಇಂಥಾ ಸಂದರ್ಭದಲ್ಲಿ ಯಡ್ಡಿಯ ಮುಖ ನೋಡಿ ಮತ ಹಾಕಿ ವೇಸ್ಟ್ ಮಾಡಿಕೊಳ್ಳಬೇಕಾ ಎಂಬ ಗೊಂದಲ ಲಿಂಗಾಯತ ಸಮುದಾಯದಲ್ಲಿ ಕಾಣಿಸುತ್ತಿದೆ. ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳಬೇಕೆಂದರೆ ಕಾಂಗ್ರೆಸ್ ಪಾರ್ಟಿ ಲಿಂಗಾಯತ ಕೋಮಿಗೆ ಮಣೆ ಹಾಕಲೇಬೇಕು. ಅದೇ ಕಾರಣಕ್ಕೆ ಡಿಕೇಶಿ, ಕೆ.ಎಚ್.ಮುನಿಯಪ್ಪರನ್ನೂ ಓವರ್‌ಟೇಕ್ ಮಾಡಿ ಎಂ.ಬಿ.ಪಾಟೀಲ್, ಎಸ್.ಆರ್.ಪಾಟೀಲ್‌ರಂತಹ ಲಿಂಗ ವಂತರ ಹೆಸರುಗಳು ಕೇಳಿಬರುತ್ತಿವೆ. ಇಂಥಾ ಸಂದರ್ಭದಲ್ಲಿ ವೀರಶೈವ ಮಹಾಸಭಾ ಅಧ್ಯಕ್ಷನಾದ ತನ್ನನ್ನೂ ಹೈಕಮಾಂಡ್ ಪರಿಗಣಿಸಲಿ ಎಂಬ ಕಾರಣಕ್ಕೆ ಶಾಮನೂರು ಧಣಿಗಳು ಜಾತಿಯ ಟ್ರಂಪ್‌ಕಾರ್ಡ್ ತೇಲಿಬಿಟ್ಟಿದ್ದಾರೆ.



ಯಡ್ಡಿಗೆ ಅನುಕೂಲವಾ?

ಕೆಪಿಸಿಸಿ ಅಧ್ಯಕ್ಷ ಕುರ್ಚಿ ಮೇಲೆ ಕಣ್ಣಿಟ್ಟೇ ಶಾಮನೂರು ಧಣಿಗಳು ಇಂಥಾ ಮಾತಾಡಿದ್ದಾರೆ ಅನ್ನೋದರಲ್ಲಿ ಹೆಚ್ಚೇನೂ ಗೊಂದಲವಿಲ್ಲ. ಆದರೆ ಚುನಾವಣೆಯ ಹೊಸ್ತಿಲಲ್ಲಿರುವ ಈ ಹೊತ್ತಿನಲ್ಲಿ ಇಂಥಾ ಹೇಳಿಕೆ ಎದುರಾಳಿ ಬಿಜೆಪಿಗೆ ಅನುಕೂಲವಾಗುವ, ಅದರಲ್ಲೂ ಮುಖ್ಯವಾಗಿ ಯಡ್ಡಿಗೆ ಪ್ಲಸ್ ಪಾಯಿಂಟ್ ಆಗುವ ಅಪಾಯವೂ ಉಂಟು. ಈಗಾಗಲೇ ಬಿಜೆಪಿಯೊಳಗೆ ಯಡ್ಡಿಯನ್ನು ಸೈಡ್‌ಲೈನ್‌ಗೆ ಸರಿಸುವ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಆರೆಸ್ಸೆಸ್ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಅದರ ಕೋಮು ಕಿತಾಪತಿ ಹೆಚ್ಚೆಂದರೆ ಕರಾವಳಿ ಉದ್ದಗಲಕ್ಕೆ ನಡೆಯಬಹುದೆ ವಿನಾಃ ಉಳಿಕೆ ಕರ್ನಾಟಕದಲ್ಲಿ ಬಿಜೆಪಿಗೆ ಲಿಂಗಾಯತ ಮತಗಳೇ ಅಧಿಕಾರದ ಸೋಪಾನ. ಆ ಓಟ್ ಬ್ಯಾಂಕ್ ಕಳೆದುಕೊಳ್ಳಲು ಬಿಜೆಪಿಗೆ ಸುತರಾಂ ಇಷ್ಟವಿಲ್ಲ. ಇಂಥಾ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಲಿಂಗಾಯತರನ್ನು ತುಳಿಯುತ್ತಿದೆ ಅಂತ ಅದೇ ಪಾರ್ಟಿಯ ಹಿರಿಯ ರಾಜಕಾರಣಿ ಹೇಳಿಬಿಟ್ಟರೆ ಆಗ ಬಿಜೆಪಿ ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳುವ ಸಲುವಾಗಿ ತಾನು ಲಿಂಗಾಯತರಿಗೆ ಪ್ರಾಮುಖ್ಯತೆ ಕೊಡುತ್ತಿದ್ದೇನೆ ಅಂತ ಒತ್ತುಕೊಟ್ಟು ತೋರಿಸಿಕೊಳ್ಳಬೇಕಾಗುತ್ತೆ. ಅರ್ಥಾತ್ ಯಡ್ಡಿಗೆ ತಮ್ಮ ಫುಲ್ ಸಪೋರ್ಟ್ ಇದೆ, ಅವರಿಗೆ ಯಾವ ತಕರಾರೂ ಇಲ್ಲ ಎಂದು ತೋರಿಸಿಕೊಳ್ಳಲು ಬಿಜೆಪಿ ಮುಂದಾಗುತ್ತೆ. ಇಲ್ಲದೆಹೋದರೆ, ಇಂಥದ್ದೇ ಗೊಂದಲದಿಂದಾಗಿ ಲಿಂಗಾಯತ ಪ್ರಾಬಲ್ಯವಿರುವ ನಂಜನಗೂಡು ಮತ್ತು ಗುಂಡ್ಲುಪೇಟೆ ಉಪಚುನಾವಣೆಗಳಲ್ಲಿ ಕೈಸುಟ್ಟುಕೊಂಡ ಪಾಠ ಬಿಜೆಪಿಗೆ ಪುನರಾವರ್ತನೆಯಾಗಲಿದೆ!



ಒಂದೊಮ್ಮೆ ಲಿಂಗವಂತ ವ್ಯಕ್ತಿಯನ್ನೇ ಕೆಪಿಸಿಸಿ ಗಾದಿಯಲ್ಲಿ ಕೂರಿಸಿದಾಗಲೂ ಬಿಜೆಪಿಯೊಳಗೆ ಯಡ್ಡಿಗೆ ಇನ್ನಿಲ್ಲದ ಇಂಪಾರ್ಟೆನ್ಸ್ ಬಂದುಬಿಡುತ್ತೆ. ಯಾಕೆಂದರೆ ತಮಗೆ ಅಧಿಕಾರದ ದಾರಿ ತೋರಿಸುವ ಲಿಂಗಾಯತ ಮತಗಳು ವಿಭಜನೆಯಾಗದಂತೆ ತಡೆಯಬೇಕೆಂದರೆ ಯಡ್ಡಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುವುದು ಆಗ ಬಿಜೆಪಿಗೆ ಅನಿವಾರ್ಯವಾಗುತ್ತದೆ. ಈಶ್ವರಪ್ಪನನ್ನೂ ತತ್ಕಾಲಕ್ಕೆ ತೆಪ್ಪಗಿರಿಸ ಬೇಕಾಗುತ್ತದೆ. ಈಗಾಗಲೇ ಶಾಮನೂರು ಶಿವಶಂಕರಪ್ಪ ಹೀಗೆ ಹೇಳಿರುವುದಕ್ಕೆ ಉಪ್ಪು-ಹುಳಿ-ಖಾರ ಬೆರೆಸಿ ಲಿಂಗಾಯತರ ಒಳಿತಿಗೆ ಯಡ್ಡಿಯೇ ಗುಡ್ಡು, ಬಿಜೆಪಿಯೇ ಬೆಸ್ಟು ಎನ್ನುವ ಹರಟೆಗಳನ್ನು ವ್ಯವಸ್ಥಿತವಾಗಿ ಹರಡಿಸಲಾಗುತ್ತಿದೆ. ಹಾಗೆಯೇ ಒಂದು ಹೆಜ್ಜೆ ಮುಂದೆಹೋಗಿ ಶಾಮನೂರು ಶಿವಶಂಕರಪ್ಪನವರು ತಮ್ಮ ಖಾನ್‌ದಾನ್ ಸಮೇತ ಬಿಜೆಪಿ ಸೇರಿಕೊಳ್ಳಲು ಸಜ್ಜಾಗಿದ್ದಾರೆ, ಅದಕ್ಕೇ ಕಾಂಗ್ರೆಸ್ ಮೇಲೆಯೇ ಪ್ರಹಾರಕ್ಕೆ ಮುಂದಾಗಿದ್ದಾರೆ ಎಂಬರ್ಥದ ಸುಳ್ಳುಗಳನ್ನೂ ಗಾಳಿಗೆ ತೂರಲಾಗುತ್ತಿದೆ. ಶಾಮನೂರು ಫ್ಯಾಮಿಲಿಯ ಕಾಂಗ್ರೆಸ್ ಪಕ್ಷನಿಷ್ಠೆ ಗಮನಿಸಿದವರಿಗೆ ಇದೆಲ್ಲಾ ಎಂಥಾ ಬೋಗಸ್ ಸುದ್ದಿ ಅನ್ನೋದು ಗೊತ್ತಾಗುತ್ತ ಆದರೆ 'ಬ್ರೇಕಿಂಗ್ ನ್ಯೂಸ್'ನ ರೋಚಕ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ಜನ ಇಂಥಾ ಸುದ್ದಿಗಳಿಂದ ದಿಕ್ಕುತಪ್ಪಲು ಬಹಳ ಶ್ರಮವೇನೂ ಬೇಕಾಗಿಲ್ಲ. ಇದನ್ನು ಕಾಂಗ್ರೆಸ್ ಮತ್ತು ಲಿಂಗವಂತ ಕೈ ಲೀಡರುಗಳು ಅರ್ಥ ಮಾಡಿಕೊಳ್ಳಬೇಕಿದೆ.

■ ಟಿ.ಎನ್. ಷಣ್ಮುಖ

...4 ⏮


...ಈಗಿನ ಎಡಬಿಡಂಗಿ ಗ್ರಾಮೀಣ ಮೀಸಲಾತಿ ...ಾದಿನ ಮಣ್ಣಿನ ಮಕ್ಕಳನ್ನು ಹತಾಶರಾಗಿಸಿಬಿಟ್ಟಿದೆ. ...ದ ಕಾಲಘಟ್ಟದಲ್ಲಿ ಗ್ರಾಮೀಣ ಮತ್ತು ಪಟ್ಟಣದ ...ದ ತಾರತಮ್ಯಕ್ಕಿಂತಲೂ ಸರ್ಕಾರಿ-ಖಾಸಗಿ ಶಾಲೆಗಳ ...ರ ಅಗಾಧವಾಗುತ್ತಿದೆ. ಕನ್ನಡದಲ್ಲಿ ಕಲಿತವರು ಇಂಗ್ಲಿಷ್ ...ಮಾಧ್ಯಮದವರ ಮುಂದೆ ಮಂಕಾಗುತ್ತಿದ್ದಾರೆ. ಒಂದೆಡೆ ... ಮತ್ತೊಂದೆಡೆ ಸಿಗಬೇಕಾದ ಮೀಸಲಾತಿ-ಸೌಲಭ್ಯ ... ಇಂಗ್ಲಿಷ್‌ನ ಪ್ರತಿಸ್ಪರ್ಧಿಗಳ ಪಾಲಾಗುತ್ತಿರುವ ಹತಾಶೆ. ...ೀಣ ಮೀಸಲಾತಿ ಎಂಬುದು ಗ್ರಾಮೀಣ ಭಾಗದಲ್ಲಿ ... ಬೆಳೆದವರಿಗೆ ಪಂಚಾಗುತ್ತಿದೆ. ಅಂಥ ಅವೈಜ್ಞಾನಿಕ-...ಕ ನ್ಯಾಯ ವಿರೋಧಿ ನಿಯಮವದು. ಪಟ್ಟಣದ ... ಬಡವರಿಗೂ ಇದು ಗಂಡಾಂತರಕಾರಿ. ಹೈಟೆಕ್ ...ಯಲ್ಲಿ ಕಲಿತವರಷ್ಟೇ ಗ್ರಾಮೀಣ ಮೀಸಲಾತಿ ಲೀಲಾಜಾಲವಾಗಿ ನುಂಗುತ್ತಿದ್ದಾರೆ. ಕನ್ನಡ ಮಾಧ್ಯಮ ಮೀಸಲಾತಿಯಂತೂ ಸಮಾನತೆಗೆ ಸಹಕಾರಿ ಅಲ್ಲವೇ ಅಲ್ಲ. ಇದರ ಪ್ರಮಾಣವೂ ಗೌಣವೇ.

ಕನ್ನಡ ಮಾಧ್ಯಮದತ್ತ ವಿದ್ಯಾರ್ಥಿಗಳನ್ನು- ಪಾಲಕರನ್ನು ಆಕರ್ಷಿಸಲು ಸರ್ಕಾರ ಮೀಸಲಾತಿ ನೀತಿಯಲ್ಲಿನ ಲೋಪ-ದೋಷ ಸರಿಪಡಿಸಲು ಆಮೂಲಾಗ್ರ ಬದಲಾವಣೆ ತರಬೇಕಾಗಿದೆ. ಸರ್ಕಾರಿ ಶಾಲೆಗಳಲ್ಲಿ ವಿಶ್ವಾಸಾರ್ಹತೆ, ಲವಲವಿಕೆ, ಬೆಂಬಲ ಇಲ್ಲದಿದ್ದರೆ ಎಷ್ಟೇ ಆರ್ಥಿಕ ಸಂಕಷ್ಟವಿದ್ದರೂ ಸಾಲ-ಸೂಲ ಮಾಡಿಯಾದರೂ ಖಾಸಗಿ ಶಾಲೆಗಳತ್ತಲೇ ಗುಳೆ ಹೋಗುತ್ತಾರೆಂಬ ವಾಸ್ತವ ಸರ್ಕಾರಿ ಪಂಡಿತರಿಗೆ ಅರ್ಥವಾಗಬೇಕಿದೆ. ಕಾನೂನಿನ ತೊಡಕಿನಿಂದಾಗಿ ಕನ್ನಡವನ್ನು ಕಡ್ಡಾಯ ಶಿಕ್ಷಣ ಮಾಧ್ಯಮವಾಗಿಸಲು ಸದ್ಯಕ್ಕಂತೂ ಸಾಧ್ಯವಿಲ್ಲ, ಆದರೆ ಕನ್ನಡದಲ್ಲಿ ಕಲಿಯುವವರಿಗೆ ಹೆಚ್ಚಿನ ಪ್ರೋತ್ಸಾಹ-ಪ್ರಾಶಸ್ತ್ಯ ಕೊಡಲೇನೂ ಅಡ್ಡಿಯಿಲ್ಲ.

ಈಗ ಜರೂರಾಗಿ ಆಗಬೇಕಿರುವುದು ಕನ್ನಡ ಮಾಧ್ಯಮ ಮೀಸಲಾತಿ ಮತ್ತು ಗ್ರಾಮೀಣ ಮೀಸಲಾತಿ ಸೇರಿಸಿ ಅರ್ಹರಿಗೆ ಅನುಕೂಲವಾಗುವಂಥ ನೀತಿ, ನಿಯಮ ರೂಪಿಸುವುದಾಗಿದೆ. ಭರ್ತಿ ಹತ್ತು ಶೈಕ್ಷಣಿಕ ವರ್ಷಗಳ ಅಧ್ಯಯನದ ಬದಲಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಪಾಸಾದವರಿಗೆ ಕನಿಷ್ಠ ಶೇಕಡಾ 20 ಅಥವಾ ಅದಕ್ಕಿಂತ ಹೆಚ್ಚಿನ ಸಮಾನಾಂತರ ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ನೀಡಲು ಯೋಚಿಸಬೇಕಾಗಿದೆ. ಇದರಿಂದ ಗ್ರಾಮೀಣ ಹಾಗು ಪಟ್ಟಣ ಎರಡೂ ಕಡೆಯ ಬಡ-ಅಸಹಾಯಕರಿಗೆ ನೆರವಾಗಲಿದೆ. ಭೌಗೋಳಿಕ ಕಾರಣವೊಡ್ಡಿ ಗ್ರಾಮೀಣ ಮೀಸಲಾತಿಗೆ ಕನ್ನ ಹಾಕುವವರಿಗೆ ಅಂಕುಶ ಈ ನಿಯಮದಿಂದ ಬೀಳುತ್ತದೆ. ಭಾಷೆಯ ಮೇಲಿನ ಅದಮ್ಯ ಪ್ರೀತಿಯಿಂದ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ಹೊರನಾಡ ಕನ್ನಡಿಗರಿಗೂ ಈ ಮೀಸಲಾತಿ ಸೌಲಭ್ಯ ಸಿಗುವಂತಾಗಬೇಕು. ರಾಜ್ಯ ಕೋಟಾದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯಲು ಕನಿಷ್ಠ 7 ವರ್ಷ ಕರ್ನಾಟಕದಲ್ಲಿ ಕಲಿತಿರಬೇಕೆಂಬ ಗೊಂದಲದ ನಿಯಮದಿಂದಲೂ ವಿನಾಯತಿ ಹೊರನಾಡ ಕನ್ನಡಿಗರಿಗೆ ನೀಡಬೇಕಿದೆ. ಇದೆಲ್ಲ ಈಗಿನ ಎಡವಟ್ಟು ಕನ್ನಡ ಮಾಧ್ಯಮ-ಗ್ರಾಮೀಣ ಮೀಸಲಾತಿ ಬದಲಾವಣೆಯಿಂದಷ್ಟೆ ಸಾಧ್ಯ.


ಇದು ಸಮಾಜ ಕಲ್ಯಾಣ ಮಂತ್ರಿ ಆಂಜನೇಯರಿಗೆ ಗೊತ್ತಿದೆಯಾ? ಅರ್ಹ ಗ್ರಾಮೀಣ ಬಡ ಅಭ್ಯರ್ಥಿಗಳ ಗೋಳು ಪರಿಹರಿಸಲು ಸಿಎಂ ಸಿದ್ದು ಮನಸ್ಸು ಮಾಡುವರಾ? ಖಾಸಗಿ ಶಾಲೆಗಳ ಕಡೆ ಕುಸಿತಕ್ಕೆ ಕಡಿವಾಣ ಹಾಕಬೇಕೆಂದರೆ ಕನ್ನಡ ಮಾಧ್ಯಮದ ಗ್ರಾಮೀಣರಿಗೆ ಹೆಚ್ಚಿನ ಪ್ರೋತ್ಸಾಹ-ಪ್ರಾಶಸ್ತ್ಯ ಕೊಡುವುದೊಂದೇ ಉಪಾಯ!!

■ ನಮುಹ


ಕನಿಷ್ಠ ಶೆಡ್‌ಗಳೂ ಇಲ್ಲದ ಬಸವನಹಳ್ಳಿ, ಬ್ಯಾಡಗೊಟ್ಟ ಪುನರ್‌ವಸತಿ ಪ್ರದೇಶ

ದಿಡ್ಡಳ್ಳಿ ಹೋರಾಟದ ದುರಂತ ಮಗ್ಗುಲುಗಳು



ಜಿಲ್ಲಾಧಿಕಾರಿ

ಅಂತೂಇಂತೂ ದಿಡ್ಡಳ್ಳಿ ಹೋರಾಟವನ್ನು ದಿಕ್ಕು ತಪ್ಪಿಸುವಲ್ಲಿ ಅಧಿಕಾರಶಾಹಿಗಳು ಯಶಸ್ವಿಯಾಗಿದ್ದಾರೆ. ಈ ಯಶಸ್ಸಿನಲ್ಲಿ ಕಾಂಗ್ರೆಸ್, ಬಿಜೆಪಿ, ಸಂಘ ಪರಿವಾರ, ಪ್ಲಾಂಟರ್ ಮಾಫಿಯಾ ಎಲ್ಲವೂ ತಮ್ಮತಮ್ಮ ಪಾಲು ನೀಡಿವೆ. ಹೆಚ್ಚೂಕಮ್ಮಿ ಯಶಸ್ಸಿನ ಉತ್ತುಂಗಕ್ಕೆ ಬಂದು ತಲುಪಿದ್ದ ಹೋರಾಟ ತನ್ನ ಉನ್ಮಾದತೆಯಿಂದಲೇ ವಿಪರ್ಯಾಸಕ್ಕೆ ಬಂದು ತಲುಪಿತಾ ಎಂಬ ಅನುಮಾನವೂ ಕಾಡದಿರದು. ತಲೆಯ ಮೇಲೊಂದು ಸೂರು ಕೇಳಿದ್ದ 900ಕ್ಕೂ ಹೆಚ್ಚು ಕುಟುಂಬಗಳನ್ನು ಕೊಡಗಿನ ನಾನಾಕಡೆ ಲಾರಿಗಳಲ್ಲಿ ಕಸ ತುಂಬಿಕೊಂಡಂತೆ ಹೊತ್ತೊಯ್ದು ಚೆಲ್ಲಾಡಲಾಗಿದೆ. ಮೂಲಸೌಕರ್ಯಗಳಾಗಲೀ, ಕನಿಷ್ಠ ಶೆಡ್‌ಗಳೂ ಇಲ್ಲದ ಬಸವನಹಳ್ಳಿ, ಬ್ಯಾಡಗೊಟ್ಟ ಮುಂತಾದ ಸ್ಥಳಗಳಲ್ಲಿ ವಿಲೇವಾರಿ ಮಾಡಿ ಜಿಲ್ಲಾಡಳಿತ ಕೈತೊಳೆದುಕೊಂಡಿದೆ.

ಇನ್ನು ಜಿಲ್ಲಾ ಉಸ್ತುವಾರಿ ಮಂತ್ರಿ ಎಂ.ಆರ್.ಸೀತಾರಾಂ ಎನಿಸಿಕೊಂಡ ವ್ಯಕ್ತಿ ಈ ಹೋರಾಟವನ್ನು ರೂಪಿಸಿ, ಮುಂದಕ್ಕೆ ಕೊಂಡೊಯ್ದ ಎ.ಕೆ. ಸುಬ್ಬಯ್ಯನವರನ್ನೇ ಕಟಕಟೆಯಲ್ಲಿ ನಿಲ್ಲಿಸಿ ಆರೋಪ ಮಾಡಿದ್ದಾರೆ. ಆದಿವಾಸಿಗಳಿಗೆ ತಪ್ಪು ಮಾಹಿತಿ ನೀಡಿ ಸುಬ್ಬಯ್ಯನವರು ದಿಕ್ಕು ತಪ್ಪಿಸುತ್ತಿದ್ದರು ಎಂದಿರುವ ಮಂತ್ರಿಯ ಮಾತಿನಲ್ಲಿ ಗೆಲ್ಲುವ ತರಾತುರಿ ಇದ್ದದ್ದು ಎದ್ದು ಕಾಣುತ್ತಿತ್ತು.

ದ್ವಂದ್ವಗಳ ಗೊಂದಲದಲ್ಲಿ...

ದಿಡ್ಡಳ್ಳಿಯ ಆದಿವಾಸಿ ಕುಟುಂಬಗಳನ್ನು ಅರಣ್ಯ ಇಲಾಖೆ ಬೀದಿಗೆ ತಳ್ಳಿದಾಗ ಅವರ ಪರವಾಗಿ ಮೊದಲು ಧ್ವನಿ ಎತ್ತಿದ್ದೇ ಎ.ಕೆ. ಸುಬ್ಬಯ್ಯ. ನಂತರ ಅವರು ಭೂಮಿ ಮತ್ತು ವಸತಿ ವಂಚಿತರ ಹಕ್ಕು ಹೋರಾಟ ಸಮಿತಿಯ ಸಹಕಾರದೊಂದಿಗೆ ಹೋರಾಟವನ್ನು ತೀವ್ರಗೊಳಿಸಿದಾಗ ಸರ್ಕಾರವೂ ಆದಿವಾಸಿಗಳ ಪರ ಒಲವು ತೋರಿದಂತೆ ನಡೆದುಕೊಂಡಿತ್ತು, ಸಮಾಜ ಕಲ್ಯಾಣ ಸಚಿವ ಆಂಜನೇಯ, ಕಂದಾಯ ಮಂತ್ರಿ ಕಾಗೋಡು ತಿಮ್ಮಪ್ಪ ಅರಣ್ಯ ಸಚಿವ ರಮಾನಾಥ್ ರೈ ಮೊದಲಾದವರು ದಿಡ್ಡಳ್ಳಿಗೆ ಭೇಟಿ ನೀಡಿ ನ್ಯಾಯದ ಭರವಸೆ ನೀಡಿದ್ದರು. ಆದರೆ ಕೊನೆಗೂ ಕಾಡಿನ ಮಕ್ಕಳಿಗೆ ಮೋಸ ಮಾಡುವಲ್ಲಿ ಸರ್ಕಾರ ಸಂಘ ಪರಿವಾರದೊಂದಿಗೆ ಕೈಜೋಡಿಸಿ ಕೂತಿದೆ.


ಅದ್ಯಾವಾಗ ಕಂದಾಯ ಮಂತ್ರಿ ಕಾಗೋಡು ತಿಮ್ಮಪ್ಪ ದಿಡ್ಡಳ್ಳಿಗೆ ಬಂದು ಕಣ್ಣೀರಿಟ್ಟು ಮರುಕಪಟ್ಟು ಮರುದಿನವೇ ಯು-ಟರ್ನ್ ಹೊಡೆದು ದಿಡ್ಡಳ್ಳಿಯ ಜಮೀನನ್ನು ಆದಿವಾಸಿಗಳಿಗೆ ನೀಡಲು ಸಾಧ್ಯವಿಲ್ಲ, ಅದರಬದಲು ಈಗ ನೀಡಲು ಉದ್ದೇಶಿಸಿರುವ ಹೊಸ ಜಾಗವನ್ನು ಬೇಡ ಅನ್ನುವವರು ಮುಠ್ಠಾಳರು ಎಂಬ ಆಣಿಮುತ್ತುಗಳನ್ನು ಉದುರಿಸಿದ್ದರೋ ಆಗಲೇ ಈ ಸರ್ಕಾರ ಹೋರಾಟಕ್ಕೆ ಕೈಕೊಡಬಹುದೆನ್ನುವ ಸೂಚನೆ ಸಿಕ್ಕಿತ್ತು, ಅದೀಗ ಅಕ್ಷರಶಃ ನಿಜವಾಗಿದೆ.

ಹೀಗೆ ದ್ವಂದ್ವ ಹೇಳಿಕೆಗಳನ್ನು ನೀಡಿದ್ದ ಕಾಗೋಡು ತಿಮ್ಮಪ್ಪನವರನ್ನು ಸುಬ್ಬಯ್ಯನವರು ಬೆಂಗಳೂರಿನಲ್ಲಿ ಭೇಟಿಯಾದಾಗ ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ರೀತಿಯಲ್ಲಿ ಮಾತನಾಡಲೇ ಇಲ್ಲ. ದಿಡ್ಡಳ್ಳಿಯ ಜಮೀನು ಅರಣ್ಯ ಎಂಬುದಕ್ಕೆ ಯಾವುದೇ ದಾಖಲೆ ಲಭ್ಯವಿಲ್ಲ, ಆದರೆ ತಾನು ಈ ಬಗ್ಗೆ ವರದಿ ಕೇಳಿದ್ದು ಇಲ್ಲಿಯವರೆಗೆ ಅಧಿಕಾರಿಗಳು ವರದಿ ನೀಡಿಲ್ಲ. ಕೆಲವೇ ದಿನಗಳಲ್ಲಿ ಮಳೆಗಾಲ ಪ್ರಾರಂಭವಾಗುವುದರಿಂದ ಜಿಲ್ಲಾಡಳಿತ ಗುರುತಿಸಿರುವ ಪ್ರದೇಶಗಳಿಗೆ ಆಸಕ್ತ ಆದಿವಾಸಿಗಳು ತೆರಳುವುದಿದ್ದರೆ ಅವರಿಗೆ ಎಲ್ಲಾ ಸೌಲಭ್ಯವನ್ನು ನೀಡುವುದಾಗಿ ಅವರು ತಿಳಿಸಿದ್ದರು. ಒಮ್ಮೆ ಹೋರಾಟದ ಪರಿಧಿಯಿಂದ ಹೊರ ಬಂದರೆ ಆ ಧನಿಗಳಿಗೆ ಪ್ರಭುತ್ವ ಎಂಥಾ ಗತಿ ತಂದಿಡುತ್ತೆ ಎನ್ನುವುದನ್ನು ಬಲ್ಲ ಎಂತವರಿಗೇ ಆದರು ಕಾಗೋಡು ತಿಮ್ಮಪ್ಪನವರ ಮನಸಿನ ಇರಾದೆ ಸ್ಪಷ್ಟವಾಗಿ ಅರ್ಥವಾಗುತ್ತದೆ.


ಹೋಗಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳು ಪುನರ್ ವಸತಿಯ ನಿರ್ಧಾರವನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳದೆ ಹೋರಾಟಗಾರರ ಜೊತೆ ಚರ್ಚೆ ನಡೆಸಿದ್ದರೆ ಇಂಥಾ ಸಮಸ್ಯೆ ಆಗುತ್ತಿರಲಿಲ್ಲ. ಆದರೆ ಸರ್ವಾಧಿಕಾರಿಯಂತೆ ತಾವು ಬದಲಿ ವ್ಯವಸ್ಥೆ ಮಾಡಿದ್ದೇವೆ, ಅಲ್ಲಿಗೆ ಆದಿವಾಸಿಗಳು ತೆರಳಬೇಕು, ಇಲ್ಲದಿದ್ದರೆ ಅವರ ವಿರುದ್ಧ ಕಾನೂನುಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂಬ ಹೇಳಿಕೆಯನ್ನು ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳು ಅತ್ಯಂತ ಬೇಜವಾಬ್ದಾರಿತನದಿಂದ ನೀಡಿದ್ದೇ ಸಮಸ್ಯೆಗಳೆಲ್ಲದಕ್ಕೂ ಕಾರಣವಾಗಿದೆ. ಜಿಲ್ಲಾಧಿಕಾರಿಗಳಿಗಂತೂ ಆಡಳಿತ ನಡೆಸುವುದು ಹೇಗೆ ಎಂಬ ಅರಿವೇ ಇದ್ದಂತಿಲ್ಲ.

ಒಡಕು ತಂದಿಟ್ಟ ಸಂಘಿಗಳು


ಕಾಗೋಡು ತಿಮ್ಮಪ್ಪರವರು ಸುಬ್ಬಯ್ಯನವರೊಂದಿಗೆ ಚರ್ಚಿಸಿದ ನಂತರ ಕೊಡಗಿನಲ್ಲಿ ಭೂಮಿ ಮತ್ತು ವಸತಿ ವಂಚಿತರ ಹಕ್ಕು ಹೋರಾಟ ಸಮಿತಿಯ ಸಭೆ ನಡೆಯಿತು. ಅಷ್ಟರಲ್ಲಾಗಲೇ ಸಂಘ ಪರಿವಾರಕ್ಕೆ ಸಚಿವ ಕಾಗೋಡು



ಮುತ್ತಮ್ಮ



ಎ.ಕೆ. ಸುಬ್ಬಯ್ಯ



ಕೆ.ಜಿ. ಬೋಪಯ್ಯ

ತಿಮ್ಮಪ್ಪ ತೆಗೆದುಕೊಂಡ ದ್ವಂದ್ವ ನಿಲುವು ಈ ಪ್ರಕರಣದಲ್ಲಿ ಏನೋ ಸಮಸ್ಯೆಯಿದೆ ಎಂಬ ಸುಳಿವು ನೀಡಿತ್ತು, ಹಾಗಾಗಿ ಅವರು ದಿಡ್ಡಳ್ಳಿಗೆ ಪ್ರವೇಶಿಸಿದರು. ಅವರಿಗೆ ಆರಂಭದಿಂದಲೂ ಸುಬ್ಬಯ್ಯ ಮತ್ತು ಸಮಿತಿಯ ಸದಸ್ಯರು ಜಿಲ್ಲೆಯಲ್ಲಿ ಚಟುವಟಿಕೆ ನಡೆಸುತ್ತಿರುವುದು ನುಂಗಲಾರದ ತುತ್ತಾಗಿತ್ತು, ಅವರು ಮುತ್ತಮ್ಮ ಮತ್ತು ಆಕೆಯ ಸಹೋದರ ಅಪ್ಪಾಜಿಯನ್ನು ಭೇಟಿಯಾಗಿ ಈ ಹಿಂದೆ ಇದ್ದಂತಹ ಪ್ರದೇಶದಲ್ಲಿಯೇ ಮತ್ತೆ ಗುಡಿಸಲುಗಳನ್ನು ಕಟ್ಟಿಕೊಳ್ಳಿ, ಹೇಗೂ ಅದು ಅರಣ್ಯ ಜಮೀನು ಅಲ್ಲವಲ್ಲ ಎಂಬ ವಿಚಾರವನ್ನು ತಲೆಗೆ ತುಂಬಿಸಿದರು.

ಸುಬ್ಬಯ್ಯನವರು ನಡೆಸಿದ ಸಭೆಯಲ್ಲಿ ಈ ವಿಚಾರವನ್ನು ಮುತ್ತಮ್ಮ ಪ್ರಸ್ತಾಪಿಸಿದಾಗ ಇದರಿಂದ ಅನಾಹುತವೇ ಹೆಚ್ಚು ಎಂಬುದನ್ನು ಅವರಿಗೆ ಸುಬ್ಬಯ್ಯನವರು ಮತ್ತು ಸಮಿತಿಯ ಸದಸ್ಯರು ತಿಳಿಸಿದರು. ಇದು ಅವರಿಗೆ ರುಚಿಸಲಿಲ್ಲ, ಅವರು ಅಷ್ಟರಲ್ಲಾಗಲೇ ಸಂಘ ಪರಿವಾರದ ತೆಕ್ಕೆಯಲ್ಲಿದ್ದರು. ಅವರು ಹೊರಗೆ ಬಂದು ಪ್ರತ್ಯೇಕವಾಗಿ ಪತ್ರಿಕಾಗೋಷ್ಠಿ ನಡೆಸಿ ತಮ್ಮನ್ನು ಹೋರಾಟಗಾರರು ದಿಕ್ಕು ತಪ್ಪಿಸುತ್ತಿದ್ದಾರೆ, ಹಾಗಾಗಿ ಅವರುಗಳ ಸಹಕಾರವಿಲ್ಲದೇ ತಾವೇ ಹೋರಾಟವನ್ನು ಮುಂದುವರೆಸುತ್ತೇವೆ ಎಂದು ಘೋಷಿಸಿಬಿಟ್ಟರು.

ತಾವು ನೇರವಾಗಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಭೂಮಿಯ ಹಕ್ಕು ಪಡೆದುಕೊಳ್ಳುತ್ತೇವೆ ಎಂಬಂತಹ ಅಸಂಬದ್ಧ ಹೇಳಿಕೆಗಳು ಅವರ ಬಾಯಿಂದ ಹೊರಬೀಳುತ್ತಿರುವುದು ಸ್ಪಷ್ಟವಾಗಿ ಸಂಘ ಪರಿವಾರ ಅವರ ಹಿಂದೆ ಕೆಲಸ ಮಾಡಿರೋದನ್ನು ಸಾಬೀತು ಮಾಡುವಂತಿದೆ. ಹೋರಾಟವನ್ನು ನುಚ್ಚುನೂರು ಮಾಡುವುದು ಮತ್ತು ಹೋರಾಟದ ಸಮಿತಿಯ ಸಂಪರ್ಕವನ್ನು ಇಲ್ಲದಂತೆ ಮಾಡುವುದು ಸಂಘ ಪರಿವಾರದ ಉದ್ದೇಶವಾಗಿದ್ದು ಅದರಲ್ಲಿ ಅವರು ಸಫಲರಾಗಿದ್ದಾರೆ.

ಅತಂತ್ರ ಬದುಕುಗಳ ಹೆಣಗಾಟ


ಈ ನಡುವೆ ಆದಿವಾಸಿಗಳ ನಡುವೆಯೇ ಎರಡು ಗುಂಪುಗಳಾಗಿ ರೂಪುಗೊಂಡವು. ಮುತ್ತಮ್ಮನವರ ತಂಡ ಹಳೆಯ ಸ್ಥಳದಲ್ಲಿ ಗುಡಿಸಲುಗಳನ್ನು ಮರು ನಿರ್ಮಿಸಿಕೊಂಡರೆ, ಅನಿತಾ ಮತ್ತು ಸ್ವಾಮಿ ಎಂಬ ಆದಿವಾಸಿ ಹೋರಾಟಗಾರರ ಗುಂಪು ಪುನರ್‌ವಸತಿ ಸ್ಥಳಕ್ಕೆ ಹೋಗಲು ಒಪ್ಪಿಕೊಂಡರಾದರು ಅಲ್ಲಿ ಮನೆಗಳ ನಿರ್ಮಾಣವಾಗಬೇಕು, ಎಲ್ಲಾ ಮೂಲಸೌಕರ್ಯಗಳು ಸಿಗಬೇಕು, ಬದುಕಿಗಾಗಿ ಪ್ರತಿ ಕುಟುಂಬಕ್ಕೆ ಎರಡು ಎಕ್ರೆ ಜಮೀನು ನೀಡಿದ ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ವರ್ಗಾಯಿಸಬೇಕು, ಅಲ್ಲಿಯವರೆಗೆ ತಾವು ದಿಡ್ಡಳ್ಳಿಯೇ ಇರುತ್ತೇವೆ ಎಂಬ ಷರತ್ತು ವಿಧಿಸಿದ್ದರು.

ಆದಿವಾಸಿಗಳ ನಡುವೆ ಎರಡು ಗುಂಪುಗಳಾಗಿರೋದು ಜಿಲ್ಲಾಡಳಿತದ ಗಮನಕ್ಕೆ ಬರುತ್ತಿದ್ದಂತೆಯೇ ಚುರುಕುಗೊಂಡು ಅಧಿಕಾರಿಗಳು ಒಂದೇ ದಿನದಲ್ಲಿ ಅಲ್ಲಿಂದ ಆದಿವಾಸಿಗಳನ್ನು ಹೊರ ದಬ್ಬುವ ಚಟುವಟಿಕೆಗೆ ಚಾಲನೆ ನೀಡಿದರು. ಕೆಲವರನ್ನು ಬಸವನಹಳ್ಳಿಯಲ್ಲಿ, ಮತ್ತೆ ಕೆಲವರನ್ನು ಬ್ಯಾಡಗೊಟ್ಟದಲ್ಲಿಯೂ ಎಸೆದು ಬಂದರು. ಅಲ್ಲಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದ್ದರೂ ಕನಿಷ್ಠ ಒಂದು ಶೆಡ್ ಕೂಡಾ ಅಲ್ಲಿ ಇಲ್ಲ, ಸುರಿವ ಮಳೆಯಲ್ಲೇ ಅವರೆಲ್ಲ ಎರಡು ದಿನ ಕಳೆಯ ಬೇಕಾಯ್ತು, ಬಸವನಹಳ್ಳಿಯಲ್ಲಿ ಆದಿವಾಸಿ ಮಹಿಳೆಯೊಬ್ಬರಿಗೆ ಬಯಲಿನಲ್ಲೇ, ಮಳೆಯಲ್ಲೇ ಹೆರಿಗೆಯಾಯ್ತು! ಮೂರು ಸಾವಿರಕ್ಕೂ ಹೆಚ್ಚು ಜನರಿಗೆ ಭಿಕ್ಷೆಯಂತೆ ಅನ್ನ ಹಾಗೂ ಸಾಂಬಾರು ಬಿಟ್ಟರೆ ಮತ್ತೇನನ್ನೂ ಜಿಲ್ಲಾಡಳಿತ ನೀಡಿಲ್ಲ.

ಮಳೆಗಾಲ ಶುರುವಾದರೆ ಇಲ್ಲಿನ ಮಳೆಯ ರಭಸಕ್ಕೆ ಟೆಂಟ್‌ಗಳು ಸಹ ಬಾಳಿಕೆ ಬರುವುದಿಲ್ಲ. ಸುಸ್ಥಿತಿಯ ಮನೆಗಳೇ ಬೇಕು. ಜನರಿಗೆ ಉದ್ಯೋಗವಿಲ್ಲದೆ ಖಾಲಿ ಜೇಬಿನಲ್ಲಿ ದಿನದೂಡುತ್ತಿದ್ದಾರೆ. ಜಿಲ್ಲಾಧಿಕಾರಿ ಆಶ್ವಾಸನೆ ನೀಡಿದ್ದಂತೆ ಉದ್ಯೋಗಖಾತ್ರಿ ಯೋಜನೆಯ ಕೆಲಸಗಳೂ ಅವರಿಗೆ ನೀಡಿಲ್ಲ. ಇನ್ನು ಈಗ ಕೊಡುತ್ತಿರುವ ಆಹಾರವನ್ನೂ ಒಂದೆರಡು ದಿನಗಳಲ್ಲಿ ನಿಲ್ಲಿಸುವುದಾಗಿ ಸಮಾಜ ಕಲ್ಯಾಣ ಇಲಾಖೆ ಬೆದರಿಕೆ ಹಾಕಿದೆ.

ರಾಜಕಾರಣದ ದೊಂಬರಾಟ

ಇಷ್ಟೆಲ್ಲಾ ಆಗಿದ್ದರೂ ಕೊಡಗಿನ ರಣಹೇಡಿ ಕಾಂಗ್ರೆಸ್ಸಿಗರು ಇತ್ತ ತಲೆ ಹಾಕಿಲ್ಲ. ಅಸಲಿಗೆ ಪ್ರತ್ಯೇಕತಾವಾದಿಗಳು ಮತ್ತು ಪರಿಸರವಾದಿಗಳು ಆಗಿರುವ ಕಾಂಗ್ರೆಸಿಗರಿಗೆ ಆದಿವಾಸಿಗಳನ್ನು ದಿಡ್ಡಳ್ಳಿಯಿಂದ ಹೊರಹಾಕಿದ್ದು ಸಂತೋಷವಾಗಿದೆ. ಇನ್ನು ಸಂಘಪರಿವಾರಕ್ಕೆ ತನ್ನ ತಂತ್ರ ಫಲಿಸಿದ ಸಂತೋಷವಿದೆ. ಆದಿವಾಸಿಗಳು ತಮ್ಮ ಹಿಡಿತದ ಕೈತಪ್ಪಿ ಹೋಗುತ್ತಿದ್ದಾರೆ



ಸೀತಾರಾಂ


ಎಂಬ ಭಯ ಅವರಲ್ಲಿತ್ತು. ಅಲ್ಲದೇ ನೂರ್ ಶ್ರೀಧ[...] ಮತ್ತು ಸಿರಿಮನೆ ನಾಗರಾಜ್‌ರಂತಹ ಕಮ್ಯುನಿಸ್ಟರು [...] ಚಟುವಟಿಕೆ ನಡೆಸುತ್ತಿದ್ದದ್ದು ಅವರಿಗೆ ನುಂಗಲಾ[...] ತುತ್ತಾಗಿತ್ತು, ಆ ಕಾರಣಕ್ಕೇ ಆದಿವಾಸಿಗಳ ನೆಪದಲ್ಲಿ ನಕ್ಸಲ[...] ತಮ್ಮ ಕಾರ್ಯವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಿದ್ದಾರೆ ಎಂಬ ಆರೋ[...]ವನ್ನು ದಿಡ್ಡಳ್ಳಿ ಹೋರಾಟ ಶುರುವಾದ ದಿನದಿಂ[...] ನಿರಂತರವಾಗಿ ಹಬ್ಬಿಸುತ್ತಲೇ ಬಂದಿದ್ದರು. ಈಗ ಅವರಿ[...] ಸಮಾಧಾನವಾಗಿದೆ. ಸುಬ್ಬಯ್ಯನವರನ್ನು ಹೋರಾಟದಿ[...] ಹೊರಗಿಡುವುದು ಕೋಮುವಾದಿ ಸಂಘಿಗಳ ಮ[...] ಊಳಿಗಮಾನ್ಯ ಕಾಂಗ್ರೆಸಿಗರ ಅಜೆಂಡಾವಾಗಿತ್ತು.

ಜಿಲ್ಲಾಧಿಕಾರಿಗಳು ಮತ್ತು ಕೊಡಗು ಜಿಲ್ಲಾ ಉಸ್ತು[...] ಸಚಿವರೇ ದಿಡ್ಡಳ್ಳಿಯ ಸಮಸ್ಯೆಗೆ ಮೂಲ ಕಾರಣಕರ್ತ[...] ಕಾಂಗ್ರೆಸಿಗರೇ ಆದಿವಾಸಿಗಳ ದಿಕ್ಕು ತಪ್ಪಿಸುತ್ತಿದ್ದಾರೆ. [...] 577 ಕುಟುಂಬದ ಜೊತೆಯಲ್ಲಿ ಮತ್ತೇ ಸುಮಾರು 3[...] ಕುಟುಂಬವನ್ನು ಲೈನ್ ಮನೆಯಿಂದ ಹೊರತಂದಿದ್ದು ಸ[...] ಕಾಗೋಡು ತಿಮ್ಮಪ್ಪ, ಅವರಿಗೆ ಈಗ ನಿವೇಶನ ಮ[...] ಭೂಮಿಯನ್ನು ನೀಡುವ ಜವಾಬ್ದಾರಿ ಸರ್ಕಾರದ್ದಾ[...] ಪ್ರತಿಯೊಂದು ಕುಟುಂಬಕ್ಕೂ ಬಸವನಹಳ್ಳಿ ಮ[...] ಬ್ಯಾಡಗೊಟ್ಟದಲ್ಲಿ 30x30 ರ ನಿವೇಶನವನ್ನು ನೀಡುವುದ[...] ಮತ್ತು ಮನೆಯೊಂದರ ನಿರ್ಮಾಣಕ್ಕೆ 4.50 ಲಕ್ಷ ರೂಪಾ[...] ಅನುದಾನ ನೀಡುವುದಾಗಿ ಹೇಳಿದ್ದಾರೆ. ಆದರೆ ಎರ[...] ಮನೆಗಳ ಮಧ್ಯೆ ಅಂತರವಾಗಲೀ ಅಥವಾ ರಸ್ತೆ ಮ[...] ಮನೆಯ ಮಧ್ಯೆ ಚರಂಡಿ ನಿರ್ಮಾಣಕ್ಕೆ ಜಾಗವಾಗ[...] ಅವರು ಬಿಟ್ಟಿಲ್ಲ, ಇದರಿಂದ ಸಣ್ಣಸಣ್ಣ ಮನೆಗ[...] ಆದಿವಾಸಿಗಳು ವಾಸಿಸುವಂತಾಗುತ್ತದೆ. ಜಿಲ್ಲಾಡಳಿತ ಖಾ[...] ಲೇಔಟ್ ನಿರ್ಮಾಣ ಮಾಡುವಾಗ ಪಾರ್ಕ್ ಬೇಕು, [...] ಬೇಕು ಮತ್ತು ಚರಂಡಿ, ಅಂಗನವಾಡಿ ಮುಂತಾದವುಗ[...] ಸುಮಾರು ಶೇ.45 ರಷ್ಟು ಜಾಗವನ್ನು ಬಿಡಬೇಕು ಎ[...] ಸೂಚಿಸುತ್ತದೆ. ಆದರೆ ಆದಿವಾಸಿಗಳ ಪುನರ್ವಸತಿಯ[...] ಅದ್ಯಾವುದನ್ನೂ ಜಿಲ್ಲಾಡಳಿತ ಪರಿಗಣಿಸಿಲ್ಲ. ಅವರ ದೃಷ್ಟಿ[...] ಆದಿವಾಸಿಗಳು ಮನುಷ್ಯರೇ ಅಲ್ಲವೇನೊ?

ಬ್ಯಾಡಗೊಟ್ಟದ ಪುನರ್‌ವಸತಿ ಪ್ರದೇಶವು [...] ಸಂಗೋಪನಾ ಇಲಾಖೆಗೆ ಸೇರಿದ್ದು, ಸ್ಥಳೀಯ ಪಂಚಾ[...]ಯು ಅಲ್ಲಿ ಬಡವರಿಗೆ ನಿವೇಶನ ನೀಡಲು ಈ ಹಿಂದೆ[...] ಅರ್ಜಿಯನ್ನು ಆಹ್ವಾನಿಸಿತ್ತು, ಸುಮಾರು 500ಕ್ಕೂ ಹ[...] ಅರ್ಜಿಗಳು ಬಂದಿವೆ, ಆದರೆ ಜಿಲ್ಲಾಡಳಿತ ಅದೇ ಜಾಗ[...] ಪುನರ್ವಸತಿಗೆ ನೀಡಿರೋದು ಹೊಸ ಸಮಸ್ಯೆ ತಂದೊಡ್ಡ[...] ಎಂಬ ಬಾಂಬ್ ಸಿಡಿಸಿರುವ ಬಿಜೆಪಿಯ ಜಿಲ್ಲಾ ಪಂಚಾ[...] ಸದಸ್ಯೆ ಮಂಜುಳಾ ಆದಿವಾಸಿಗಳನ್ನು ಅಕ್ಷರಶಃ ಅ[...]ವಾಗಿಸಿದ್ದಾರೆ. ಒಟ್ಟಿನಲ್ಲಿ ಆದಿವಾಸಿಗಳ ಹೋರಾಟ[...] ಮಣ್ಣುಪಾಲು ಮಾಡಿ, ಅವರ ಬದುಕುಗಳನ್ನು ಅ[...]ವಾಗಿಸಲು ರಾಜಕೀಯ ಪಕ್ಷಗಳೊಟ್ಟಿಗೆ ಜಿಲ್ಲಾಡಳಿತ, [...] ಸರ್ಕಾರ ಕೈಜೋಡಿಸಿ ನಿಂತಿದೆ ಅನ್ನೋದು ಮಾತ್ರ [...]

■ ಬಿ.ಎನ್.ಮನುಶೇ[...]

...ುಂಗಳೂರು: ತಂಗಿ ತಲಬೂ ಸಂಘಿ ಸಂಚೂ!!



...ಸಮುದ್ರ ನಗರಿ ಮಂಗಳೂರಷ್ಟೇ ಅಲ್ಲ, ಇಡೀ ...ವಳಿಗೆ ಕರಾವಳಿಯೇ ಬೆಚ್ಚಿಬಿದ್ದಿದೆ! ಮರಣವೇ ಮಹಾ...ು ಎನ್ನುತ್ತ ಸಾವಿನ ಮನೆಯಂಗಳದಲ್ಲಿ ಧರ್ಮಕಾರಣದ ...ನೆ ಮಾಡುವ ಕೇಸರಿ ಸೈತಾನರ ಬಣ್ಣ ಬಯಲಾಗಿದೆ. ...ಗಳೂರಲ್ಲಿ ಹಿಂದೂ ಒಬ್ಬ ಸ್ವಯಂಕೃತಾಪರಾಧದಿಂದ ...ಿ ಬಿದ್ದರೆ ಅಥವಾ ದನವೊಂದು ಮುದಿಯಾಗಿ ...ೂ ಸಾಕು, ಇದು ಮುಸ್ಲಿಮರ ಮಸಲತ್ತು, ಜೇಹಾದಿಗಳ ...ಂದು ಅಬ್ಬರಿಸಿ ಬೊಬ್ಬಿರಿದು ಊರೂರಿಗೆ ಬೆಂಕಿ ... ಮೈ ಕಾಯಿಸಿ ಕೊಳ್ಳುವ ಸಂಘಿಗಳ ಬಾಯಿ ಬಂದ್ ...ದೆ! ಸುಮಾರು ಏಳು ತಿಂಗಳ ಹಿಂದೆ ಕೊಣಾಜೆಯ ...ಗೋಳಿ ಬಳಿ ಬರ್ಬರ ಹಲ್ಲೇಗೀಡಾಗಿ ಆನಂತರ ಸತ್ತೇ ...ಗಿದ್ದ ಪಾಪದ ಹುಡುಗ ಕಾರ್ತಿಕ್‌ರಾಜ್‌ನ ಕೊಲ್ಲಿಸಿದ್ದು ... ಖಾಸಾಖಾಸಾ ತಂಗಿಯೇ ಹೊರತು ಸಾಬಿಗಳಲ್ಲ ...ಎಂಬುದನ್ನು ಪೊಲೀಸರು ಸಾಕ್ಷ್ಯಾಧಾರ ಸಮೇತ ಸಿದ್ಧ...ಪಡಿಸಿದ್ದಾರೆ!!


ಅಲ್ಲಿಗೆ 'ಬೆಂಕಿ ಭಂಡ' ಬಿರುದಾಂಕಿತ ಸಂಸದ ನಳೀನ್ ...ಾರ್ ಕುಟೀಲನ ಅಯೋಗ್ಯತೆ ಮತ್ತು ಹಿಂದೂತ್ವ...ಗಳ ಹರಾಮಿತನ ಒಟ್ಟೊಟ್ಟಿಗೇ ಅನಾವರಣಗೊಂಡಿದೆ; ...ಲ್ಲಂಡಿಗಳೆಂಬ ಮೂದಲಿಕೆಗೆ ಈಡಾಗಿದ್ದ ಮಂಗಳೂರು ...ೀಸರ ಖಾಕಿ ಖದರು ಏಕ್‌ದಂ ಡಬ್ಬಲ್ ಆಗಿಬಿಟ್ಟಿದೆ; ...ಕ್ ರಾಜ್ ಮತ್ತಾತನ ಮುದ್ದಿನ ತಂಗಿ ನಡುವಿನ ...ಂಬಿಕ ಕಲಹ ರಕ್ತದಾಹದ ಹತ್ರಕ್ಕೆ ಹೋಗಿ ಮುಟ್ಟಿದ್ದು ...ಳಿಯಾಗಿ ಬಿಚ್ಚಿಕೊಂಡಿದೆ. ಬರೋಬ್ಬರಿ ಆರೂವರೆ ...ಳು ನಿಯತ್ತು-ನಿಷ್ಠೆಯಿಂದ ಮರ್ಡರ್‌ಮಿಸ್ಟರಿ ಸುತ್ತ ...ರಿ ನಡೆಸಿದ ಸಿಸಿಬಿ ಪೊಲೀಸ್ ತಂಡದ ಕಪ್ತಾನ್ ... ವೆಲೆಂಟೈನ್ ಡಿಸೋಜಾ ಅಂತಿಮವಾಗಿ ಕಾರ್ತಿಕ್ ...ನನ್ನು ಆತನ ಒಡಹುಟ್ಟಿದ ತಂಗಿ ಕಾವ್ಯಶ್ರೀಯೇ ... ಪ್ರಿಯಕರನಿಗೆ ಸುಪಾರಿ ಕೊಟ್ಟು ಖತಮ್ ...ಮಾಡಿಸಿದ್ದಾಳೆಂಬುದನ್ನು ಕಂಡುಹಿಡಿದಿದ್ದಾರೆ!!


ಫ್ಲಾಶ್‌ಬ್ಯಾಕ್

ಮಂಗಳೂರನ್ನು ಚೆಡ್ಡಿ ಡಾನ್ ಕಲ್ಲಡ್ಕ ಭಟ್ಟ, ಹಿಂದೂತ್ವ ...ೋನ್ಮಾದಿ ಜಗದೀಶ್ ಕಾರಂತ ವಗೈರೆ ಕೇಸರಿ ...ನವರು ನರಕ ಮಾಡಿ ದಶಕ ಎರಡಾಗುತ್ತ ಬಂದಿದೆ. ...ಾಯಕ ಶೂದ್ರರನ್ನು ಕೋಮು ಯುದ್ಧಕ್ಕೆ ಛೂಬಿಡುವ ...ಾತಕಿಗಳು ಅದರಲ್ಲೊಬ್ಬ ಸಾಯಲೆಂದೇ ಬಯಸುತ್ತಾರೆ. ... ಒಬ್ಬ ಹಿಂದೂ ಸತ್ತರೆ ಆತನ ಹೆಸರಲ್ಲಿ ಸರಣಿ ...ೂಸಮಾಜೋತ್ಸವ ನಡೆಸಿ ಕಮ್ಯುನಲ್ ರಾಜಕಾರಣದ ...ೇಜ್ ಪಡೆಯಲು ಹವಣಿಸುತ್ತಾರೆ. ಕೊಣಾಜೆಯ ...ಎಸ್‌ಎಸ್-ಬಿಜೆಪಿ ಸಕ್ರಿಯ ಕಾರ್ಯಕರ್ತ ಉಮೇಶ್ ...ಗರ ಪುತ್ರ ಕಾರ್ತಿಕ್‌ರಾಜ್ ಅನುಮಾನಾಸ್ಪದವಾಗಿ ... ನೀಗಿದಾಗ ನಾಮರ್ಧ ಎಂಪಿ ನಳಿನ್, ಕಲ್ಲಡ್ಕ ..., ಕಾರಂತ್.... ಮುಂತಾದ ಚೆಡ್ಡಿ ಚತುರರಿಗೆ ...ದೂತ್ವದ ಹುಚ್ಚು ಕೆರಳಿಸಲು ಸುಲಭವಾದ ...ಬೊಂದು ಸಿಕ್ಕಂತಾಗಿತ್ತು. ಕಟೀಲು ತಾನೊಬ್ಬ ...ದನೆಂಬ ಘನತೆ-ಗೌರವ-ಮಾನ-ಮರ್ಯಾದೆ ಬಿಟ್ಟು ...ಾಲಿಕರ ಕಟ್ಟಿಕೊಂಡು "ಕಾರ್ತಿಕ್‌ರಾಜ್‌ನ ಕೊಂದವರು ...ಗಳು... ಕೇರಳದ ಬ್ಯಾರಿಗಳು... ಜೇಹಾದಿಗಳು...." ...ಲ್ಲಿ ಬೊಬ್ಬಿರಿದ್ದದ್ದೇ ಬೊಬ್ಬಿರಿದದ್ದು. ಆತ ಒಂದಲ್ಲ ...ಲ್ಲ ಲೆಕ್ಕವಿಲ್ಲದಷ್ಟು ಬಾರಿ ಕಾರ್ತಿಕ್‌ರಾಜ್ ಕೇಸ್ ...ಮಾಡಿಕೊಂಡು ಬೀದಿಗಿಳಿದಿದ್ದ.

...ಒಂದು ಹಂತದಲ್ಲಂತೂ ಕುಟೀಲು "ಕಾರ್ತಿಕ್‌ರಾಜ್‌ನ ...ದವರನ್ನು ಪೊಲೀಸರು ಒಂದು ವಾರದಲ್ಲಿ ಹಿಡಿಯ... ದಕ್ಷಿಣ ಕನ್ನಡಕ್ಕೆ ಬೆಂಕಿ ಹೇಗಾಕಬೇಕೆಂದು ನಂಗೆ ...ು...!!" ಎಂದು ಕೊಣಾಜೆ ಪೊಲೀಸ್ ಠಾಣೆ ಮುಂದೇ ...ಡಿದ್ದ. ರಾಜ್ಯದಾದ್ಯಂತ ನಳೀನ್‌ನ ನಖರಾದ ಬಗ್ಗೆ ... ಸುದ್ದಿಯೂ ಆಗಿತ್ತು. ಸಾಕ್ಷಾತ್ ಯಡ್ಡಿ ಮಹಾತ್ಮರೂ ...್ ರಾಜ್ ಮನೆಗೆ ಧಾವಿಸಿ ಮತಾಂಧ ಮಾತಾಡಿ...ದ್ದರು. ಸಂಘಪರಿವಾರ ಹುಳ ಬಂದಾಗೆಲ್ಲ ಕಾರ್ತಿಕ್ ...ಪ್ರಕರಣ ಎತ್ತಿಕೊಂಡು ಓರಾಟ ಮಾಡುತ್ತಲೇ ... ಒಂದೆಡೆ ಹಿಂದೂಸಂಘಟನೆಗಳ ಹಾರಾಟ, ...ನಡೆದ ತಿಂಗಳು-ತಿಂಗಳು ಉರುಳಿದರೂ ಕೊಲೆ ...ಗಡುಕರ ಹಿಡಿಯಲಾಗದ ಮಂಗಳೂರು ಪೊಲೀಸರ ಅಸಹಾಯಕತೆ ಇದು ಕರಾವಳಿಯಲ್ಲಿ ಕಾರ್ತಿಕ್ ರಾಜ್‌ನ ಕೊಂದವರು ಬ್ಯಾರಿ ಜೇಹಾದಿಗಳೇ ಇದ್ದರೂ ಇರಬಹುದೆಂಬ ಅನುಮಾನ-ಗೊಂದಲ ಹುಟ್ಟುಹಾಕಿತ್ತು. ಕಾರ್ತಿಕ್ ಕೊಲೆ ತನಿಖಾ ತಂಡದಲ್ಲಿದ್ದ ಆತನ ಹತ್ತಿರ ಸಂಬಂಧಿ ಪೊಲೀಸ್ ಅಧಿಕಾರಿ ಇದು ಕೋಮು ಕ್ರೌರ್ಯದ ಹತ್ಯೆಯಲ್ಲ; ವೈಯಕ್ತಿಕ ದ್ವೇಷಾಸೂಯೆ ಸೇಡಿನ ಕೃತ್ಯವೆಂದು ಹೇಳಿದರೂ ನಂಬುವವರು ಯಾರೂ ಇರಲಿಲ್ಲ. ತಲೆ ರೋಸಿ ಹೋದ ಪೊಲೀಸ್ ಕಮೀಷನರ್ ಚಂದ್ರಶೇಖರ್ ಮಂಗಳೂರಿನ ಕ್ರೈಮ್‌ನ ಬುಡ-ಬೇರು ಗೊತ್ತಿರುವ ಎಸಿಪಿ ವೆಲೆಂಟೈನ್ ಡಿಸೋಜಾ ನೇತೃತ್ವದ ತನಿಖಾ ತಂಡ ರಚಿಸಿ ಖುದ್ದು ತಾವೇ ಅದರ ಮೇಲೆ ನಿಗಾ ಇಟ್ಟರು.

22 ಅಕ್ಟೋಬರ್ 2016ರ ಮುಂಜಾವು!





ಕೊಣಾಜೆಯ ಉಮೇಶ್ ಗಾಣಿಗ ಒಮ್ಮೆ ಮಂಗಳೂರು ತಾಪಂನ ಉಪಾಧ್ಯಕ್ಷನೂ ಆಗಿದ್ದ ಬಿಜೆಪಿ ಪುಢಾರಿ. ಆತನ ಮಗ ಕಾರ್ತಿಕ್ ಇಂಜಿನಿಯರಿಂಗ್ ಪದವೀಧರನಾಗಿದ್ದ. ಅಪ್ಪನ ರಾಜಕಾರಣದಲ್ಲಿ ಭಾಗವಹಿಸುತ್ತಿದ್ದ ಆತ ಹಿಂದೂ ಸಂಘಟನೆಗಳಲ್ಲೂ ಅಡ್ಡಾಡಿಕೊಂಡಿದ್ದ. ಜಾಗಿಂಗು-ಜಿಮ್ಮು ಎಂದು ಮೈಕಟ್ಟು ಬೆಳೆಸಿಕೊಂಡಿದ್ದ ಕಾರ್ತಿಕ್ ಎಂದಿನಂತೆ ಅಂದು 22.10.16 ಚುಮು-ಚುಮು ಮುಂಜಾವಿನ 5.30ಕ್ಕೆ ಜಾಗಿಂಗ್ ಎಂದು ಹೊರಟಿದ್ದ. ಕೊಣಾಜೆ ಪೊಲೀಸ್ ಠಾಣೆಗಿನ್ನು ಕೆಲವೇ ಮಾರು ದೂರ. ಆಗಾತನ ತಲೆಗೆ ಬಲವಾಗಿ ಹೊಡೆತ ಬೀಳುತ್ತದೆ. ಹೊಡೆದವರು ಯಾರು ಯಾರಿಗೂ ಗೊತ್ತಾಗುವುದಿಲ್ಲ. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಾತನನ್ನು ಕಂಡ ಪೇಪರ್ ಬಾಯ್ ಪೊಲೀಸ್ ಠಾಣೆಗೆ ಸುದ್ದಿ ತಲುಪಿಸಿದ. ಆಸ್ಪತ್ರೆಗೆ ಸೇರಿಸಲಾದ ಕಾರ್ತಿಕ್ ಒಂದಿಡೀ ದಿನ ಸಾವು-ಬದುಕಿನ ನಡುವೆ ಒದ್ದಾಡಿ ಮರುದಿನ ಜೀವ ಬಿಟ್ಟ.

ಇದೊಂದು ಪಕ್ಕಾ ಕಗ್ಗೊಲೆ ಎಂಬ ತೀರ್ಮಾನಕ್ಕೆ ಬರುತ್ತಾರೆ ಪೊಲೀಸರು. ಅಪ್ಪ ಬಿಜೆಪಿ ರಾಜಕಾರಣಿ; ಮಂಗಳೂರು ಕೋಮುಕಲಹದ ದಾವಾನೆಲ. ಹೀಗಾಗಿ ಮೊದಲು ಪೊಲೀಸರು ಮುಸ್ಲಿಮ್ ರೌಡಿಗಳು ಮತ್ತು ಮತಾಂಧ ಸಾಬಿ ಸಂಘಟನೆಗಳ ಸುತ್ತ ತನಿಖೆ ನಡೆಸುತ್ತಾರೆ.

ಊಹುಂ! ಏನೂ ಪ್ರಯೋಜನವಾಗಲಿಲ್ಲ. ತನಿಖೆ ನಡೆದಂತೆ ಕಗ್ಗಂಟಾಯ್ತು ಪ್ರಕರಣ. ಹಿಂದೂ ಸಂಘಟನೆಗಳು ಪೊಲೀಸರನ್ನೇ ಟಾರ್ಗೆಟ್ ಮಾಡಿಕೊಂಡು ಪ್ರತಿಭಟನೆ-ಕೇಸರಿ ಧ್ವಜ ಹಾರಿಸುವಿಕೆ ಮಾಡುತ್ತಲೇ ಇದ್ದರು. ಪೊಲೀಸರು ಮಗ್ಗಲು ಬದಲಿಸುತ್ತಾರೆ. ಕಾರ್ತಿಕ್ ಏನಾದರೂ ಲವಿ-ಡವಿ ಮಾಡಲು ಹೋಗಿ ಹತನಾದನಾ? ಎಂದು ತಲೆ ಕೆಡಿಸಿಕೊಳ್ಳುತ್ತಾರೆ. ಅಂಥ ಸುಳಿವೇ ಸಿಗುತ್ತಿಲ್ಲ. ಆಗ ಕೌಟುಂಬಿಕ ವೈಷಮ್ಯದ ಬಗ್ಗೆ ತನಿಖೆ ಕೈಗೆತ್ತಿಕೊಳ್ಳುತ್ತಾರೆ. ಆಗಲೂ ಕನ್‌ಪ್ಯೂಜನ್ನೇ!!

ಕಾವ್ಯಶ್ರೀ ಕರ್ಮ!!

ತನಿಖಾಧಿಕಾರಿ ವೆಲೆಂಟೈನ್ ಡಿಸೋಜಾಗೆ ಅದ್ಯಾಕೋ ಕಾರ್ತಿಕ್‌ನ ಮಮತೆಯ ಮುದ್ದು ತಂಗಿ ಬಗ್ಗೆ ಅನುಮಾನ ಶುರುವಾಗಿತ್ತು. ಗಂಡನನ್ನು ಬಿಟ್ಟು ಬಂದಿದ್ದ ಬೆಡಗಾತಿ ಕಾವ್ಯಶ್ರೀ ಮತ್ತು ಅಣ್ಣ ಕಾರ್ತಿಕ್ ನಡುವೆ ವೈಮನಸ್ಸು ಮೂಡಿದ್ದು ಡಿಸೋಜಾ ತಿಳಿದುಕೊಂಡಿದ್ದರು. ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾನನ್ನು ಪರಮ ನೀಚ ಚೆಡ್ಡಿ ನರೇಶ್ ಶೆಣೈ ಕೊಲ್ಲಿಸಿದ ಕೇಸಲ್ಲಿ ದಾರಿತಪ್ಪಿ ಹೆಸರು ಕೆಡಿಸಿಕೊಂಡಿದ್ದ ವೆಲೆಂಟೈನ್ ಈ ಪ್ರಕರಣದಲ್ಲಿ ಮಾತ್ರ ನಿಷ್ಠೆ-ನಿಯತ್ತಿನಿಂದ ಕಾರ್ಯಾಚರಣೆಗೆ ಇಳಿದಿದ್ದರು.

ಮನೆಯಲ್ಲಿ ಕಂಡವರ ಎದುರು, ಪೊಲೀಸರ ಮುಂದೆ, ಬಿಜೆಪಿಗರ ಪ್ರತಿಭಟನೆಯಲ್ಲಿ ಅಣ್ಣನೆಂದರೆ ತನಗೆ ಪ್ರಾಣವೆಂಬಂತೆ ಗೋಳೋ ಎಂದು ಅಳುತ್ತಿದ್ದ ಕಾವ್ಯಶ್ರೀ ಬಗ್ಗೆ ಯಾರೂ ಸಂಶಯ ಪಡುವಂತೆಯೇ ಇರಲಿಲ್ಲ. ಆದರೆ ಆಕೆಯ ಅನೈತಿಕ ಸಂಬಂಧ, ತಲಬುದಾರಿಕೆಯ ಜಾಡು ಹಿಡಿದು ಹೊರಟ ತನಿಖಾಧಿಕಾರಿಗೆ ಕಾರ್ತಿಕ್‌ನ ಕೊಲೆ ಮೂಲದ ಸಂಜ್ಞೆ-ಸಂಕೇತ, ಸೂಚನೆಗಳು ಒಂದೊಂದಾಗಿ ಸಿಗುತ್ತದೆ. ಆಕೆ ತನ್ನ ಪ್ರಿಯಕರ ಗೌತಮ್‌ನಿಗೆ ಬರೋಬ್ಬರಿ 5 ಲಕ್ಷದ ಸುಪಾರಿ ಕೊಟ್ಟು ಅಣ್ಣನ ಹತ್ಯೆಗೆ ಬಿಟ್ಟಿದ್ದಳು!

ದಾಂಪತ್ಯ ಢಮಾರ್!!

ಕಾರ್ತಿಕ್‌ಗೆ ತಂಗಿ ಕಾವ್ಯಳೆಂದರೆ ಅಪಾರ ಮಮತೆ. ಆಕೆಯ ಮದುವೆಯನ್ನೂ ಅದ್ಧೂರಿಯಾಗಿ ಮಾಡಿದ್ದ. ಮದುವೆಗೆಂದು ದೊಡ್ಡ ಸಾಲ ಮಾಡಿಕೊಂಡಿದ್ದ. ಗಲ್ಫ್‌ನಲ್ಲಿದ್ದ ಸ್ಥಿತಿವಂತ ಎನ್‌ಆರ್‌ಐ ಒಬ್ಬನ ಜತೆ ತಂಗಿಗೆ ಮದುವೆ ಮಾಡಿದ್ದ. ಆದರೆ ಕಾವ್ಯಳಿಗೆ ಗಂಡನ ಜತೆ ಹೊಂದಾಣಿಕೆಯೇ ಆಗಲಿಲ್ಲ. ಗಂಡ-ಹೆಂಡತಿ ನಡುವೆ ದಿನವೂ ಜಗಳ-ಕದನ. ಕಾವ್ಯ ವಿಚ್ಛೇದನಕ್ಕೆ ರೆಡಿಯಾದಳು. ಆಗ ಕಾರ್ತಿಕ್‌ಗೆ ಆಘಾತವಾಗುತ್ತದೆ. ತಂಗಿಗೆ ಪರಿ-ಪರಿಯಾಗಿ ಬುದ್ಧಿ ಹೇಳುತ್ತಾನೆ. ವೈವಾಹಿಕ ಸಂಬಂಧ ಮುರಿದುಕೊಳ್ಳದಂತೆ ತಿಳಿವಳಿಕೆ ಹೇಳುತ್ತಾನೆ.




ಆದರೆ ಕಾವ್ಯಳಿಗೆ ಇದ್ಯಾವುದೂ ಹಿಡಿಸುವುದಿಲ್ಲ. ಆಕೆಯದು ಒಂದೇ ಹಠ ಗಂಡನ ಬಿಡುತ್ತೇನೆ, ನನ್ನ ದಾರಿಗೆ ಅಡ್ಡ ಬರಬೇಡ ಎಂದು ಅಣ್ಣನಿಗೆ ತಾಕೀತು ಮಾಡುತ್ತಾಳೆ. ಈ ವೈಮನಸ್ಸು ಹಾಗೇ ಮುಂದುವರಿಯುತ್ತದೆ. ಯಾವಾಗ ಕಾವ್ಯ ಕಣಚೂರು ಆಸ್ಪತ್ರೆಗೆ ನರ್ಸ್ ಆಗಿ ಸೇರುತ್ತಾಳೋ ಆಗಾಕೆಯ ದಾರಿಯೂ ತಪ್ಪುತ್ತದೆ. ಅಲ್ಲೇ ಕಾರಕೂನಿಕೆ ಮಾಡಿಕೊಂಡಿದ್ದ ಇಪ್ಪತ್ತಾರರ ಹರೆಯದ ಗೌತಮ್ ಎಂಬ ಪೋಕರಿ ಜತೆ ಚಕ್ಕಂದ ಶುರು ಹಚ್ಚಿಕೊಳ್ಳುತ್ತಾಳೆ. ಇದು ಕಾರ್ತಿಕ್‌ನ ಕೆರಳಿಸುತ್ತದೆ.

ಐದು ಲಕ್ಷ ಸುಪಾರಿ

ಮರ್ಯಾದೆಯಾಗಿ ಗಂಡನ ಮನೆ ಹೋಗು. ಆ ಗೌತಮ್‌ನ ಸಹವಾಸ ಬಿಟ್ಟುಬಿಡು. ಸಂಸಾರ ನೆಟ್ಟಗೆ ಮಾಡಿಕೋ ಎಂದು ಕಾರ್ತಿಕ್ ತಂಗಿಗೆ ತರಾಟೆಗೆ ತೆಗೆದುಕೊಳ್ಳುವುದು ಜೋರಾಗುತ್ತದೆ. ಇದರಿಂದ ಕಾವ್ಯಳಲ್ಲಿ ಅಣ್ಣನ ಬಗ್ಗೆ ಆಕ್ರೋಶ-ದ್ವೇಷ ಶುರುವಾಗುತ್ತದೆ. ಆಕೆಗೆ ಗಂಡನ ಮನೆಗೆ ಹೋಗಲು ಮನಸ್ಸೇ ಇರುವುದಿಲ್ಲ. ಗೌತಮ್‌ನ ಅನೈತಿಕ ಮೈತ್ರಿಯೂ ಬಿಡಲಾಗಲಿಲ್ಲ. ಇನ್ನೂ ಇಪ್ಪತ್ತೈದರ ಹರೆಯದ ಕಾವ್ಯಳನ್ನು ಅಣ್ಣ ಗೌತಮ್‌ನಿಂದ ದೂರಾಗಿಸಲು ಪ್ರಯತ್ನಿಸಿದಂತೆಲ್ಲ ಆಕೆಯ ತೆವಲೂ ಹೆಚ್ಚಾಗುತ್ತದೆ. ಅಣ್ಣನ ಕಿರಿಕಿರಿ ತಡೆಯಲಾಗದೆ ಕಾವ್ಯ ಆತನ ಕೊಂದೇ ಹಾಕುವ ನಿರ್ಧಾರಕ್ಕೆ ಬರುತ್ತಾಳೆ.

ಬಾಯ್‌ಫ್ರೆಂಡ್ ಗೌತಮ್‌ಗೆ ಅಣ್ಣನ ಮೇಲೆ ಹಲ್ಲೆ ಮಾಡಿ ಪಳಗಿಸಲು ಹೇಳುತ್ತಾಳೆ. ಇದು ಸಾಧ್ಯವಾಗದ ಕೆಲಸ. ಇದರಿಂದ ಸಮಸ್ಯೆ ಸಿಕ್ಕುಸಿಕ್ಕಾಗುತ್ತದೆ ಎಂದು ಗೌತಮ್ ಹೇಳುತ್ತಾನೆ. ಆಗಾಕೆ ಕಾರ್ತಿಕ್ ಖತಮ್ ಮಾಡಿಬಿಡೋಣ ಅಂತಾಳೆ. ನೀನೇ ಕಾರ್ತಿಕ್‌ನ ಮುಗಿಸಿ ಬಿಡು ಅಂತಾಳೆ. ಅದಕ್ಕೆ ಗೌತಮ್ ಒಪ್ಪುವುದಿಲ್ಲ, ತಾನೊಬ್ಬ


⏭ 11




ಚೆಡ್ಡಿಗಳ ಪ್ರತಿಭಟನೆಗಳಲ್ಲಿ ಕಾವ್ಯಶ್ರೀ



ನಳಿನ್‌ನ ಬೆಂಕಿ ಭಾಷಣ


B.S. Yeddyurappa
@BSYBJP
Visited the family of murdered Hindu Karyakarta Sh.Karthik Raj at Mangaluru to offer condolences.
#MurderBhagya by Congress govt
ಕಾರ್ತಿಕ್ ಮನೆಯಲ್ಲಿ ಯಡ್ಡಿ ಮೊಸಳೆ ಕಣ್ಣೀರು
10:17 AM · 31 Oct 16

ಸಂತೋಷ್ ಎಂಬ ಅಂಕುಶ!



* ಶ್ರದ್ಧೆ ಪರಿಶ್ರಮ, ಸಂತೋಷವೇ ಗೆಲುವಿಗೆ ಮೂಲ!
* ಸಂತೋಷವಿದ್ದರೆ ವಿಜಯ ನಿಶ್ಚಿತ!!
* ಗೆಲುವಿಗೆ 'ಸಂತೋಷ'ವೇ ಸೂತ್ರ!!!

ಮೇ 6 ರಿಂದ ಎರಡು ದಿನಗಳ ಕಾಲ ಮೈಸೂರಿನಲ್ಲಿ ನಡೆದ ರಾಜ್ಯ ಬಿಜೆಪಿ ಕಾರ್ಯಕಾರಿಣಿಯ ವಿಲಕ್ಷಣ ವಿಶೇಷವೆಂಬಂತೆ ಸಮಾವೇಶದ ಕೇಂದ್ರ ಸ್ಥಾನ ರಾಜೇಂದ್ರ ಭವನ ಮತ್ತದರ ಪಕ್ಕದ ಜೆಎಸ್‌ಎಸ್ ಆಸ್ಪತ್ರೆ ಸುತ್ತಮುತ್ತಲ ರಸ್ತೆ ಬದಿ ಮೇಲ್ಕಂಡ ಪದಪುಂಜವೊಂದರ ನಿಗೂಢ ಫ್ಲೆಕ್ಸ್‌ಗಳೇ ರಾರಾಜಿಸುತ್ತಿದ್ದವು. ಬಿಜೆಪಿಯ ಕಮಲ ಜೊತೆಗೆ ದೀನದಯಾಳು ಉಪಾಧ್ಯಾಯ, ಗೋಲ್ವಾಲ್ಕರ್, ಶ್ಯಾಂಪ್ರಸಾದ್ ಮುಖರ್ಜಿ, ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗ್ವತ್ ಮುಂತಾದವರ ಭಾವಚಿತ್ರವಿದ್ದ ಇಂಥ ವಿಶಿಷ್ಟ ಭಿತ್ತಿಫಲಕಗಳ ಕೆಳಗೆ ಈ ಥರದ 'ಸಂತೋಷ್'ಭರಿತ ಸಾಲುಗಳಿದ್ದವು!

ಕೇವಲ ಸಂತೋಷವಿದ್ದುಬಿಟ್ಟರೆ ಅದ್ಹೆಗೆ ಗೆಲುವು ನಿಶ್ಚಿತವೋ? ಸಂತೋಷ ಮಾತ್ರವೊಂದೇ ಹೇಗೆ ಗೆಲುವಿಗೆ ಸೂತ್ರವೆನಿಸುತ್ತೆ ಭಗವಂತನೊಬ್ಬನೇ ಬಲ್ಲನೇನೋ! ಆದರೆ ಈ ಸಂತೋಷ ಎಂಬ ಪದದ ಸುತ್ತ ವಿಶಿಷ್ಟ ಆವರಣಕಗಳ ಚಿಹ್ನೆ ಹಾಕಲಾಗಿತ್ತು, ಶ್ರದ್ಧೆ ಪರಿಶ್ರಮಗಳೇನೋ ಸರಿ. ಇವುಗಳೇ ಈಡೇರದೆ ಸಂತೋಷವೆಲ್ಲಿಂದ ಬರಲು ಸಾಧ್ಯ?

ಇಂಥ ವಿಚಿತ್ರ, ವಿಲಕ್ಷಣ ಭಿತ್ತಿಫಲಕಗಳನ್ನು ಮೈಸೂರಿನ ರಾಜೇಂದ್ರ ಭವನದ ಸುತ್ತಮುತ್ತ ಹಾಕಿದ್ದು 'ಬಿಜೆಪಿ ಮತದಾರರ ವೇದಿಕೆ' ಎಂಬ ನಿಗೂಢ ಸಂಘಟನೆಯೊಂದರ ಹೆಸರಲ್ಲಿ!

ಈ ಬಿಜೆಪಿ ಮತದಾರರ ವೇದಿಕೆಯೆಂಬ ಸಂಘಟನೆ ಅದ್ಯಾವತ್ತು ಜನ್ಮ ತಾಳಿತೋ ಬಲ್ಲವರಿಲ್ಲ, 'ಮಿಷನ್ 150' ಎಂಬ ಇಂಗ್ಲಿಷ್ ಶೀರ್ಷಿಕೆಯಡಿ ಕರ್ನಾಟಕದ ಭೂಪಟದ ಸಮೇತ ವಿನ್ಯಾಸಗೊಳಿಸಿದ್ದ ಚಿತ್ರ ಭಿತ್ತಿಯಲ್ಲಿ ನಡುವೆ ಕಮಲ, ಎಡಕ್ಕೆ ಯಡ್ಡಿ ಮತ್ತು ಈಶ್ವರಪ್ಪರ ತಲೆಗಳಾದರೆ ಬಲಕ್ಕೆ ಸಂತೋಷ್‌ಜಿ ಎಂಬ ನಿಗೂಢ ನಾಯಕನ ಜೊತೆ ಪ್ರಧಾನಿ ಮೋದಿಯ ತಲೆ!

ಬಿಜೆಪಿಯ ಕೇಂದ್ರ ಮಂತ್ರಿಗಳಾದ ಅನಂತ್‌ಕುಮಾರ್, ಸದಾನಂದ ಗೌಡ, ಜಿಗಜಿಣಗಿ, ರಾಜ್ಯ ನಾಯಕರಾದ ಶೆಟ್ಟರ್, ಅಶೋಕ್, ಜೋಷಿ ಮುಂತಾದವರ್ಯಾರದ್ದೂ ಫೋಟೋಗಳಿಲ್ಲದೆ ಯಡ್ಡಿಯ ಪಕ್ಕ ಈಶ್ವರಪ್ಪ ಮತ್ತು ಮೋದಿಯ ಪಕ್ಕ ಸಂತೋಷ್‌ಜಿ ಎಂಬಾತನ ಫೋಟೋ ಹಾಕಿದ್ದ ಇಂಥ ಭಿತ್ತಿಫಲಕಗಳನ್ನು ಹಾಕಿದ ಕೆಲವೇ ಗಂಟೆಗಳಲ್ಲಿ ಮೈಸೂರಿನ ಯಡ್ಡಿ ನಿಷ್ಠ ಕಾರ್ಯಕರ್ತರ ಪಡೆ ಕಿತ್ತೆಸೆಯಿತು. ಹಾಗೆ ಹಾಕಿದ್ದ ಫಲಕಗಳನ್ನೆಲ್ಲ ಕಿತ್ತು ಹಾಕುತ್ತಿದ್ದ ದೃಶ್ಯಾವಳಿಗಳನ್ನು ಟೀವಿ ಚಾನಲ್ಲೊಂದು 'ಬ್ರೇಕಿಂಗ್ ನ್ಯೂಸ್' ಮಾಡಿಯೂ ಬಿತ್ತರಿಸಿತು. ಅಲ್ಲಿಗೆ 'ಸಂತೋಷವೇ ಮೂಲ'ವೆಂಬ ಮೈಸೂರಿನ ಫ್ಲೆಕ್ಸ್ ಕಿತಾಪತಿಗೆ ತಾತ್ಕಾಲಿಕ ವಿದಾಯ ಬಿದ್ದಿತ್ತಾದರೂ ಬೆಂಕಿ ಮಾತ್ರ ಆರಲೇ ಇಲ್ಲ. ಬಿಜೆಪಿ ಕಾರ್ಯಕಾರಿಣಿಯ ವೇದಿಕೆಯಲ್ಲಿ ಕಾಟಾಚಾರಕ್ಕೂ ಯಡ್ಡಿ ಅಪ್ಪಿತಪ್ಪಿಯೂ 'ಈಶ್ವರಪ್ಪ' ಎಂಬ ಪದ ಬಳಸಲಿಲ್ಲ, ಇತ್ತ ಈಶ್ವರಪ್ಪ ಬೆಂಬಲಿಗರ ಹಾವಳಿಯೇನೂ ಕಮ್ಮಿಯಿರಲಿಲ್ಲ.

ಕಾರ್ಯಕಾರಿಣಿಯ ಮೊದಲ ದಿನವೇ ಮುಂದಿನ ಮುಖ್ಯಮಂತ್ರಿ ಈಶ್ವರಪ್ಪಗೆ ಜಯವಾಗಲಿ ಎಂಬ ಘೋಷಣೆ ಮೊಳಗಿಸಿದರು. ಯಡ್ಡಿಗೆ ಸವಾಲೆಂಬಂತೆ ಈಶ್ವರಪ್ಪ ಆಗಮನವಾಗುತ್ತಿದ್ದಂತೆ ಹಾರ, ತುರಾಯಿ ಹಾಕಿ ಜೈಕಾರ ಕೂಗುತ್ತಿದ್ದರು. ಇದೆಲ್ಲಕ್ಕೂ ಮಿಗಿಲಾಗಿ ಸಮಸ್ತ ಕಾರ್ಯಕಾರಿಣಿಯ ಕಣ್ಣು ಕುಕ್ಕಿದ್ದೇ 'ಸಂತೋಷ್' ಹೆಸರಿನ ನಿಗೂಢ ಭಿತ್ತಿಫಲಕಗಳು. ಅದನ್ನು ಮೊದಲು ಗಮನಿಸಿದ್ದೇ ಶೋಭಕ್ಕ. ಬೆಳಗ್ಗೆ ರಾಜೇಂದ್ರ ಭವನಕ್ಕೆ ಕಾರನ್ನೇರಿ ಬರುತ್ತಿದ್ದ ಶೋಭಕ್ಕ ಎಲ್ಲೆಂದರಲ್ಲಿ ರಾರಾಜಿಸುತ್ತಿದ್ದ 'ಸಂತೋಷ್' ಫ್ಲೆಕ್ಸುಗಳನ್ನು ಕುರಿತು ಯಡ್ಡಿಯ ಕಿವಿಯೂದಿದ್ದಾರೆ. ಯಡ್ಡಿಯ ಪಿತ್ಥ ನೆತ್ತಿಗೇರಿದೆ. ತಕ್ಷಣವೇ ತನ್ನ ಮೈಸೂರಿನ ಬಂಟನೊಬ್ಬನನ್ನು ಕರೆದು 'ಹುಡುಹುಡುಕಿ ಕಿತ್ತು ಹಾಕಿ' ಎಂದು ಸಿಡುಕಿಬಿಟ್ಟರಂತೆ. ಕೇವಲ ಒಂದೇ ಗಂಟೆಯಲ್ಲಿ ಇಂತಹ ಬ್ಯಾನರುಗಳನ್ನೆಲ್ಲ ಯಡ್ಡಿ ಬಂಟರು ನಾಪತ್ತೆ ಮಾಡಿಬಿಟ್ಟರು.

ಹೀಗೆ ಯಡ್ಡಿಯನ್ನು ಮೈಸೂರಿನಲ್ಲೂ ಬೆಂಬಿಡದೆ ಕಾಟ ಕೊಟ್ಟ ಇಂಥ ನಿಗೂಢ ಫ್ಲೆಕ್ಸುಗಳ ಮೂಲಪುರುಷನೇ ಸಂತೋಷ್‌ಜಿ ಅಲಿಯಾಸ್ ಬಿ.ಎಲ್. ಸಂತೋಷ್!

ಸದ್ಯ ಬಿಜೆಪಿಯ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ. ವಯಸ್ಸು ಹೆಚ್ಚೆಂದರೆ ಐವತ್ತಿರಬೇಕು. ಪಕ್ಕಾ ಆರೆಸ್ಸೆಸ್ ಕಟ್ಟಾಳು. ಹಣೆಯಲ್ಲಿ ಕುಂಕುಮ, ಎಡಗೈಗೆ ಕೇಸರಿದಾರ, ಸದಾ ಬಿಳಿ ಪಂಚೆ, ಬಿಳಿ ಅಂಗಿ ತೊಟ್ಟು ಯಾವುದೋ ಮಠವೊಂದರ ಧರ್ಮಾಧಿಕಾರಿಯಂತೆ, ದೇವಮಾನವನ ಸೋಗಿನ ಜ್ಯೋತಿಷಿಯಂತೆ ಕಂಗೊಳಿಸುವ ಸಂತೋಷ್ ಅರ್ಥಾತ್ ಬಿಜೆಪಿಗಳ ಪಾಲಿನ ಸಂತೋಷ್'ಜಿ' ಈ ಹಿಂದೆ ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯ ಬಿಜೆಪಿಯ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿದ್ದ. ರಾಜ್ಯದ ಬಿಜೆಪಿಯ ಸಂಘಟನಾ ಸೂತ್ರಗಳೆಲ್ಲವನ್ನೂ ನಿಭಾಯಿಸಲೆಂದೇ ಆರೆಸ್ಸೆಸ್ ಆಯ್ದು ಆತನನ್ನೇ ಯಡ್ಡಿಯ ವಿರುದ್ಧ ಪ್ರತಿಷ್ಠಾಪಿಸಿತ್ತು, ಛೂಬಿಟ್ಟಿತ್ತು.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದು ಮುಖ್ಯಮಂತ್ರಿಯಾದ ಮೇಲೆ ಸಂತೋಷ್‌ಜಿಯ ಜಾಗಕ್ಕೆ ಮತ್ತೊಬ್ಬ ಆರೆಸ್ಸೆಸ್ ಪ್ರಚಾರಕ ಅರುಣ್‌ಕುಮಾರ್‌ರನ್ನು ಸಂಘ ನೇಮಿಸಿತಾದರೂ ಪಕ್ಷದ ಮೇಲೆ ಸಂತೋಷ್ ಹಿಡಿತವೇನೂ ಕಮ್ಮಿಯಾಗಲಿಲ್ಲ. ಸಂತೋಷ್ ರಾಷ್ಟ್ರ ಬಿಜೆಪಿಯ ಸಹಸಂಘಟನಾ ಕಾರ್ಯದರ್ಶಿ ಹುದ್ದೆಗೆ ಬಡ್ತಿ ಪಡೆದು ಮತ್ತೆ ಕರ್ನಾಟಕಕ್ಕೆ ವಕ್ಕರಿಸಿದ್ದ. ಇದರರ್ಥ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್‌ಕುಮಾರ್ ಕೂಡ ಸಂತೋಷ್‌ಜಿಯ ನಿಷ್ಠ ಮತ್ತು ಸಂತೋಷ್ ಮೂಲಕವೇ ಆ ಹುದ್ದೆಗೆ ನೇಮಕಗೊಂಡಿದ್ದ!

ಮೂಲತಃ ಉಡುಪಿಯ ಕುಂದಾಪುರದ ಶಿವಳ್ಳಿ ಬ್ರಾಹ್ಮಣನಾದ ಬಿ.ಎಲ್. ಸಂತೋಷ್ ರಾಜ್ಯ ಕಂಡ ಘಟಾನುಘಟಿ ಆರೆಸ್ಸೆಸ್ ಪ್ರಚಾರಕರಾದ ಜೈದೇವ, ರಾಮಣ್ಣ ಹೊಸಬಾಳೆ, ಮಂಗೇಶ್ ಭೇಂಡೇ ಇತ್ಯಾದಿಗಳ ನಂತರದ ತಲೆಮಾರಿನ ಅತ್ಯಂತ ಚಾಲಾಕಿ ಮತ್ತು ಸೂಕ್ಷ್ಮ ತಂತ್ರಗಾರಿಕೆಯ ಪ್ರಚಾರಕನೆಂಬುದರಲ್ಲಿ ಎರಡು ಮಾತಿಲ್ಲ. ಕರಾವಳಿಯ ಕಾರ್ಕೋಟಕ ಕಲ್ಲಡ್ಕ ಪ್ರಭಾಕರ್ ಭಟ್ಟನ ಗರಡಿಯಲ್ಲಿ ಪಳಗಿದ ಕಿಲಾಡಿ. ಆತನ ವ್ಯವಹಾರವೇನಿದ್ದರೂ ಸಂಘ ಪರಿವಾರದ ಹುತ್ತವಾದ ಕೇಶವಕೃಪಾದ ಜೊತೆಗೆಯೇ. ಬೆಳಗ್ಗೆ ಎಂಟೂವರೆಗೆ ಸರಿಯಾಗಿ ಮಲ್ಲೇಶ್ವರದ ಬಿಜ… ಕಚೇರಿಗೆ ಕಾಲಿಟ್ಟನೆಂದರೆ ಹೊರಡುತ್ತಿದ್ದದ್ದು ರಾ… ಎಂಟೂವರೆಗೆ. ರಾಜ್ಯದ ಉದ್ದಗಲಕ್ಕೂ ಆರೆಸ್ಸೆ… ಪ್ರಚಾರಕರನ್ನೇ ಹುಡುಹುಡುಕಿ ಪಕ್ಷದ ಆಯಕಟ್ಟಿ… ಹುದ್ದೆಗಳಿಗೆ ನೇಮಿಸಿದ. ಯಡ್ಡಿ, ಈಶ್ವರಪ್ಪ, ಶೆಟ್ಟರ್, ಗ… ಮುಂತಾದವರೆಲ್ಲ ಸರ್ಕಾರದ ಉಸಾಬರಿಯ… ಬಿಜಿಯಾಗಿದ್ದರೆ ಸಂತೋಷ್ ಅಂಥವರ ವಿರು… ಕಣ್ಣಿಡುವುದರಲ್ಲಿ ಮುಳುಗಿದ್ದ. ಇದೆಲ್ಲದರ ಪರಿಣಾಮ… ಯಡ್ಡಿ ಜೈಲು ಪಾಲಾಗಿದ್ದು. ಅಂದರೆ ಲೋಕಾಯು… ಸಂತೋಷ್ ಹೆಗ್ಡೆಯವರ ತಂದೆ ಎ.ಎಸ್. ಹೆಗ್ಡೆಯವರಿಗೆ… ಜನಸಂಘದ ಹಿನ್ನೆಲೆಯನ್ನು ಬಳಸಿಕೊಂಡೇ ಸಂ… ಪರಿವಾರದ ಜಾಲ ವ್ಯವಸ್ಥಿತವಾಗಿ ಯಡ್ಡಿಯ… ಜೈಲುಪಾಲಾಗಿಸಿತ್ತು?

ಇದರಲ್ಲಿ ಸತ್ಯಾಸತ್ಯತೆಯಿಷ್ಟಿತ್ತೋ ಗೊತ್ತಿಲ್ಲ, ಆದ… ಯಡ್ಡಿ ಮಾತ್ರ ಸಂತೋಷ್ ಮೂಲಕ ಆರೆಸ್ಸೆಸ್ ನಡೆಸ… ಷಡ್ಯಂತ್ರವೇ ತಾನು ಜೈಲುಪಾಲಾಗಿದ್ದರ ಮೂಲವೆಂ… ಭಾವಿಸಿದರು. ಅದೇ ಯಡ್ಡಿ ಬಿಜೆಪಿ ತೊರೆಯ… ಕಾರಣವಾಯಿತು. ಕೆಜೆಪಿಯ ಸ್ಥಾಪನೆಗೂ ಮೂಲವಾಯಿ… ಮತ್ತು ಆ ಮೂಲಕವೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿ…

ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ದಿನ ಸರ್ಕಾರಕ್ಕೆ ಪರ್ಯಾ… ಶಕ್ತಿ ಕೇಂದ್ರದಂತಿದ್ದ ಸಂತೋಷ್ ಆಗಲೂ ಈಶ್ವರಪ್ಪ ಅಂ… ಕಂಪನಿಯ ಗಾಡ್‌ಫಾದರ್. ಮುಖ್ಯಮಂತ್ರಿಯ ವಿರು… ಗಣಿ ರೆಡ್ಡಿಗಳ ಕ್ಯಾತೆ ಒಂದೆಡೆಯಾದರೆ ಮತ್ತೊಂದ… ಹಾವಳಿಯಿಟ್ಟದ್ದು ಈಶ್ವರಪ್ಪ. ಸಂತೋಷ್ ಕೊಡು… ಕುಮ್ಮಕ್ಕು ಪ್ರೋತ್ಸಾಹದ ಫಲವಾಗಿಯೇ ಈಶ್ವರ… ಪದೇಪದೇ ಯಡ್ಡಿಯ ಕಾಲೆಳೆಯುತ್ತಿದ್ದದ್ದು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದು

⏭ 09



ಶಾಣಪ್ಪನ 'ದಲಿತ' ಸಿಟ್ಟೂ, ಹಡಗಿನ ಕತೆಯೂ

ಬಿಜೆಪಿ ಎಂಬ ಮನುವ್ಯಾಧಿ ಪಕ್ಷದೊಳಗೆ ಅಂತ್ಯಜ ದಲಿತರ ಬಗ್ಗೆ ಎಂಥಾ ನಿಕೃಷ್ಟ ಮನಃಸ್ಥಿತಿ ಇದೆ ಎಂಬುದಕ್ಕೆ ಮೈಸೂರಿನಲಿ ನಡೆದ ಕಾರ್ಯಕಾರಿಣಿ ಸಭೆ ಸಾಕ್ಷಿಯಾಯ್ತು. ಸಭೆಯ ಮೊದಲ ಗೋಷ್ಠಿ ನಡೆದಿತ್ತು. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಕುರಿತ ವಿಷಯ ಮಂಡನೆ ಮಾಡಿದ್ದರು. ಅದನ್ನು ಮೊದಲಿಗೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್ ಅನುಮೋದಿಸಿದರು. ತರುವಾಯ ವಿಧಾನ ಪರಿಷತ್ ಪ್ರತಿಪಕ್ಷ ಉಪನಾಯಕ ಕೆ.ಬಿ.ಶಾಣಪ್ಪ ಅದನ್ನು ಅನುಮೋದಿಸಬೇಕಿತ್ತು. ಅವರನ್ನು ಆಹ್ವಾನಿಸುತ್ತಾ ಸಂಸದೆ ಶೋಭಾ ಕರಂದ್ಲಾಜೆ ಶಾಣಪ್ಪರನ್ನು ದಲಿತ ನಾಯಕ ಎಂದು ಕರೆದರು. ಇದರಿಂದ ಕುಪಿತಗೊಂಡ ಶಾಣಪ್ಪ "ದಲಿತ ನಾಯಕ ಅಂತ ಯಾಕೆ ಕರೆಯುತ್ತೀರಿ, ಬಿಜೆಪಿ ನಾಯಕ ಎಂದು ಕರೆಯಲು ಕಷ್ಟವೇ" ಎಂದು ತಮ್ಮ ಸಿಟ್ಟು ಹೊರಹಾಕಿದರು. ತಮ್ಮನ್ನು ತಾವು ಮಾರ್ಕ್ಸ್‌ವಾದಿ ಎಂದು ಕರೆದುಕೊಳ್ಳುತ್ತಿದ್ದ ಶಾಣಪ್ಪನಂತಹ ದಲಿತ ನಾಯಕನೇ



ತನ್ನನ್ನು ಬಿಜೆಪಿಯೊಳಗೆ ದಲಿತ ನಾಯಕನೆಂದು ಗುರುತಿಸಿಕೊಳ್ಳಲು ಹಿಂದೇಟು ಹಾಕುತ್ತಾರೆಂದರೆ ಆ ಪಾರ್ಟಿಯೊಳಗೆ ದಲಿತರಿಗೆ ಎಂಥಾ 'ಗೌರವ'ಗಳು ಸಿಗುತ್ತಿರಬಹುದು ಲೆಕ್ಕಹಾಕಿ. ದಲಿತರನ್ನು ಪ್ರೋತ್ಸಾಹಿಸುವ, ಗೌರವಿಸುವ ಪರಂಪರೆ ಆ ಪಕ್ಷದೊಳಗೆ ಇದ್ದಿದ್ದರೆ, ತಮ್ಮನ್ನು ಹಾಗೆ ಕರೆದದ್ದಕ್ಕೆ ಶಾಣಪ್ಪನವರು ಖುಷಿಯಾಗಬೇಕಿತ್ತು. ಅವರು ಕಸಿವಿಸಿಗೊಳ್ಳುತ್ತಾರೆಂದರೆ ಅದು ಬಿಜೆಪಿಯ ಬಣ್ಣವನ್ನು ಬಯಲು ಮಾಡುತ್ತಲ್ಲವೇ!

ಇನ್ನು ಬಿಜೆಪಿಯ ಆಂತರಿಕ ತಿಕ್ಕಾಟವನ್ನು ಸುಪ್ತವಾಗಿ ತೆರೆದಿಟ್ಟ ಶಾಣಪ್ಪ ಹೇಳಿದ ಕತೆಯೊಂದು ಸಭೆಯ ಗಮನ ಸೆಳೆಯಿತು. ಒಂದು ಹಡಗಿನಲ್ಲಿ ಹಲವರು ಪ್ರಯಾಣಿಸುತ್ತಿದ್ದರಂತೆ. ಆಗ ಒಬ್ಬ ವ್ಯಕ್ತಿ ಬಾಣದಿಂದ ಹಡಗಿನ ಒಂದು ಭಾಗವನ್ನು ಕುಟ್ಟುತ್ತಿದ್ದನಂತೆ. ಈ ಘಟನೆಯಿಂದ ಉಳಿದವರು ಈತ ಎಲ್ಲರನ್ನೂ ಮುಳುಗಿಸುತ್ತಾನೆ ಎಂದು ಭಾವಿಸಿ ಎಲ್ಲರೂ ಸೇರಿ ಆತನನ್ನೇ ಎತ್ತಿ ಸಮುದ್ರಕ್ಕೆ ಎಸೆದರಂತೆ ಎಂಬುದು ಶಾಣಪ್ಪನ ಕತೆಯ ಸಾರಾಂಶ. ಬ್ರಿಗೇಡ್ ಕಟ್ಟಿಕೊಂಡು ಮಂಗಾಟಕ್ಕಿಳಿದಿರುವ ಈಶ್ವರಪ್ಪ ಮತ್ತು ಲಿಂಗಾಯತ ಓಟ್ ಪೊಲಿಟಿಕ್ಸ್ ಮದವೇರಿದ ಯಡಿಯೂರಪ್ಪ ಈ ಇಬ್ಬರಿಗೂ ಕತೆ ಪರೋಕ್ಷವಾಗಿ ಬಿಸಿ ಮುಟ್ಟಿಸುವಂತಿತ್ತು. ■

ಕೇಸರಿ ಜಾಗದಲ್ಲಿ ಹಳದಿ ಬಣ್ಣದ ಹಕೀಕತ್ತು


ಬಿಜೆಪಿಯ ಸಭೆ ಅಂದರೆ ಅದು ಟಾಪ್-ಟು-ಬಾಟಮ್ ಕೇಸರಿಮಯ. ಯಾವ ನಗರದಲ್ಲಿ ಸಭೆ ನಡೆಯುತ್ತ… ಆ ನಗರದ ಬೀದಿಗಳ ತುಂಬಾ ಕೇಸರಿ ಬಾವುಟಗಳದ್ದೇ ಕಾರುಬಾರು. ಆದರೆ ಈ ಸಲ ಮೈಸೂರಿನಲ್ಲಿ ಕೇಸ… ಬಾವುಟಗಳ ನಡುವೆ ಹಳದಿ ರಂಗೂ ತೂರಿಕೊಂಡು ಅಚ್ಚರಿ, ಗೊಂದಲಗಳನ್ನು ಒಟ್ಟೊಟ್ಟಿಗೆ ಉಂಟುಮಾಡಿ… ಬಿಜೆಪಿಯ ಕೆಲ ಧ್ವಜಗಳಲ್ಲಿ ಕೇಸರಿ ಬಣ್ಣಕ್ಕೆ ಬದಲಾಗಿ ಹಳದಿ ಬಣ್ಣವನ್ನು ಬಳಸಲಾಗಿತ್ತು. ಈ ಹಳದಿ ಬಣ್ಣ… ಹಾಲಿ ನಡೆಯುತ್ತಿರುವ ಈಶು-ಯಡ್ಡಿ ಕಾಳಗಕ್ಕೂ ಸಂಬಂಧವಿದೆ. ಈಶ್ವರಪ್ಪ 'ಹಿಂದ'ದ ಅದೇನೆ ಜಪ ಮಾಡಿದರ… ರಾಯಣ್ಣ ಬ್ರಿಗೇಡ್ ಕಟ್ಟಿಕೊಂಡಿದ್ದೇ ಕುರುಬ ಜಾತಿಯ ರಾಜಕಾರಣಕ್ಕಾಗಿ. ಹಾಗಾಗಿ ಕುರುಬ ಸಮುದಾಯ… ಸೂಚಕವಾಗಿ ಹಳದಿ ಬಣ್ಣವನ್ನೇ ತಮ್ಮ ಬ್ರಿಗೇಡ್‌ನ ಬಣ್ಣವಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಬಾವುಟಗ… ಶಾಲುಗಳು, ತಲೆಯ ಮುಂಡಾಸುಗಳು ಎಲ್ಲವೂ ಹಳದಿಮಯ. ಅದೇ ಹಳದಿ ಮೈಸೂರಿನ ಕೇಸರಿಗೆ ಬದ… ಕಾಣಿಸಿಕೊಂಡದ್ದು ಈಶ್ವರಪ್ಪನ ಬ್ರಿಗೇಡ್ ಛಾಯೆಯ ಅನುಮಾನ ಮೂಡಿಸಿತ್ತು.

ಆದರೆ ಅದಕ್ಕಿಂತಲೂ ದಟ್ಟ ಅನುಮಾನ ಬಂದದ್ದು ಯಡ್ಡಿಯ ಮೇಲೆ. ಯಾಕೆಂದರೆ ಯಡ್ಡಿ ಹಿಂ… ಬಿಜೆಪಿಯಿಂದ ಹೊರಬಂದು ಕೆಜೆಪಿ ಕಟ್ಟಿಕೊಂಡಿದ್ದಾಗ ತಮ್ಮ ಪಕ್ಷದ ಬಣ್ಣವನ್ನಾಗಿ ಮಾಡಿಕೊಂಡದ್ದು ಹಳದಿ, ಬ… ಮತ್ತು ಹಸಿರನ್ನು. ಬಿಜೆಪಿಯದು ಕೇಸರಿ ಮತ್ತು ಹಸಿರು ಬಣ್ಣ. ಕೇಸರಿಯ ಜಾಗಕ್ಕೆ ಹಳದಿ ಬಂದು ಕುಳಿತರೆ, ಬ… ಹಸಿರು ಬಣ್ಣದೊಂದಿಗೆ ಸೇರಿಕೊಂಡು ಅದು ಹೆಚ್ಚುಕಮ್ಮಿ ಹಳದಿ-ಹಸಿರು ಕೆಜೆಪಿ ಬಾವುಟದಂತೆಯೇ ಕಂಡುಬರು… ಮೈಸೂರಿನಲ್ಲಿ ಅಲ್ಲಲ್ಲಿ ಕಂಡದ್ದೂ ಅಂತದ್ದೇ ಹಳದಿ ಮತ್ತು ಹಸಿರು ಬಾವುಟಗಳು.

ಹೀಗೆ ಹಳದಿ ಬಣ್ಣಕ್ಕೆ ಎರಡು ಸಂಬಂಧಗಳಿರುವಂತೆಯೇ ಅದು ಕಾಣಿಸಿಕೊಂಡಿದ್ದರ ಹಿಂದೆ ಎರಡು ವಿಭ… ಸಾಧ್ಯತಾ ಥಿಯರಿಗಳೂ ಕೇಳಿಬರುತ್ತಿವೆ. ಬಿಜೆಪಿಯೊಳಗೆ ತನ್ನ ಬೆಂಬಲಿಗರದ್ದೇ ಪ್ರಭಾವ, ಬಳಗ ಹೆಚ್ಚಿದೆ ಎಂಬುದ… ತೋರಿಸಿಕೊಳ್ಳಲು ಅಥವಾ ತನಗೆ ಪಕ್ಷದೊಳಗೆ ಇದೇರೀತಿ ಇರಿಸುಮುರಿಸು ಮುಂದುವರೆದರೆ ಹಿಂದೆ ಮಾಡಿದ… ಪಕ್ಷಬಿಟ್ಟು ಕೆಜೆಪಿ ಕಟ್ಟಲೂ ಸಿದ್ಧ ಎಂಬ ಸಂದೇಶವನ್ನು ವರಿಷ್ಠರಿಗೆ ರವಾನಿಸಲು ಯಡ್ಡಿ ಹೀಗೆ ಮಾಡಿಸಿದ್ದಾರೆ ಎಂ… ಮಾತುಗಳು ಒಂದೆಡೆ. ಮತ್ತೊಂದು ಕಡೆ ಬಿಜೆಪಿಯೊಳಗೆ ಈಗ ಮೂಲ ಬಿಜೆಪಿಗರು ಮತ್ತು ಕೆಜೆಪಿ ವಲಸಿಗ… ಎಂಬ ಎರಡು ಪಂಗಡಗಳಿದ್ದು, ಕೆಜೆಪಿ ವಲಸಿಗರು ಮೂಲ ಬಿಜೆಪಿಗರ ಮೇಲೆ ಅಟ್ಟಹಾಸ ಮೆರೆಯುತ್ತಿದ್ದಾರೆ ಎಂ… ಆರೋಪವನ್ನು ಯಡ್ಡಿಯ ಮೇಲೆ ಹೊರಿಸಲು ಈಶ್ವರಪ್ಪನ ಬ್ರಿಗೇಡಿಗರೆ ಇಂಥಾ ಕೆಜೆಪಿ ಬಾವುಟಗಳನ್ನು ಕ… ಹೈಕಮಾಂಡ್ ಕೆಂಗಣ್ಣು ಯಡ್ಡಿಯ ಮೇಲೆ ಬೀಳುವಂತೆ ಮಾಡಿದ್ದಾರೆ ಎನ್ನುವ ವಾದ.

ಅದೇನೆ ಇರಲಿ, ವ್ಯಕ್ತಿಗತವಾಗಿದ್ದ ಬಿಜೆಪಿ ಕಿತ್ತಾಟ ಈಗ ಬಣ್ಣದ ಬಾವುಟಗಳಿಗೂ ಬಂದು ರಂಗೇರ… ಶುರುವಾಗಿರೋದು ಕೇಸರಿ ಕಾರ್ಯಕರ್ತರನ್ನು ಮತ್ತಷ್ಟೂ ಗೊಂದಲಕ್ಕೆ ತಳ್ಳಿದೆ. ■ ಶು…

ಳ್ಳಾರಿ: ಬ್ರಿಗೇಡ್ ಗಾಯಕ್ಕೆ ಯಡ್ಡಿಯ ಹೊಸ 'ಮುಲಾ'ಮು!


ಶ್ವರಪ್ಪ

ಯಡಿಯೂರಪ್ಪನಿಗೆ ಈಗ ಎದುರಾಳಿ ಕಾಂಗ್ರೆಸ್, ಸ್‌ಗಿಂತ ಬಿಜೆಪಿಯೊಳಗಿನ ಬಗಲ್‌ಕಾ ದುಶ್ಮನ್‌ಗಳದ್ದೇ. ಅದರಲ್ಲೂ ಮೀಸೆ ಟ್ರಿಮ್ ಮಾಡಿದ ಾಸುರನಂತಿರುವ ಈಶ್ವರಪ್ಪ ಕನಸಲ್ಲೂ ಬಂದು ಕೊಡುತ್ತಿದ್ದಾರಂತೆ. ಏನೆಲ್ಲಾ ಸರ್ಕಸ್ ಮಾಡಿದರೂ ರಪ್ಪನ ಬಾಯಿ ಮುಚ್ಚಿಸಲು ಯಡ್ಡಿಗೆ ಾಗದಿರುವುದರ ಹಿಂದೆ ಖುದ್ದು ಆರೆಸ್ಸೆಸ್ಸೇ ಕೆಲಸ ುತ್ತಿರೋದು ರಹಸ್ಯವೇನಲ್ಲ. ಈಶ್ವರಪ್ಪನ 'ಬಿ'ಗ್ರೇಡ್ ್ಷಟದಲ್ಲಿ ತನ್ನ 150 ಮಿಷಿನ್ ಮಕಾಡೆ ಚಿಕೊಂಡು ಮುಖ್ಯಮಂತ್ರಿ ಹುದ್ದೆ ಎಲ್ಲಿ ಕೈತಪ್ಪಿ ುತ್ತದೋ ಎಂಬ ಆತಂಕದಲ್ಲಿರುವ ಯಡ್ಡಿಯ ನೆರವಿಗೆ ಬಾಯ್ ಶ್ರೀರಾಮುಲು ನಿಂತಿರೋದು ಶೋಭಾ ುಕ್ಕೆ ಕೊಂಚ ರಿಲೀಫ್ ನೀಡಿದೆಯಂತೆ. ಮೊನ್ನೆ ಮುಗಿದ ಬಿಜೆಪಿ ಕಾರ್ಯಕಾರಿಣಿಯಿಂದ ಫುಲ್ ್ಸಿನಲ್ಲಿರೋ ರಾಮುಲು ಕೊಪ್ಪಳದಲ್ಲಿ ಪತ್ರಿಕಾಗೋಷ್ಠಿ "ರಾಯಣ್ಣ ಬ್ರಿಗೇಡ್ ಎಂಬುದು ಮುಗಿದ ಅಧ್ಯಾಯ, ಲ್ಲಿ ನಾಯಕರಾದವರು ತಲೆತಗ್ಗಿಸಿ ನಡೆಯುವುದನ್ನು ಮಾಡಿಕೊಳ್ಳಬೇಕು" ಎನ್ನುವ ಮೂಲಕ ಈಶುಗೆ ನೀಡಿದ್ದಲ್ಲದೆ ಇನ್ನೇನಿದ್ದರು ಯಡಿಯೂರಪ್ಪ ದಲ್ಲಿ ಪಕ್ಷ ಸಂಘಟನೆಗೆ ಇಳಿಯಬೇಕು ಎಂಬ ನನ್ನೂ ಹೊರಡಿಸಿದ್ದಾರೆ.

ತ್ರಿಕಾಗೋಷ್ಠಿಯಲ್ಲಿ ರಾಮುಲು ಆಡಿದ ಮಾತುಗಳನ್ನು ದರೆ ಆತ ಯಡ್ಡಿಯ ಪರ ಭರ್ಜರಿಯಾಗಿ ಬ್ಯಾಟಿಂಗ್ ಲು ಸಜ್ಜಾದಂತಿದೆ. "ನಮ್ಮ ಪಕ್ಷದಲ್ಲಿ ಕೆಲವರು ಕಾರದಿಂದ ವರ್ತಿಸುತ್ತಿದ್ದಾರೆ. ಅಂತವರಿಂದಲೇ ಗಳು ಸೃಷ್ಟಿಯಾಗುತ್ತಿವೆ... ಈಶ್ವರಪ್ಪನವರು ಬ್ರಿಗೇಡ್ ೀಕು ಮತ್ತು ಬಿಡುತ್ತಾರೆ. ಏಕೆಂದರೆ ಬ್ರಿಗೇಡ್‌ನಿಂದಾಗಿ ಲ್ಲಿ ಗೊಂದಲ ಉಂಟಾಗಿದೆ. ಜೊತೆಗೆ ್‌ನಲ್ಲಿರುವವರು ಸಹ ಬಿಜೆಪಿ ಕಾರ್ಯಕರ್ತರೇ ತು ಬೇರ್ಯಾರು ಅಲ್ಲ" ಎಂಬ ಮಾತುಗಳ ಂತರ ಹೈದರಾಬಾದ್ ಕರ್ನಾಟಕದಲ್ಲಿ ಗಟ್ಟಿಯಾಗಿ ್ ಕಟ್ಟಲು ಬಯಸಿದ್ದ ಈಶುಗೆ ಮಗ್ಗುಲ ಮುಳ್ಳಾಗಿ ್ದಾರೆ ರಾಮುಲು.

ಯಚೂರಿನತ್ತ ರಾಮುಲು ಚಿತ್ತ

ಯಣ್ಣ ಬ್ರಿಗೇಡ್‌ನ ಸಂಸ್ಥಾಪಕ ಈಶ್ವರಪ್ಪನೇ ಆದರೂ ಆತನ ಶಿವಮೊಗ್ಗಕ್ಕಿಂತ ಕೊಪ್ಪಳ, ಹುಬ್ಬಳ್ಳಿ ಭಾಗದಲ್ಲೇ ಹೆಚ್ಚು ಕದಲಿಕೆಗಳನ್ನು ತೋರಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ರಾಯಣ್ಣ ಬ್ರಿಗೇಡ್‌ನ ರಾಜ್ಯಾಧ್ಯಕ್ಷನಾಗಿ ಠಳಾಯಿಸಿರುವ ರಾಯಚೂರಿನ ಪ್ರಭಾವಿ ಬಿಜೆಪಿ ನಾಯಕ ಕೆ.ವಿರೂಪಾಕ್ಷಪ್ಪ, ಕೆಲ ತಿಂಗಳ ಹಿಂದೆ ಈತ ದೊಡ್ಡ ಸಮಾವೇಶವನ್ನೂ ನಡೆಸಿದ್ದ. ಸಿಂಧನೂರು, ಮಾನ್ವಿ, ಲಿಂಗಸಗೂರು ಕ್ಷೇತ್ರಗಳಲ್ಲಿರುವ ಹಿಂದುಳಿದ ಆದರಲ್ಲೂ ಪ್ರಮುಖವಾಗಿ ಕುರುಬ ಮತಗಳ ಮೇಲೆ ಕಣ್ಣಿಟ್ಟು ಈಶ್ವರಪ್ಪ ಮತ್ತು ವಿರೂಪಾಕ್ಷಪ್ಪ ಕೆಲಸ ಮಾಡುತ್ತಿರೋದು ಎಲ್ಲರಿಗೂ ಗೊತ್ತಿರುವ ಸಂಗತಿ. ತೀರಾ ಇತ್ತೀಚೆಗೆ ಜವಳಗೇರಾ ಎನ್ನುವ ಗ್ರಾಮ ಮಟ್ಟದ ಕಾರ್ಯಕ್ರಮಕ್ಕೂ ಈಶು ಅತಿಥಿಯಾಗಿ ಭಾಗವಹಿಸಿದ್ದರು. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಯಡ್ಡಿ, ಬ್ರಿಗೇಡ್‌ಗೆ ಈ ಭಾಗಗಳಲ್ಲೇ ಮರ್ಮಾಘಾತ ನೀಡಲು ಹಳೇ ಶಿಷ್ಯಗಣವಾದ ರಾಮುಲು, ಜನಾರ್ದನ್ ರೆಡ್ಡಿಗಳ ಮೊರೆ ಹೋದಂತಿದೆ. ವಿರೂಪಾಕ್ಷಪ್ಪನ ರಾಯಚೂರಿಗೆ ಈಗಾಗಲೇ ಲಗ್ಗೆ ಹಾಕಿರುವ ರಾಮುಲು ಎರಡು ಬಾರಿ ಗುಪ್ತ ಪ್ರವಾಸವನ್ನೂ ಮುಗಿಸಿಬಂದಿದ್ದಾರೆ ಎಂಬ ಮಾತುಗಳು ಹೊಸ ಬಂಗಲೆಯ ಕಾಂಪೌಂಡ್ ಒಳಗೇ ಕೇಳಿಬರುತ್ತಿವೆ. ಕೆಲ ತಿಂಗಳ ಹಿಂದೆ ಲಿಂಗಸುಗೂರಿನಲ್ಲಿ ಎಸ್ಟಿ ಸಮುದಾಯದ ದೊಡ್ಡ ಸಮಾವೇಶ ನಡೆಸಿದ್ದು ಕೂಡಾ ಇದೇ ಇರಾದೆಯಿಂದ ಎನ್ನಲಾಗುತ್ತಿದೆ. ಸಿಂಧನೂರಿನಲ್ಲಿ ತಮ್ಮ ಬೆಂಬಲಿಗರ ಮೂಲಕ ಸರ್ವೆ ಮಾಡಿಸುತ್ತಿರುವ ರಾಮುಲು ಮುಂಬರುವ ವಿಧಾನಸಭಾ ಚುನಾವಣೆಯ ಒಳಗೆ ರಾಯಚೂರಿನ ಮೇಲೂ ಜಬರ್‌ದಸ್ತ್ ಹಿಡಿತ ಸಾಧಿಸಿ ವಿರೂಪಾಕ್ಷಪ್ಪನ ಬೇರುಗಳನ್ನೇ ಅಲ್ಲಾಡಿಸುವ ಆತುರದಲ್ಲಿದ್ದಾನೆ.


ಬಿ.ಶ್ರೀರಾಮುಲು ಯಡಿಯೂರಪ್ಪ


ಈ ಕಾರ್ಯಾಚರಣೆ ಸ್ವತಃ ರೆಡ್ಡಿಗಳ ಕೋರ್ ಕಮಿಟಿಯಿಂದಲೇ ಹೊರಹೊಮ್ಮಿದಂತಹುದು. ಅದನ್ನು ಪುಷ್ಟೀಕರಿಸುವಂತೆ ಇತ್ತ ರಾಮುಲು ಈಶ್ವರಪ್ಪನಿಗೆ ಟಾಂಗ್ ಕೊಟ್ಟು, ಬ್ರಿಗೇಡ್‌ಗೆ ಕೊಕ್ಕೆ ಹಾಕಿ ಕೂತರೆ ಅತ್ತ ಜನಾರ್ದನ ರೆಡ್ಡಿ ಮೊನ್ನೆ ಗದಗಿನಲ್ಲಿ ಬಿಎಸ್‌ವೈರನ್ನು ಮತ್ತೆ ಸಿಎಂ ಮಾಡುವುದೇ ನಮ್ಮ ಗುರಿ ಎಂದು ಘೋಷಿಸಿ ಯಡ್ಡಿಯ ಬೆಂಬಲಕ್ಕೆ ನಿಂತಿದ್ದಾನೆ.

ಯಡ್ಡಿ ರಥಕ್ಕೆ ರಾಮುಲು ಸಾರಥಿ

ಈಶ್ವರಪ್ಪ ಬಾಯಿಮಾತಿಗೆ ಬಗ್ಗುವ ಆಸಾಮಿಯಲ್ಲ ಅನ್ನೋದು ಯಡ್ಡಿ ಮತ್ತು ರಾಮುಲುಗೆ ಗೊತ್ತಿದೆ. ಹಾಗಾಗಿ ಅವರು ನೇರವಾಗಿ ಫೀಲ್ಡ್‌ಗೆ ಇಳಿಯಲು ನಿರ್ಧರಿಸಿದ್ದಾರೆ. ಮೇ 18 ರಿಂದ ರಾಜ್ಯಪ್ರವಾಸ ಕೈಗೊಳ್ಳುತ್ತೇನೆ ಎಂದು ಘೋಷಿಸಿದ ಯಡ್ಡಿಗೆ ಬಳ್ಳಾರಿಯಿಂದಲೇ ಪ್ರವಾಸ ಶುರು ಮಾಡುವಂತೆ ರಾಮುಲು ಆಹ್ವಾನ ನೀಡಿದ್ದಾನೆ. ಅಲ್ಲಿಗೆ ಯಡ್ಡಿಯ ರಥಕ್ಕೆ ರಾಮುಲು ಸಾರಥಿಯಾಗೋದು ಬಹುಪಾಲು ನಿಕ್ಕಿ. ಇದಕ್ಕೆ ದುಡ್ಡು ಚಿಲ್ಲಲೂ ರಾಮುಲು ಸಿದ್ಧವಾದಂತಾಗಿದೆ. ಮೇ 8ರಂದು ರಾಯಚೂರಿನಲ್ಲಿ ನಡೆಯಬೇಕಿದ್ದ ರಾಯಣ್ಣ ಬ್ರಿಗೇಡ್ ಸಭೆಗೆ ಬಿಜೆಪಿ ವರಿಷ್ಠರು ಬ್ರೇಕ್ ಹಾಕಿದ್ದೇ ತಡ ಯಡ್ಡಿ-ರಾಮುಲು ಜೋಡಿ ಅಲ್ಲಿಗೆ ನುಗ್ಗಲು ಸಿದ್ಧವಾಗಿದೆ. ಇಷ್ಟುದಿನ ಕಾಟ ಕೊಟ್ಟ ಕೀಟ ಇನ್ನೆಂದೂ ತಮ್ಮ ತಂಟೆಗೆ ಬಾರದ ರೀತಿಯಲ್ಲಿ ಕೆಲಸ ಮಾಡಲು ನಿರ್ಧರಿಸಿದ್ದಾರೆ. ಅದಕ್ಕಾಗಿ ಶ್ರೀರಾಮುಲು ಈಗಾಗಲೇ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಭೆ ನಡೆಸಿ ಬಿಜೆಪಿ ಬೆಂಬಲಿಗರ ಮತ್ತು ಮುಖಂಡರ ಜೊತೆ ಸಂಧಾನ ನಡೆಸುತ್ತಿದ್ದಾನೆ.

ರಾಮುಲುಗೇನು ಲಾಭ?

ರಾಮುಲುನ ಪಕ್ಕಾ ವ್ಯಾವಹಾರಿಕ ಬುದ್ಧಿ ಗೊತ್ತಿರುವವರಿಗೆ ಈ ರೀತಿ ಯಡ್ಡಿ ಜೊತೆ ನಿಲ್ಲುವುದರಿಂದ ಆತನಿಗೇನು ಲಾಭ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಯಾಕೆಂದರೆ ಆತ ಒಂದು ಹೆಜ್ಜೆ ಇಟ್ಟರೆ ಅದರ ಹಿಂದೆ ಹತ್ತಾರು ಆಲೋಚನೆಗಳು ಇರುತ್ತವೆ. ರೆಡ್ಡಿ ಜೈಲುವಾಸದಿಂದ ರಾಜ್ಯ ಬಿಜೆಪಿಯಲ್ಲಿ ಬಳ್ಳಾರಿ ರಿಪಬ್ಲಿಕ್ ಸಂಪೂರ್ಣವಾಗಿ ಮೂಲೆ ಗುಂಪಾಗಿದೆ. ಪ್ರತಿ ವರಮಹಾಲಕ್ಷ್ಮಿ ಹಬ್ಬಕ್ಕೆ ದತ್ತು ಅಮ್ಮನಂತೆ ಆಗಮಿಸಿ, ತಲೆ ಮೇಲೆ ಕೈಯಿಟ್ಟು, ಉಡಿ ತುಂಬಾ ದಕ್ಷಿಣೆ ಕಟ್ಟಿಕೊಂಡು ದಿಲ್ಲಿ ಸೇರುತ್ತಿದ್ದ ಸುಷ್ಮಾ ಸ್ವರಾಜ್ ಕೂಡಾ ಈಗ 'ಕಳ್ಳುಬಳ್ಳಿ' ಸಂಬಂಧ ಕಡಿದುಕೊಂಡಾಗಿದೆ. ಇಂಥಾ ಸಂದರ್ಭದಲ್ಲಿ ತಾವು ಮತ್ತೆ ಹೈಲೈಟ್‌ಗೆ ಬರಬೇಕೆಂದರೆ ಅದು ಯಡ್ಡಿಯ ಮೂಲಕ ಮಾತ್ರ ಸಾಧ್ಯ ಅನ್ನೋದು ಬಳ್ಳಾರಿ ರಿಪಬ್ಲಿಕ್‌ಗೆ ಅರ್ಥವಾಗಿದೆ. ಯಾಕಂದ್ರೆ ಯಡ್ಡಿಯ ಬಳಿಯಿರುವ ಜನಬಲಕ್ಕೆ ಮಾತ್ರ ತಮ್ಮಲ್ಲಿರುವ ಹಣಬಲದ ಅವಶ್ಯಕತೆ ಇದೆ ಎಂಬುದು ಅವರಿಗೆ ಗೊತ್ತು. ಈಶ್ವರಪ್ಪನಂತ ಡ್ಯಾಮೇಜ್ ಪೀಸಿನ ಮೇಲೆ ಕಾಸು ಸುರಿಯುವಷ್ಟು ಬಳ್ಳಾರಿ ಬ್ರಗೇಡು ಮುಠ್ಠಾಳರಲ್ಲ. ಅದೇ ಕಾರಣಕ್ಕೆ ಯಡ್ಡಿ ಪರ ಬ್ಯಾಟ್ ಬೀಸುತ್ತಿರೋದು.


ಕೆ.ವಿರೂಪಾಕ್ಷಪ್ಪ

ಒಂದುವೇಳೆ ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿಯಾದರೆ ಜನಾರ್ದನ ರೆಡ್ಡಿ ಸೇರಿದಂತೆ ಹಲವು ಕೇಸ್‌ಗಳ ವಿಚಾರ ಬಗೆಹರಿಸುವ ಪ್ಲಾನ್ ಕೂಡ ಇದೆ. ಇಡೀ ಹೈದರಾಬಾದ್-ಕರ್ನಾಟಕಕ್ಕೆ ಸದ್ಯಕ್ಕೆ ಪ್ರಭಾವಿ ನಾಯಕರು ಇಲ್ಲದಿರುವುದರಿಂದ ತಾನು ಆ ಸ್ಥಾನಕ್ಕೆ ಜಿಗಿಯಬೇಕೆಂಬ ಆಸೆ ಕೂಡ ಇದೆ. ಅಲ್ಲದೆ, ಅದೇ ರೆಡ್ಡಿ ಪಾಳಯದ ಹಿರಿತಲೆ ಕರುಣಾಕರ ರೆಡ್ಡಿ ಈಗ ರಾಮುಲುಗೆ ದುಶ್ಮನ್ ಆಗಿ ಬದಲಾಗಿದ್ದಾನೆ. ಸೈಟು ವಿಚಾರವಾಗಿ ರಾಮುಲು ಮೇಲೆ ಕರುಣಾಕರ ರೆಡ್ಡಿ ಕೋರ್ಟಿನಲ್ಲಿ ಕೇಸ್ ಜಡಿದಿದ್ದರೆ, ಜಿದ್ದಿಗೆ ಬಿದ್ದ ರಾಮುಲು ತನ್ನ ಹಿಂಬಾಲಕರ ಮೂಲಕ ಕರುಣಾಕರನ ಮೇಲೆ ಜಾತಿನಿಂದನೆಯ ಕೇಸು ಹಾಕಿಸಿದ್ದಾನೆ. ಆ ಕರುಣಾಕರನಿಗೆ ಪಾಠ ಕಲಿಸುವುದಕ್ಕೋಸ್ಕರವೂ ರಾಮುಲುಗೆ ಈಗ ಯಡ್ಡಿಯ ಬೆಂಬಲ ಬೇಕಿದೆ, ಅಧಿಕಾರ ಬೇಕಾಗಿದೆ.

ಕಳೆದ ಬಾರಿ ಹರಪನಹಳ್ಳಿಯಲ್ಲಿ ಸೋತ ಕರುಣಾಕರ ರೆಡ್ಡಿ ಈ ಬಾರಿ ಶತಾಯಗತಾಯ ಗೆಲ್ಲಲು ಹೊಂಚು ಹಾಕಿ ಕೂತಿದ್ದಾನೆ. ಹಾಲಿ ಕಾಂಗ್ರೆಸ್ ಶಾಸಕ ಎಂ.ಪಿ ರವೀಂದ್ರನ ಬಗ್ಗೆ ಜನರಲ್ಲಿ ಆಡಳಿತ ವಿರೋಧಿ ಅಲೆಯಿದೆ. ಹಾಗಾಗಿ ಕರುಣಾಕರ ರೆಡ್ಡಿಗೆ ಟಿಕೆಟ್ ದೊರೆತರೆ ಆತ ಗೆಲ್ಲುವ ಸಾಧ್ಯತೆ ಹೆಚ್ಚು. ಇದನ್ನು ಮನಗಂಡಿರುವ ಶ್ರೀರಾಮುಲು, ಕರುಣಾಕರ ರೆಡ್ಡಿಗೆ ಟಿಕೆಟ್ ತಪ್ಪಿಸಲು ತಂತ್ರ ಹೆಣೆದಿದ್ದಾನೆ. ಪಕ್ಷದ ರಾಜ್ಯಾಧ್ಯಕ್ಷನಾಗಿರುವ ಯಡ್ಡಿ ತಮ್ಮ ಪರ ನಿಂತರೆ ಮಾತ್ರ ಅದು ಸಾಧ್ಯ ಅನ್ನೋದನ್ನು ಅರ್ಥಮಾಡಿಕೊಂಡಿರುವ ರಾಮುಲು ಯಡ್ಡಿಯನ್ನು ಬೆಂಬಲಿಸುತ್ತಿದ್ದಾನೆ. ಈಗಾಗಲೇ ಪಂಚಮಸಾಲಿ ಲಿಂಗಾಯತನಾದ ಕೊಟ್ರೇಶ್ ಎಂಬಾತನಿಗೆ ಹರಪನಹಳ್ಳಿಯ ಟಿಕೆಟ್ ಕೊಡಲು ಯಡ್ಡಿಗೆ ಒಲವಿದೆ. ಆದಾಗ್ಯೂ ಪ್ರಬಲ ಲಾಬಿಯಿಲ್ಲದೆ ಕರುಣಾಕರ ರೆಡ್ಡಿಗೆ ಟಿಕೆಟ್ ತಪ್ಪಿಸುವುದು ಅಸಾಧ್ಯದ ಮಾತು. ಹಾಗಾಗಿ ಶ್ರೀರಾಮುಲು ಯಡ್ಡಿಯ ಬೆನ್ನಿಗೆ ನಿಂತಿದ್ದಾನೆ.

ಅತ್ತ ಈಶ್ವರಪ್ಪನೇನು ಸುಮ್ಮನೇ ಕುಳಿತಿಲ್ಲ. ಅದ್ಯಾವಾಗ ಶ್ರೀರಾಮುಲು, ರೆಡ್ಡಿ ಟೀಮಿನ ಪರವಾಗಿ ಯಡ್ಡಿಯ ಬೆನ್ನಿಗೆ ನಿಂತನೋ ಆಗಲೇ ರಾಮುಲುನ ಮೇಲೆ ಹರಿಹಾಯ್ದಿರುವ ಈಶ್ವರಪ್ಪ ಪಾಲಿಕೆ ಮೇಯರ್ ಚುನಾವಣೆಯಲ್ಲಿ ರಾಮುಲು ಮಾಡಿದ ಕ್ರಾಸ್‌ಓಟಿಂಗ್‌ನ ಕದ ಬಡಿಯುತ್ತಿದ್ದಾರೆ. ಮೊನ್ನೆ ಬಳ್ಳಾರಿ ಮೂಲಕ ಕರ್ನೂಲ್‌ಗೆ ಹೊರಟಿದ್ದ ಈಶ್ವರಪ್ಪ ರಿಪಬ್ಲಿಕ್ ನೆಲದಲ್ಲೇ ನಿಂತು "ಇತ್ತೀಚೆಗೆ ನಡೆದ ಪಾಲಿಕೆ ಮೇಯರ್ ಚುನಾವಣೆಯಲ್ಲಿ ರಾಮುಲು ಯಾಕೆ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ ಅನ್ನೋದು ನನಗೆ ತಿಳಿಯುತ್ತಿಲ್ಲ. ಆತನ ಈ ನಿಲುವಿನ ಬಗ್ಗೆ ಮೈಸೂರಿನ ಕಾರ್ಯಕಾರಿಣಿಯಲ್ಲಿ ಮಾತನಾಡಬೇಕು ಅಂದುಕೊಂಡಿದ್ದೆ. ಆದರೆ ಆತ ಬಂದಿರಲಿಲ್ಲ. ನಾವು ಕಾಂಗ್ರೆಸ್ ಮುಕ್ತ ರಾಜ್ಯ ಮಾಡಲು ಹೊರಟಿದ್ದರೆ ರಾಮುಲು ಕಾಂಗ್ರೆಸ್ ಪಕ್ಷ ಬೆಂಬಲಿಸಿದ್ದೇಕೆ?" ಎನ್ನುವ ಪ್ರಶ್ನೆಗಳನ್ನು ತೂರಿ ರಾಮುಲುಗೆ ಶಾಕ್ ಕೊಟ್ಟಿದ್ದಾರೆ.

ಅದೇನೇ ಇರಲಿ, ಬಿಜೆಪಿಗೆ ಭದ್ರಬುನಾದಿಯಂತಿರುವ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರಿಗೆ ಯಡ್ಡಿ-ಈಶು ಜಗಳ ಶಿಫ್ಟ್ ಆಗೋದ್ರಿಂದ ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಅನುಕೂಲವಾದರೂ ಅಚ್ಚರಿಯಿಲ್ಲ. ವಿಪರ್ಯಾಸವೆಂದರೆ ಈ ಮೂರು ಜಿಲ್ಲೆಗಳಲ್ಲಿ ಬರ, ನೀರಾವರಿ ಸಮಸ್ಯೆಯಂತಹ ಹಲವು ತೊಂದರೆಗಳಿಂದ ಜನರು ಬಳಲುತ್ತಿದ್ದಾರೆ. ಅವುಗಳತ್ತ ಕಣ್ಣೆತ್ತಿಯೂ ನೋಡದ ರಾಜಕಾರಣಿಗಳು ಸ್ವಪ್ರತಿಷ್ಠೆಯ ಕಾಲೆಳೆದಾಟದಲ್ಲಿ ಬ್ಯುಸಿಯಾಗಿದ್ದಾರೆ. ಜನ ಇಂತವರಿಗೆ ಈಗಲಾದರು ಪಾಠ ಕಲಿಸಲು ಮುಂದಾಗಬೇಕಿದೆ. ಇಲ್ಲದಿದ್ದರೆ ಈಗಾಗಲೇ ಅತೀ ಹೆಚ್ಚು ಜನ ಗುಳೇ ಹೊರಟಿರುವ ಈ ಜಿಲ್ಲೆಗಳು ಮುಂದೆ ಇನ್ನೂ ತೀವ್ರತರದ ಶಿಕ್ಷೆಗೆ ಒಳಗಾಗುವುದು ನಿಶ್ಚಿತ.

■ ಮುತ್ತುರಾಜು

KK

್ಯಮಂತ್ರಿಯಾಗುತ್ತಿದ್ದಂತೆಯೇ ರಾಜ್ಯ ಬಿಜೆಪಿಯ ರಗಳು ಬದಲಾದವು. ಯಡ್ಡಿ ಮತ್ತು ಕೆಜೆಪಿಯ ದೆ ರಾಜ್ಯದ 28 ಲೋಕಸಭಾ ಸ್ಥಾನಗಳ ಪೈಕಿ ದಾಟುವುದೂ ಕಷ್ಟವೆಂಬುದು ಬಿಜೆಪಿ ಾಂಡಿಗೆ ಅರ್ಥವಾಗಿತ್ತು. ರಾಜ್ಯದ ಲಿಂಗಾಯತ ಕ್ಕೆ ಯಡ್ಡಿ ಪ್ರಶ್ನಾತೀತ ನಾಯಕನೆಂಬುದು ಕೆಜೆಪಿಯ ಕವೇ ಸಾಬೀತಾಗಿತ್ತು.

ದರ ಸೂಕ್ಷ್ಮ ಅರಿತೇ ಬಿಜೆಪಿ ಹೈಕಮಾಂಡ್ ುತ್ತ ಸ್ನೇಹಹಸ್ತಕ್ಕೆ ಮುಂದಾಗಿತ್ತು. ಅದಕ್ಕೆ ಯಡ್ಡಿಯ ಾರಿಯಾಗಿ ಲೆಹರ್‌ಸಿಂಗ್ ಚೌಕಾಸಿಗಿಳಿದರೆ ಬಿಜೆಪಿ ಾಂಡ್ ಧೂತನಾಗಿದ್ದದ್ದು ಸಂತೋಷ್. ಕೆಜೆಪಿಗಾಗಿ ದ್ದ ದುಡ್ಡನ್ನೆಲ್ಲ ಸುರಿದು ಖಾಲಿ ಕೈಯಾಗಿದ್ದ ಯಡ್ಡಿಗೆ ಬಿಟ್ಟರೆ ಬೇರೆ ಗತಿಯಿಲ್ಲದಂತಾಗಿತ್ತು. ಹೇಗೂ ಅಲೆ ಬೇರೆ ಇತ್ತಲ್ಲ. ಅದರ ಫಲ ಉಂಡು ಮೋದಿಗೆ ಆಪ್ತನಾಗಿಬಿಟ್ಟರೆ ಮುಂದೊಮ್ಮೆ ತಾನೋ, ರಂದ್ಲಾಜೆಯೋ ಸಲೀಸಾಗಿ ಮುಖ್ಯಮಂತ್ರಿಯಾಗ ಎಂಬ ದೂರಾಲೋಚನೆ ಯಡ್ಡಿಯದಾಗಿತ್ತು. ಆದರೆ ುಗಳ್ಳಿನಂತೆ ತಲೆನೋವಾಗಿ ಹುಟ್ಟಿಕೊಂಡಿದ್ದು ್ಷ್. ಈ ಬಗ್ಗೆ ಮಾತುಕತೆಗೆಂದು ಯಡ್ಡಿಯೇ ಬಿದ್ದು ದಿನಾಂಕ ಗೊತ್ತು ಮಾಡಿದ್ದರೆ ಸಂತೋಷ್ ಉದ್ದೇಶಪೂರ್ವಕವಾಗಿ ಕೈಕೊಟ್ಟ. ಆದಾದನಂತರ ನಿಗದಿಯಾದರೆ ಒಂದು ಗಂಟೆ ಯಡ್ಡಿಯನ್ನು ದ್ದ. ಯಡ್ಡಿ ಜೊತೆ ಇಡೀ ಕೆಜೆಪಿಯನ್ನೇ ೊಳಿಸುವ ಉದ್ದೇಶಕ್ಕೂ ಕಲ್ಲು ಹಾಕಿದ. ಕರಂದ್ಲಾಜೆ, ಉದಾಸಿಯಂಥ ಬೆರಳೆಣಿಕೆಯವರನ್ನು ಬಿಟ್ಟರೆ ಯಡ್ಡಿಯನ್ನು ನಂಬಿ ಕೆಜೆಪಿಗೆ ಬಂದಿದ್ದ ಧನಂಜಯ್‌ಕುಮಾರ್, ಎಂ.ಡಿ. ಲಕ್ಷ್ಮಿನಾರಾಯಣ್, ಬಿ.ಆರ್. ಪಾಟೀಲ್ ಇತ್ಯಾದಿಗಳೆಲ್ಲ ನಡುನೀರಿನಲ್ಲಿ ಕೈಬಿಟ್ಟಂತೆ ರಾಜಕೀಯವಾಗಿ ಬೀದಿಪಾಲಾದರು.

ಇಷ್ಟೆಲ್ಲ ಕಾಟ ಕೋಟಲೆಗಳ ನಡುವೆಯೂ ಯಡ್ಡಿ ತಾಳ್ಮೆ ಕಳೆದುಕೊಳ್ಳಲಿಲ್ಲ. ಇವತ್ತಲ್ಲ ನಾಳೆ ಬಿಜೆಪಿಯ ಸೂತ್ರ ತನ್ನ ಕೈಗೆ ಬಂದರೆ ನೋಡಿಕೊಂಡರಾಯ್ತು ಎಂದೇ ಸಮಯ ಕಾದರು. ಯಡ್ಡಿಯ ತಾಳ್ಮೆಗೆ ಸಿಕ್ಕ ಫಲವೆಂಬಂತೆ ರಾಜ್ಯ ಬಿಜೆಪಿ ಅಧ್ಯಕ್ಷಗಿರಿ ಕೈಗೂಡಿತಲ್ಲ, ಆಗ ಯಡ್ಡಿಗೆ ತನ್ನ ಬುಡಭದ್ರಪಡಿಸಿಕೊಳ್ಳುವ ಸುಪ್ತ ಬಯಕೆಯೊಂದು ಕೆರಳಿ ನಿಂತಿತು. ಕೆಜೆಪಿಯಲ್ಲಿ ತನಗೆ ಹೆಗಲು ಕೊಟ್ಟ ಒಬ್ಬೊಬ್ಬರನ್ನೇ ಆಯ್ದು ಪಕ್ಷದ ಆಯಕಟ್ಟಿನ ಹುದ್ದೆಗೆ ತರಲಾರಂಭಿಸಿದ್ದರು. ಕೆಜೆಪಿಯಲ್ಲಿ ತನ್ನ ಜೊತೆ ಗುರುತಿಸಿಕೊಂಡವರನ್ನು ಸದ್ದಿಲ್ಲದ ಪಕ್ಷದ ನಾಯಕರನ್ನಾಗಿಸುವತ್ತ ಹೆಜ್ಜೆಯಿಡಲಾರಂಭಿಸಿದ್ದರು. ಇದನ್ನು ಮೊದಲು ಗ್ರಹಿಸಿದ್ದೇ ಸಂತೋಷ್!

ಇತ್ತ ಯಡ್ಡಿ ಬಿಜೆಪಿ ರಾಜ್ಯಾಧ್ಯಕ್ಷನಾಗಿ ತನಗೆ ಬೇಕುಬೇಕಾದವರನ್ನೆಲ್ಲ ಪಕ್ಷದ ಪ್ರಭಾವಿ ಹುದ್ದೆಗಳಿಗೆ ನೇಮಿಸುತ್ತಾ ಬಂದಂತೆಲ್ಲಾ ಈಶ್ವರಪ್ಪನ ಬೊಬ್ಬೆ ಜೋರಾಯಿತು. ಈಶೂ ಬೆನ್ನಿಗಿದ್ದ ಬಹುತೇಕರ್‍ಯಾರೂ ಜಾತಿಯಿಂದ ಕುರುಬರಲ್ಲ. ಆ ಕಾಲದಿಂದಲೂ ಈಶ್ವರಪ್ಪ ಬೆನ್ನಗಿದ್ದವರೇನಲ್ಲ. ಹಾಸನದ ಜಿಲ್ಲಾಧ್ಯಕ್ಷ ಹುದ್ದೆಯಿಂದ ಯೋಗಾರಮೇಶ್ ಇಳಿಸಿದಾಕ್ಷಣ ಈಶ್ವರಪ್ಪನಿಗಾಗಲಿ ಆತನ ಬೆನ್ನುಗಿದ್ದವರಿಗಾಗಲಿ ಯಾವುದೇ ಲಾಭವಿಲ್ಲ. ಯಡ್ಡಿ ಪಕ್ಷದ ಹುದ್ದೆಗೆ ಯಾರ್‍ಯಾರನ್ನು ನೇಮಿಸಿದರೋ ಅವರಿಂದ ಈಶ್ವರಪ್ಪನ ಯಾರೇ ಬೆಂಬಲಿಗರಿಗೂ ಅನ್ಯಾಯವಾಗಿದ್ದಿಲ್ಲ. ವೈಯಕ್ತಿಕವಾಗಿ ತನಗಾಗಲಿ, ತನ್ನ ಬೆಂಬಲಿಗರಿಗಾಗಲಿ ಯಾವುದೇ ಅನ್ಯಾಯ ವಾಗದೆ ಈಶ್ವರಪ್ಪ ಇನ್ನಾವುದೋ ಜಿಲ್ಲೆಯ ಇನ್ನಾವುದೋ ಹುದ್ದೆಯ ಯಡ್ಡಿ ಬೆಂಬಲಿಗರನ್ನಷ್ಟೇ ಬದಲಾಯಿಸಿ ಎಂದು ಬೊಬ್ಬಿಡುವುದೇಕೆ?

ಹಾಗೆ ನೋಡಿದರೆ ಇದು ಕೇವಲ ಈಶ್ವರಪ್ಪನಿಗಷ್ಟೇ ಸಂಬಂಧಿಸಿದ ಸಂಗತಿಯೇನಲ್ಲ. ಶೆಟ್ಟರ್, ಗೌಡ, ಅನಂತ್‌ಕುಮಾರ್, ಅಶೋಕ್ ಇತ್ಯಾದಿಗಳ್ಯಾರಿಗೂ ಬೇಡದ ಪಕ್ಷದ ಉಸಾಬರಿ ಕೇವಲ ಈಶ್ವರಪ್ಪನಿಗಷ್ಟೇ ಏಕೆ?

ಮರ್ಮವಿರುವುದೇ ಈಶ್ವರಪ್ಪ ಅಂಡ್ ಪಟಾಲಮ್ಮಿನ ಅಸಂಬದ್ಧ ವರ್ತನೆಗಳಲ್ಲಿ. ಸೊಗಡು ಶಿವಣ್ಣನಿಗೂ ಶಿವಮೊಗ್ಗಕ್ಕೂ ಸಂಬಂಧವಿಲ್ಲ. ಬೆಂಗಳೂರಿನ ಮಾರ್ವಾಡಿ ಸುರಾನಾ ಹಿಂದ್ಯಾವತ್ತೂ ಇಲ್ಲದೆ ಈಗೇಕೆ ಪಕ್ಷದ ನಾಯಕತ್ವದ ಉಸಾಬರಿಗೆ ತಲೆಹಾಕುತ್ತಾನೆ? ದಾವಣಗೆರೆಯ ಶಿವಯೋಗಿ ಸ್ವಾಮಿಗೂ ಹಾಸನಕ್ಕೂ ಏನು ಸಂಬಂಧ? ಯಾವತ್ತೂ ಇಲ್ಲದ ಬೇವಿನಮರದನಿಗೆ ಇದ್ದಕ್ಕಿದ್ದಂತೆ ಈಶ್ವರಪ್ಪ ಜೊತೆಯಾಗುವುದೇಕೆ? ಯಡ್ಡಿ ವಿರುದ್ಧ ತೀಟೆ ಹೆಚ್ಚಿದ್ದೇಕೆ?

ಒಂದೇ ಮಾತಲ್ಲಿ ಹೇಳಬೇಕೆಂದರೆ ಇದೆಲ್ಲವೂ ಸಂತೋಷ್ ತೆರೆಮರೆಯಿಂದ ಆಡಿಸುತ್ತಿದ್ದ ಆಟ. ಜನ್ಮಾಪಿ ಈಶ್ವರಪ್ಪನ ಜೊತೆ ಮಾತೇ ಆಡದಿದ್ದವರೆಲ್ಲ ರಾತ್ರೋರಾತ್ರಿ ಈಶ್ವರಪ್ಪನ ಅನುಯಾಯಿಗಳ ವೇಷ ಧರಿಸುತ್ತಾರೆ. ಹುಟ್ಟಿನಿಂದ ಕುರುಬರಲ್ಲದ ಬ್ರಾಹ್ಮಣ ಚಡ್ಡಿಗಳಿಗೂ ಇದ್ದಕ್ಕಿದ್ದಂತೆ ರಾಯಣ್ಣನ ಮೇಲೆ ಭಕ್ತಿಯ ಆವಾಹನೆಯಾಗುತ್ತದೆ. ಜಾತಿಯಿಂದ ವೈದಿಕರೂ, ಬ್ರಾಹ್ಮಣ ಸಾಮ್ರಾಜ್ಯ ಸ್ಥಾಪನೆಗೆಂದೇ ಮನೆಮಠ ಬಿಟ್ಟು ಆರ್‌ಎಸ್‌ಎಸ್ ಪ್ರಚಾರಕರಾಗಿದ್ದವರೆಲ್ಲ ಈಶ್ವರಪ್ಪನ ಜೊತೆ ಕೈಜೋಡಿಸುತ್ತಿದ್ದಂತೆಯೇ ಹಿಂದುಳಿದ ವರ್ಗಗಳ ರೂವಾರಿಗಳೆನಿಸುತ್ತಾರೆ. ಶಿವಮೊಗ್ಗದ ಭಾನುಪ್ರಕಾಶ್ ಜಾತಿಯಿಂದ ವೈದಿಕ ಮತ್ತು ಹುಟ್ಟಾ ಆರ್‌ಎಸ್‌ಎಸ್ ಶಿವಯೋಗಸ್ವಾಮಿ ಜಾತಿಯಿಂದ ಲಿಂಗಾಯತನಾದರೂ ಮಾನಸಿಕವಾಗಿ ಬ್ರಾಹ್ಮಣ. ನಿರ್ಮಲ್ ಸುರಾನಾ ಪಕ್ಕಾ ಮಾರ್ವಾಡಿ. ಸೊಗಡು ಶಿವಣ್ಣ ರಕ್ತಗತವಾಗಿ ಲಿಂಗಾಯತ ಮತ್ತು ಪ್ರವೃತ್ತಿಯಿಂದ ಬಸವಣ್ಣನ ಬದ್ಧ ವೈರಿ ವೈದಿಕ.

ರಾಯಣ್ಣ ಬ್ರಿಗೇಡ್ ನೆಪಕ್ಕಷ್ಟೇ ಹಿಂದುಳಿದವರ ವೇದಿಕೆಯೆಂದೋ ದಲಿತ ಮತ್ತು ಹಿಂದುಳಿದವರ ದನಿಯೆಂದೋ ಬಿಂಬಿಸಲ್ಪಡಬಹುದು. ಈಶ್ವರಪ್ಪ ಅದರ ಕ್ಯಾಪ್ಟನ್ ವೇಷದಲ್ಲಿರಬಹುದು. ಆದರೆ ಅದರ ರಕ್ತ ಮಾಂಸಗಳಂತಿರುವವರೆಲ್ಲ ವೈದಿಕ, ಮಾರ್ವಾಡಿ, ಲಿಂಗಾಯತರೇ. ಅಂದರೆ ಲಿಂಗಾಯತರ ಸೋಗಿನಲ್ಲಿರುವ ಬ್ರಾಹ್ಮಣರು. ಇನ್ನು ಈಶ್ವರಪ್ಪನನ್ನು ಕುರುಬ ಎನ್ನುವುದಕ್ಕಿಂತಲೂ ನವಬ್ರಾಹ್ಮಣನೆಂದವರೇ ಹೆಚ್ಚು. ಇಂಥವರಿಗೆಲ್ಲ ಯಡ್ಡಿ ವಿರುದ್ಧ ಕಾಲೆಳೆಯಲು ನೆಪ ಬೇಕಿತ್ತಷ್ಟೆ. ಅದಕ್ಕೆ ಕಾಲಾನುಕಾಲಕ್ಕೆ ಬದಲಾಗುತ್ತಲೇ ಬಂದ ರಾಯಣ್ಣ ಬ್ರಿಗೇಡಿನ ವೇದಿಕೆಗಳಿಗಿಂತ ಉದಾಹರಣೆ ಬೇಕೆ?

ಇದು ಕಪಟ ನಾಟಕ. ಸೂತ್ರಧಾರಿ ಸಂತೋಷ್ ಆಡಿಸುತ್ತಿರುವ ಗೊಂಬೆಯಾಟವಲ್ಲದೇ ಮತ್ತೇನು?

■ ರಾ. ಸೋಮನಾಥ್

ಕುಮಾರಣ್ಣನ ಸಿನುಮ ಬತ್ತದಂತೆ ನಿಜವ್ರಲ



ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಏನಾಯಿತ್ಲ ಇವುರು ಜಗಳ?" ಎಂದು ಕಾಳಮಾವ ಪಕ್ಕದೂರಿನ ಜಗಳ ಕೇಳಿದಷ್ಟು ಸರಾಗವಾಗಿ ಕೇಳಿದ.

"ಮೈಸೂರು ಸಭೆ ಆದಮ್ಯಾಲೆ ಯಲ್ಲ ತಣ್ಣಗಾದ್ರಪ್ಪ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ರಾಜಕಾರಣದಲ್ಲಿ ಹತ್ತಿಗಂಡ ಜಗಳ ಯಾವತ್ತೂ ತಣ್ಣಗಾಗದಿಲ್ಲ, ಅಂಗೆ ಕಾಣ್ತವಷ್ಟೆಯ. ಅಂಗೇ ಹಿಂದಕ್ಕೋಗಿ ನೋಡು" ಎಂದ ವಾಟಿಸ್ಸೆ.

"ಮನುಷ ಮುರದ ಮ್ಯಾಲೆ ನೀನೇನೆ ತಾರಾಕಿದ್ರು ಗಂಟು ಉಳದೇ ಉಳಿತದೆ ಕಂಡ್ಯ" ಎಂದ ಕಾಳಮಾವ.

"ನಿಜ ದೊಡಪ್ಪ, ನಾವು ನೋಡಿದ ದ್ವಡ್ಡ ಜಗಳ ಯಾವುದು ಅಂದ್ರೆ ಜನತಾ ದಳ. ಅದು ಮದ್ಲು ಕೇಂದ್ರದಲ್ಲಿ ಸುರುವಾಯ್ತು, ಮುಗುದಿದ್ಯಂಗಪ್ಪ ಅಂದ್ರೇ ಮುರಾರ್ಜಿ ಮನಿಗೋಗಿ ಚರಣಸಿಂಗ್ ಪ್ರಧಾನಿ ಆದ. ಅಲ್ಲಿಗೂ ಮುಗಿಲಿಲ್ಲ."

"ಆ ಜಗಳಕ್ಕೆ ಕಾರಣಾದೊರು ಆರೆಸ್ಸೆಸ್ಸಿನೋರಂತಲ್ಲೊ?" ಎಂದ ಉಗ್ರಿ.

"ಹಂಡ್ರೆಡ್ ಪರಸೆಂಟು ನಿಜ ಕಣೊ ಉಗ್ರೀ. ಆಗ ಆರ್‌ಸ್ಸೆಸ್ಸಿನೋರು ಮುರಾರ್ಜಿ ಸರಕಾರದಲ್ಲಿ ಮಂತ್ರಿಗಳಾಗಿದ್ರು. ಅದು ಗೊತ್ತಾದಾಗ ನೀವು ಆರ್‌ಸ್ಸೆಸ್ಸಿನಲ್ಲಿರಿ, ಇಲ್ಲ ಮಂತ್ರಿಪದವಿ ಬುಡಿ ಅನ್ನೊ ಜಗಳ ಸುರುವಾಯ್ತು ದೊಡಪ್ಪ, ಆರೆಸ್ಸೆಸ್ಸಿನೋರು ಹಟ ಬುಡ್ಲಿಲ್ಲ, ಕಡಿಗೆ ಪಾರ್ಟಿ ವಡದೋಯ್ತು. ವಾಜಪೇಯಿ ಲೀಡ್ರುಸಿಪ್ನಲ್ಲಿ ಭಾರತೀಯ ಜನತಾ ಪಾರ್ಟಿ ಮಾಡಿಕಂಡು ವಂಟೋದ್ರು. ಇವಿತ್ತಗೆ ಜನತಾದಳ, ಲೋಕದಳ, ದ್ವಿದಳ ಅಂತ ಮಾಡಿಕಂಡು ಹಾಳಾಗೋದ್ರು. ಆದ್ರೆ ಬಿಜೆಪಿಗಳು ಹಾಳಾಗಲಿಲ್ಲ ದೊಡಪ್ಪ" ಎಂದ ವಾಟಿಸ್ಸೆ.

"ಇಲ್ಲೂ ಹಾಳಾಗೊಗರು ಕಣೊ. ದ್ಯಾವೇಗೌಡ್ರು ಕುಮಾರಣ್ಣನು ದೊಡ್ಡ ಮನಸು ಮಾಡದೆಯಿದ್ರೆ ಅವೆಲ್ಲಿಂಗಿರತಿದ್ರೊ. ಆಗ್ಲೆ ಸಾಕಾಗಿದ್ದವಪ್ಪ" ಎಂದ ಉಗ್ರಿ.

"ದ್ಯಾವೇಗೌಡ್ರು ಕುಮಾರಣ್ಣ ದೊಡ್ಡ ಮನಸು ಮಾಡಲಿಲ್ಲ ಕಣೊ. ಸಣ್ಣ ಮನಸು ಮಾಡಿದ್ರು. ಅದ್ಕೆ ಜೆಡಿಎಸ್ಸು ವೀಕಾಗಿ ಬಿಜೆಪಿ ಸ್ಟ್ರಾಂಗಾಗಿದ್ದು."

"ಅದೇನೂ ನಿಜ ಬುಡು. ನಾನೇಳಿದ್ದು ಬಿಜೆಪಿ ಪಾಲಿಗೆ ದಾವೇಗೌಡ್ರು, ಕುಮಾರಣ್ಣ ಮಾಡಿದ್ದು ದೊಡ್ಡ ಮನಸು ಅಂತ."

"ಈಗ ಎಡೂರಪ್ಪ ಸರಿನೊ ಈಸ್ಪುರಪ್ಪ ಸರಿನೊ" ಎಂದಳು ಜುಮ್ಮಿ ಸರಳವಾಗಿ.

"ಯರಡೂ ರಪ್ಪಗಳು ಬಿಜೆಪಿಲಿರದ್ರಿಂದ ಯಾರ್‍ನೂ ಸರಿ ಅನ್ನಕ್ಕೆ ಬರದಿಲ್ಲ ಕಣಕ್ಕ."

"ಆದ್ಯಾಕ್ಲ?"

"ಆ ಪಾರ್ಟಿ ಸಿದ್ದಾಂತನೆ ಅಂಗದೆ ಕಣಕ್ಕ. ಅವುಕೆ ದಲಿತ್ರು ಕಂಡ್ರಾಗದಿಲ್ಲ, ಸಾಬರ ಕಂಡ್ರಾಗದಿಲ್ಲ, ಇನ್ನ ಮೀಸಲಾತಿ ವಿರೋಧಿಗಳು. ಜನಗಳಿಗೆ ಬೇಕಾಗಿರೊ ಮನೆ, ಮಠ, ನೀರು, ನೆಳ್ಳು, ವಿದ್ಯೆ, ಬುದ್ಧಿ ಕೊಡದದಕಿಂತ ರಾಂಮಂದಿರನೇ ಮುಖ್ಯ, ಯಜ್ಞ ಯಾಗ, ಪೂಜೆನೆ ಮುಖ್ಯ ಅನ್ನವ ಸರಿ ಅಂತ ಅನ್ನಕ್ಯಾದತೆ? ನೀನೆ ಹೇಳು."

"ನಾನೇಳಿದ್ದು ಗುಣದಲ್ಲಿ ಕಂಡ್ಯ."

"ಯಾವ ಗುಣ ಹೇಳಕ್ಕ?"

"ವಳ್ಳೆ ನಡವಳಕೆ."

"ವಳ್ಳೆ ನಡವಳಕೆ ಅಂದ್ರೇನು, ಅದ್ನಾರ ಹೇಳು."

"ನಿನ್ನ ಕೈಲಿ ಮಾತಾಡಕ್ಯಾಗದಿಲ್ಲ ಕಂಡ್ಯ, ಹೋಗತ್ತಗೆ."

"ಸಿಟ್ಟಾಗಬ್ಯಾಡ ಕಣಕ್ಕ, ವಳ್ಳೆ ನಡವಳಿಕೆ ಅಂದ್ರೇನು? ವಳ್ಳೆ ಗುಣ ಅಂದ್ರೇನು? ಅನ್ನದು ಚರ್ಚೆಯಾದ ನಂತರ ಅವು ಇವುರಲ್ಲಿದ್ದವೆ ಅಂತ ನೋಡಬೇಕಾಯ್ತದೆ."

"ಅವುಳ ಸಮಾಧಾನಕೆ ಏನಾರ ಹೇಳೊ" ಎಂದ ಉಗ್ರಿ.

"ಇನ್ನೊಬ್ಬರ ಸಮಾಧಾನಕೆ ಸುಳ್ಳೇಳಬಾರ್ದು ಕಣೊ. ಆದ್ರೂ ಹೇಳ್ತಿನಿ ಕೇಳಕ್ಕ, ಸದ್ಯಕ್ಕೆ ಆವುರಿಬ್ರು ಅಣ್ತಮ್ಮಂದಿರಿದ್ದಂಗೆ. ಎಡೂರಪ್ಪ ಹಿರಿಯೋನು, ಈಶ್ವರಪ್ಪ ಕಿರಿಯೋನು, ಅಷ್ಟೆ."

"ಅಣತಮ್ಮದಿರು ಅನ್ನದೇ ಸರಿ ಕಣೊ. ನಾನು ನೋಡಿದಂಗೆ ಯಾವ ಅಣ್ಣತಮ್ಮದೀರು ನ್ಯಟ್ಟಗಿರಲಿಲ್ಲ, ಜಗಳಾಡಿ ಕಂಡು ಮುನಿಸಿಗಂಡೇ ಸತ್ತೋದ್ರು. ಅಲವೆ ಕಾಳಮಾವ?" ಎಂದ ಉಗ್ರಿ.

"ಊ ಕಂಡ್ಯ. ನಾನೇ ನೋಡಿದಂಗೆ ಆ ಕಾಯಿಸಿದ್ದ ತನ್ನ ತಮ್ಮದೀರ ಜ್ವತೆ ಮಾತಾಡಲಿಲ್ಲ, ಇನ್ನ ತಮ್ಮೇಗೌಡನೂ ಅಷ್ಟೆ. ಅಣತಮ್ಮದಿರ ಜ್ವತೆ ಕೂಡಾಡಿ ಬಾಳಲೇಯಿಲ್ಲ" ಎಂದ ಕಾಳಮಾವ.

"ಅವುರಿಗ್ಯಲ್ಲ ಹೋಲಿಸಿದ್ರೆ ನೀನೆ ಪರವಾಗಿಲ್ಲ ದ್ವಡಪ್ಪ, ಯಲ್ಲಾರ್‍ನು ಸಂಭಾಳಿಸ್ದೆ" ಎಂದ ವಾಟಿಸ್ಸೆ.

"ಕಾಳಮಾವನಿಗೂ ಭೈರೇಗೌಡನ ಹೆಡತಿ ಕಂಡ್ರೆ ಆಯ್ತಿರಲಿಲ್ಲ ಕಂಡ್ಯ, ಅವುಳ ಮಾತಾಡುಸ್ತಿರಲಿಲ್ಲ, ಅಲವೇನೊ ಮಾವ?" ಎಂದಳು ಜುಮ್ಮಿ.

"ಅದ್ಯಾಕ್ ದೊಡಪ್ಪ?"

"ಏ, ಅವುಳೊಂತರ ಬಾಯಿಬಡಕಿ ಕಂಡ್ಯ. ಏನೊ, ತಾನೆ ಮನೆನೆ ಹೊತ್ತು ನೀಸೋಳಂಗೆ ಮಾತಾಡೋಳು. ನಮಿಗ್ಯಾರಿಗೂ ಮ್ಯೆಂಟ್ ಮಾಡ್ತಿರಲಿಲ್ಲ, ಅದ್ಕೆ ಅವುಳ ಕಂಡ್ರಾಯ್ತಿರಲಿಲ್ಲ" ಎಂದ ಕಾಳಮಾವ.

"ಬಿಜೆಪಿಲೂ ಅದೇ ಪ್ರಾಬ್ಲಮ್ಮು ದೊಡಪ್ಪ. ಶೋಭಾ ಕರಂದ್ಲಾಜೆ ಕಂಡ್ರೆ ಈಶ್ವರಪ್ಪನಿಗಾಗದಿಲ್ಲ, ನಮ್ಮೂರ ಕುಟುಂಬದ ಸಮಸ್ಯೆ ರಾಜ್ಯಮಟ್ಟದಲ್ಲಿ ವರುಕು ಆದೆ ಅಂದ್ರೆ ವಂಡುಪುಲ್ಲು" ಎಂದ ವಾಟಿಸ್ಸೆ.

"ಕುಮಾರಸ್ವಾಮಿದೇನೊ ಸಿನುಮ ಬತ್ತದಂತಲ" ಎಂದಳು ಜುಮ್ಮಿ.

"ಊ ಕಣಕ್ಕ, ಕುಮಾರಣ್ಣ 20 ತಿಂಗಳು ಕಡ ಕಟ್ಟೆ ಹಾಕಿದ್ದನ್ಯಲ್ಲ ಕತೆ ಮಾಡಿ ಸಿನುಮ ಮಾಡ್ತನಂ"

"ಯಾರೂ?"

"ಭದ್ರಾವತಿ ನಾರಾಯ್ಣ ಅಂತ. ನಿಮ್ಮ ಬಸುರಾಜ ಹೇಣ್ಣು ತಂದಿದ್ರಲ್ಲ ಅದೇ ಗಲ್ಲಿಲಿದ್ದ ಅವುನು ಒಂ ನರಿದ್ದಂಗೆ. ಈಗ ಕುಮಾರಣ್ಣನ್ನ ಹಿಡಕಂಡವುನೆ. ಸರಿಯ ಗುಂಜತನೆ."

"ಕುಮಾರಣ್ಣನ ಪಾರ್ಟ್ ಯಾರು ಮಾಡ್ತರೇ?"

"ರಾಜೇಶ್ ಅಂತ ಆಗುಟ್ರೆಸುರು ಕೇಳಿದ್ದ?"

"ಅವುನ ಸಿನುಮನೆ ನೋಡಿದ್ದಿನಿ ಹೇಳ್ಕ."

"ಅವುನಳಿಯ ಅರ್ಜುನ ಸರ್ಜಾ ಅಂತ ಅ ತಮುಳಲ್ಲಿ ಫೇಮಸ್ಸು. ಅವುನ ಕೈಲಿ ಕುಮಾರಣ್ಣನ ರೋ ಮಾಡುಸ್ತ ಅವುನೆ."

"ಅವುನಿಗಿಂತ್ಲೂ ರಘುವೀರ ಅಂತ ಇದ್ದ. ಅ ಸಟ್ಟಾಗನು ಕಣೊ ವಾಟಿಸ್ಸೆ" ಎಂದ ಉಗ್ರಿ.

"ಹಂಡ್ರೆಡ್ ಪರಸೆಂಟು ಸಟ್ಟಾಗೋನು. ಏನು ಮ ತೀರೊದ."

"ವಯಿಸಾಗಿತ್ತೇನ್ಲ?"

"ಇನ್ನು ಹುಡುಗ ಕಣಕ್ಕ, ನೀನು ಅವುನ ಸಿನು ನೋಡಿದ್ದೆ ಅಲವೆ?"

"ಊ ಕಂಡ್ಯ. ಸುಂಗಾರ ಕಾವ್ಯ ಅಂತ ನೋಡಿ"

"ಅವುನ್ಯಂಗಿದ್ದ?"

"ಕುಮಾರಣ್ಣನ ತಮ್ಮನಂಗಿದ್ದ ಬುಡು."

"ಅವುನಾಗಿದ್ರೆ ಚನ್ನಾಗಿರದು."

"ರಾಧಿಕನ ಪಾರ್ಟು ಯಾರು ಮಾಡ್ತರೆ?"


"ಅದನ್ಯಲ್ಲ ತಗಿಯದಿಲ್ಲ ಅವುನು. ನಿನಿಗೆ ಬೇ ಅನಿತಕ್ಕನ ರೋಲು ಕೊಡುಸ್ತಿನಿ, ಮಾಡ್ತೀಯಾ?"

"ಅನಿತ ನನಗಿಂತ ಚನ್ನಾಗ್ಯವುಳೆ."

"ಮೇಕಪ್ ಮಾಡಿದ್ರೆ ನೀನೂ ಚನ್ನಾಗಿ ಕಾಣ್ತೆ ಕ ನೀನು ನಾರಾಯಣನ್ನ ಚನ್ನಾಗಿ ನೋಡಿ ಕಂಡ್ರೆ ಕೆ ಕೊಡ್ತನೆ. ಟ್ರೈ ಮಾಡ್ಲ?"

"ನನಿಗೇನು ಬ್ಯಾಡ. ನೀನೆ ಯಾವ್ದಾರ ಕುಡು ಪಾರ್ಟಿದ್ರೆ ಮಾಡು."

"!!"



ಬಾಂದಾದ ಮುಸ್ಲಿಮರು ಬ್ರಾಹ್ಮಣ ಪೇಶ್ವೆಯ ವಂಶಜರು

ಒಂದು ಪತ್ರ

ಒಂಟಿ ಗೆರೆ ಉದ್ದವಾಗಿದೆಯೋ ಅಥವಾ ಗಿಡ್ಡವಾಗಿದೆಯೋ ಎಂದು ಹೇಳಲು ಸಾಧ್ಯವಿಲ್ಲ; ಆ ಗೆರೆಯ ಬದಿಗೆ ಇನ್ನೊಂದು ಗೆರೆ ಎಳೆದಾಗಲೇ ಮೊದಲಿನ ಗೆರೆ ಉದ್ದವೇ ಅಥವಾ ಗಿಡ್ಡವೇ ಎಂದು ಹೇಳಲು ಸಾಧ್ಯ. ಅದೇ ಪ್ರಕಾರ ಕೆಲವರ ವ್ಯಕ್ತಿತ್ವ ಅಳೆಯಬೇಕಾದರೆ ಅವರ ಕಾರ್ಯಗಳನ್ನು ಅದೇ ಸ್ತರದಲ್ಲಿರುವ ಬೇರೊಂದು ವ್ಯಕ್ತಿಯೊಂದಿಗೆ ಹೋಲಿಸಿ ವಿಶ್ಲೇಷಿಸಬೇಕಾಗುತ್ತದೆ. ಅದಕ್ಕಾಗಿ ಹೈದರಾಲಿ-ಟಿಪ್ಪು ಸುಲ್ತಾನರ ಕಾರ್ಯಗಳನ್ನು ಮಹಾರಾಷ್ಟ್ರದ ಪೇಶ್ವೆಗಳೊಂದಿಗೆ ಹೋಲಿಸಿ ವಿಶ್ಲೇಷಿಸಿದರೆ ಸರಿಯಾಗುತ್ತದೆ.



ಮರಾಠ ರಾಜ್ಯ ಸಂಸ್ಥಾಪಕ ಛತ್ರಪತಿ ಶಿವಾಜಿಯ ಮೊಮ್ಮಗ ಛತ್ರಪತಿ ಶಾಹುವನ್ನು ಮೋಸದಿಂದ ಗೃಹಬಂಧನದಲ್ಲಿ ಇರಿಸಿ ಅವನ ಮಹಾಮಂತ್ರಿಯಾದ ಬಾಲಾಜಿ ವಿಶ್ವನಾಥ್ ಭಟ್ ಎಂಬವನು ಮರಾಠಾ ರಾಜ್ಯವನ್ನು ಕಬಳಿಸಿದ. ಪೇಶ್ವೆ ಎಂಬುದು ಅವನ ಕುಲನಾಮವಾಗಿರಲಿಲ್ಲ, ಪರ್ಷಿಯನ್ ಭಾಷೆಯಲ್ಲಿ ಪೇಶ್ವಾ ಎಂದರೆ ಮಹಾಮಂತ್ರಿ ಎಂದು ಅರ್ಥ. ಆ ಪರ್ಷಿಯನ್ ಶಬ್ದವನ್ನೇ ನಂತರ ಆತ ತನ್ನ ಕುಲನಾಮ ಮಾಡಿಕೊಂಡಿದ್ದು. ಅವನ ಮರಿಮಗ ಎರಡನೇ ಬಾಜೀರಾವ್ 1796 ರಲ್ಲಿ ಆಗ ಮರಾಠಾ ರಾಜ್ಯದ ರಾಜನಾಗಿದ್ದ ತನ್ನದೇ ಸಹೋದರ ಸವಾಯಿ ಮಾಧವ ರಾವ್‌ನನ್ನೇ ಮೋಸದಿಂದ ಕೊಂದು ಮರಾಠಾ ರಾಜ್ಯವನ್ನು ಕಬಳಿಸಿದ. ಇದೇ ಎರಡನೇ ಬಾಜೀರಾವ್ 1797ರಲ್ಲಿ ಅತ್ಯಂತ ಶ್ರೀಮಂತವಾಗಿದ್ದ ನಮ್ಮ ಶೃಂಗೇರಿ ಮಠದ ಮೇಲೆ ದಾಳಿ ಮಾಡಿ ಅದನ್ನು ಸಂಪೂರ್ಣ ಲೂಟಿ ಮಾಡಿ ಶಾರದ ದೇವಸ್ಥಾನದ ಮೂರ್ತಿಯನ್ನು ಬೀದಿಗೆಸೆದು ನೂರು ಬಂಡಿಗಳಲ್ಲಿ ಲೂಟಿಯ ಸಂಪತ್ತು ಹೇರಿಕೊಂಡು ಪುಣೆಗೆ ಕೊಂಡೊಯ್ದ. ಪೇಶ್ವೆಗಳು ಶೈವ (ಚಿತ್ಪಾವನ್) ಬ್ರಾಹ್ಮಣರಾಗಿದ್ದರೂ ಅವರು ಸ್ವತಃ ಶಂಕರಾಚಾರ್ಯ ಸ್ಥಾಪಿಸಿದ ಮೊಟ್ಟ ಮೊದಲನೇ ಮಠವಾದ ಶೃಂಗೇರಿಯನ್ನೇ ಲೂಟಿ ಹೊಡೆದರು.

ಆನಂತರ ಆ ಮಠವನ್ನು ಮತ್ತು ಶಾರದ ದೇವಸ್ಥಾನವನ್ನು ಪುನರ್ ನಿರ್ಮಾಣ ಮಾಡಲು ಸಹಾಯ ಮಾಡಿದ್ದು ಮೈಸೂರಿನ ಟಿಪ್ಪು ಸುಲ್ತಾನ್. ಹಾಗಾಗಿ ಟಿಪ್ಪು ಸುಲ್ತಾನ್ ಮತ್ತು ಪೇಶ್ವೆಗಳ ಸಮಕಾಲೀನ ಇತಿಹಾಸ ಪರಸ್ಪರ ಹೋಲಿಸಿ ನೋಡಿದರೆ ಮಾತ್ರ ಟಿಪ್ಪುವಿನ ಮಹಾನ್ ವ್ಯಕ್ತಿತ್ವ ಹಾಗೂ ಘನ ಕಾರ್ಯಗಳು ಅರ್ಥವಾಗಲು ಸಾಧ್ಯ.

ಈಗ ನಮ್ಮ ಕರಾವಳಿಯ ಮಂಗಳೂರು ಉಡುಪಿ ಜಿಲ್ಲೆಗಳಲ್ಲಿ ನೆಲೆಸಿರುವ ಮರಾಠಿ ಚಿತ್ಪಾವನ್ ಬ್ರಾಹ್ಮಣರೆಲ್ಲಾ ಆಗ ಬಾಜಿರಾವ್ ಪೇಶ್ವೆಯ ಲೂಟಕೋರ ಸೈನ್ಯದೊಂದಿಗೆ ಬಂದವರೇ ಆಗಿದ್ದು ಇವರೂ ಸಹ ಕನ್ನಡ ಪ್ರದೇಶದ ಮಲೆನಾಡಿನ ಕರಿಮೆಣಸಿನ ವ್ಯಾಪಾರ ಮಾಡುತ್ತಿದ್ದ ಧನಿಕರನ್ನು ಲೂಟಿ ಹೊಡೆದು ಆ ಸಂಪತ್ತಿನೊಂದಿಗೆ ಕರಾವಳಿಗೆ ಹೋಗಿ ಅಲ್ಲಿ ನೆಲೆಸಿದವರೇ ಆಗಿರುವರು.

ಪೇಶ್ವೆಗಳು ತಮ್ಮ ಅಧಿಕಾರಾವಧಿಯಲ್ಲಿ ಕರ್ನಾಟಕ ಮಾತ್ರವಲ್ಲ ತಮ್ಮದೇ ಮಹಾರಾಷ್ಟ್ರ ಮತ್ತು ಮಧ್ಯ ಪ್ರದೇಶದ ಸಾವಿರಾರು ಹಿಂದೂ ದೇವಸ್ಥಾನಗಳನ್ನೇ ಲೂಟಿ ಹೊಡೆದಿರುವುದಾಗಿ ಐತಿಹಾಸಿಕ ದಾಖಲೆಗಳಿವೆ. ಟಿಪ್ಪು ಸುಲ್ತಾನ್ ಹೀಗೆ ಕರ್ನಾಟಕದಲ್ಲಿ ಹಿಂದೂ ದೇವಸ್ಥಾನಗಳನ್ನು ಲೂಟಿ ಹೊಡೆದಿರಲಿಲ್ಲ.

ಹಿಂದೂಸ್ಥಾನ ಕಂಡ ಅತೀದೊಡ್ಡ ದೇವಳ ಲೂಟಿಕೋರರೆಂದರೆ ಪೇಶ್ವೆಗಳಾಗಿದ್ದು ಇವರಿಗೆ ಹೋಲಿಸಿದಾಗ ಘಜನಿ ಮಹಮ್ಮದ್ ಸಹ ಬರಿ ಸಪ್ಪೆಯಾಗಿ ಕಾಣುತ್ತಾನೆ. ಅಫಘಾನರು, ಪರ್ಷಿಯನ್ನರು ಹಾಗೂ ಇತರ ಸುಲ್ತಾನರು ಮೊದಲು ಭಾರತಕ್ಕೆ ಬಂದಿದ್ದು ರಾಜ್ಯ ವಶಪಡಿಸಿಕೊಳ್ಳಲು ಅಲ್ಲವೇ ಅಲ್ಲ.

ದೇವಸ್ಥಾನಗಳಲ್ಲಿ ಧನಕನಕಗಳನ್ನು ಹೇರಿಸಿಡುವ ಹಿಂದೂಗಳ ಕೆಟ್ಟ ಅಭ್ಯಾಸ ಆ ವಿದೇಶಿಗಳಿಗೆ ಗೊತ್ತಾಗಿದ್ದರಿಂದ ಹಾಗೂ ಅದನ್ನು ವಶಪಡಿಸಿಕೊಳ್ಳುವುದು ಸುಲಭ ಎಂದು ಅವರು ಅರಿತಿದ್ದರಿಂದ ಆ ಮ್ಲೇಚ್ಛರು-ಯವನರು ದೇವಸ್ಥಾನಗಳನ್ನು ಲೂಟಿ ಹೊಡೆಯಲು ಭಾರತಕ್ಕೆ ಬಂದಿದ್ದು ಹಾಗೂ ಕೇವಲ ಧನಿಕ ಹಿಂದೂ ಮಂದಿರಗಳನ್ನು ಮಾತ್ರ ಗುರಿ ಮಾಡಿದ್ದು. ಅವರು ಹಿಂದೂ ದೇವಸ್ಥಾನಗಳ ಮೇಲೆ ದಾಳಿ ಮಾಡಿದ್ದು ಅನ್ಯ ಧರ್ಮದ ಬಗೆಗಿನ ದ್ವೇಷದಿಂದ ಅಲ್ಲ. ಒಂದು ವೇಳೆ ಆಗ ಈ ಹಿಂದೂ ದೇವಸ್ಥಾನಗ ಅಗಾಧ ಸಂಪತ್ತಿನ ಆಗರವಾಗಿರದೇ ಅವು ಸಾಧಾರಣ ದೇವಸ್ಥಾನಗಳಾಗಿ ವಿದೇಶಿಯರು ಹಿಂದೂ ದೇವಳಗಳನ್ನು ಮುಟ್ಟಲೂ ಹೋಗುತ್ತಿರಲಿ ಒಟ್ಟಾರೆ ಸಂಪತ್ತನ್ನು ದೇವಸ್ಥಾನಗಳಲ್ಲಿ ಶೇಖರಿಸಿಡುವ ಹಿಂದೂಗಳ ಅಭ್ಯಾಸದಿಂದಾಗಿಯೇ ಹಿಂದೂ ದೇವಳಗಳು ಇತರ ಧರ್ಮೀಯರಿಂ ಮಾತ್ರವಲ್ಲ ಪೇಶ್ವೆಯಂತಹ ಸ್ವಧರ್ಮೀಯರಿಂದಲೂ ದಾಳಿಗೆ ಒಳಗಾಗಿ ಧಾರ್ಮಿಕ ದ್ವೇಷದಿಂದ ಹಿಂದೂ ದೇವಳಗಳು ದಾಳಿಗೊಳಗಾಗಿದ್ದು ಕಡಿ

ಕೇರಳದ ತಿರುವನಂತಪುರದ ಅನಂತ ಪದ್ಮನಾಭ ದೇವ ತಳಮಾಳಿಗೆಯಲ್ಲಿರುವ ಅಪಾರ ಸಂಪತ್ತಿನ ಬಗ್ಗೆ ಬಾಜಿರಾವ್ ಪೇಶ್ವೆಗ ಗೊತ್ತಿರಲಿಲ್ಲ, ಇಲ್ಲದಿದ್ದರೆ ಅವನು ಕೇರಳಕ್ಕೂ ಹೋಗಿ ಅನಂತಪದ್ಮನಾ ದೇವಳವನ್ನೂ ಲೂಟಿ ಹೊಡೆಯದೇ ಬಿಡುತ್ತಿರಲಿಲ್ಲ. ಹಿ ಹಿಂದೂ ದೇವಸ್ಥಾನಗಳಲ್ಲಿ ಅಪಾರ ಸಂಪತ್ತು ಅಡಗಿಸಿಡು ಭಾರತೀಯರ ಇಂತಹ ಮೂರ್ಖ ಅಭ್ಯಾಸ ದುಷ್ಪರಿಣಾಮಗಳನ್ನು ಅನ್ಯಧರ್ಮೀಯರ ಮೇಲೆ ಹೊರಿಸ ಸಾಧ್ಯವೇ? ಸಿಹಿ ಇದ್ದಲ್ಲಿ ಇರುವೆ ಬರಲೇ ಬೇಕು ಅದು ಇರುವೆಯ ತಪ್ಪು ಎನ್ನಲಾದೀತೆ?

ಇವತ್ತಿಗೂ ನಾವು ಇತಿಹಾಸದಿಂದ ಪಾಠ ಕಲಿ ದೇವಸ್ಥಾನಗಳಲ್ಲಿ ದೇವರ ಮೂರ್ತಿಗೆ ಚಿನ್ನ ವಜ್ರದ ಕ ಕಿರೀಟ ತೊಡಿಸುವುದಲ್ಲದೇ ಕೆಲವು ದೇವಸ್ಥಾನಗಳು ಮತ್ತು ಮಠ ಈಗ ರಾಜಕಾರಣಿಗಳ ಅನಧಿಕೃತ ಸ್ವಿಸ್ ಬ್ಯಾಂಕುಗಳಾಗಿ ಬಿಟ್ಟಿವೆ.

ಮೊದಲನೇ ಬಾಜಿರಾವ್ ಪೇಶ್ವೆಯು ಮಸ್ತಾನಿ ಎಂಬ ಪರ್ಷಿಯ ಕನ್ಯೆಯನ್ನು ಮದುವೆಯಾಗಿ ಪಡೆದ ಮಕ್ಕಳು ಮುಂದೆ ಮುಸ್ಲಿಮರಾಗಿ ಉ ಪ್ರದೇಶದ ಬಾಂದಾ ಎಂಬಲ್ಲಿ ರಾಜ್ಯವಾಳಿದರು. ಬಾಜಿರಾವ್-ಮಸ್ತಾನಿ ಮೊದಲ ಮಗ ಶಂಶೇರ್ ಬಹದ್ದೂರ್, ಇವನ ಮಗ ಅಲಿ ಬಹದ್ದೂ ಮತ್ತು ಅವನ ಮಗ ಜಗತ್ ಬಹದ್ದೂರ್, ಈ ಮೂರು ತಲೆಮಾ ಬಾಂದಾದಲ್ಲಿ ನವಾಬರಾಗಿ ರಾಜ್ಯವಾಳಿದ್ದರು. ಇವರ ಮುಸ್ಲಿಂ ವಂಶಜ ಇಂದಿಗೂ ಯುಪಿಯ ಬಾಂದಾದಲ್ಲಿ ಇದ್ದಾರೆ. ಯೋಗಿ ಆದಿತ್ಯನಾ ಹಿಂದೂತ್ವವಾದಿಗಳು ಈ ಬಾಂದಾ ನವಾಬರನ್ನೂ ಮುಸ್ಲಿಮರೆಂಬ ಒಂ ಕಾರಣಕ್ಕೆ ದ್ವೇಷಿಸುತ್ತಿರಬಹುದೇ? ಅಥವಾ ಬ್ರಾಹ್ಮಣ ಪೇಶ್ವೆಯ ವಂಶಜರೆಂ ಗೌರವಿಸುತ್ತಿರಬಹುದೇ? ಎಂಬುದು ಯಕ್ಷ ಪ್ರಶ್ನೆ!

- ಜೆ.ರವಿಕಿರಣ ರೈ, ಮೈಸೂ

ವ್ಯಾಘ್ರನ ಕರೆ

ಮತ್ತೊಮ್ಮೆ ಜೀವದಾನ

ಇಂಗ್ಲಿಷ್ ಮೂಲ: ಆರ್ಥರ್ ಫೋವೆಲ್

ಕನ್ನಡಕ್ಕೆ: ವಸಂತ್ ನಡಹಳ್ಳಿ



ಕಾಡಿಗೆ ಹೋಗುವ ಮುನ್ನ ನಾನು ಯಾವಾಗಲೂ ...ಕಿನ ಸೇಫ್ಟಿಕ್ಯಾಚ್‌ನ್ನು ಪರೀಕ್ಷೆ ಮಾಡುವಂತೆ ಈ ...ಮಾಡಿರಲಿಲ್ಲ. ಒಂದು ತಿಂಗಳ ಹಿಂದೆ ಚಿರತೆಯನ್ನು ...ಯಾಡಲು ಮಳೆಯಲ್ಲಿ ಕುಳಿತಿದ್ದಾಗ ಬಂದೂಕಿನಲ್ಲಿ ...ಹೋಗಿ ತುಕ್ಕುಹಿಡಿದಿತ್ತು. ಬಂದೂಕಿನ ಭಾಗಗಳನ್ನು ...ಎಣ್ಣೆಯಲ್ಲಿ ನೆನೆಸಿಟ್ಟು ಅದನ್ನು ದುರಸ್ತಿ ಮಾಡಿ ...ಹ್ನ ನಾಲ್ಕೂವರೆಗೆ ಮತ್ತೆ ಅದೇ ಸ್ಥಳಕ್ಕೆ ಹೋದೆ. ...ನನ್ನ ಜೀವವುಳಿಸಿದ ಸ್ಥಳದಲ್ಲಿ ತಲೆಬಾಗಿ ವಂದಿಸಿ ...ಸುವಶದ.

...ಬಾರಿ ಹಳ್ಳದ ಎದುರಿನ ಒಂದು ಎತ್ತರದ ಸ್ಥಳ ...ಆರಿಸಿಕೊಂಡೆ. 500 ಅಡಿ ಆಚೆ ಒಂದು ಸಣ್ಣ ...ದ್ದು ಮಧ್ಯದಲ್ಲಿ ಸಾಕಷ್ಟು ಬಯಲು ಪ್ರದೇಶವಿತ್ತು. ...ನ ಪ್ರದೇಶ ದಟ್ಟವಾದ ಪೊದೆಕಾಡುಗಳಿಂದ ಆವೃತ ...ದ್ದು ಹುಲಿ ದಿಬ್ಬದಿಂದ ಇಳಿಯುವಾಗ ನನ್ನ ದೃಷ್ಟಿಗೆ ...ಗಿ ನಿಲುಕುತ್ತಿತ್ತು. ನನ್ನಿಂದ ಕೆಲವು ಅಡಿ ಹಿಂದೆ ...ಗಳಲ್ಲಿ ಕುಳಿತ ಜನಗಳು ಧ್ವನಿನಕಲನ್ನು ಮಾಡಿ ...ಯನ್ನು ಆಕರ್ಷಿಸಬೇಕಾಗಿತ್ತು.

...ಜೆಯ ಹೊಂಗಿರಣಗಳು ಮರದ ಮೇಲೆ ಹೊಳೆಯು... ಶಿಕಾರಿಗಳು ಮೂರ್‍ನಾಲ್ಕು ಬಾರಿ ಹುಲಿಯನ್ನು ...ು. ತಕ್ಷಣ ಪ್ರಾಣಿಯ ನೆರಳೊಂದು ಎದುರಿನ ದಿಬ್ಬ ...ಹಾಯ್ದು ಹೋದಂತೆ ಅನಿಸಿತು. ಆದರೆ ದಟ್ಟಕಾನನ ...ಷ್ಟವಾಗಿ ಹುಲಿಯ ದೇಹ ಕಂಡುಬರಲಿಲ್ಲ. ಕೆಲವೇ ...ಲ್ಲಿ ನೆರಳು ಮಾಯವಾದಾಗ ನಾನು ಹುಲಿ ನನ್ನ ...ದಿನ ಬಯಲು ಪ್ರದೇಶದಲ್ಲಿ ಕಾಣಿಸಿಕೊಳ್ಳು ವುದನ್ನು ...ಸುತ್ತಾ ಕುಳಿತಿದ್ದೆ. ಸುಮಾರು 5 ನಿಮಿಷ ಗಳಾಗಿರ ...ು. ಶಿಕಾರಿಗಳು ಹುಲಿಯ ಕರೆಯನ್ನು ನಿಲ್ಲಿಸಿದ್ದು ...ಮನಕ್ಕೆ ಬಂದು ಅದನ್ನು ಮುಂದುವರೆ ಸುವಂತೆ ...ಗೆ ಸೂಚಿಸಲು ನಾನು ತಲೆಯನ್ನು ತಿರುಗಿಸಿದೆ. ...ಜೀವನದ ಅತಿದೊಡ್ಡ ಭಯಾನಕ ದೃಶ್ಯ ನನಗೆ ...ು. ನನ್ನಿಂದ ಕೇವಲ 20 ಅಡಿ ದೂರದಲ್ಲಿ ಹುಲಿ ...ಗಳಂತೆ ಹಿಂಗಾಲನ್ನು ಮಡಿಸಿ ಕುಳಿತಿತ್ತು! ಇಬ್ಬರ ...ಸೇರಿದಾಗ ಹುಲಿಯ ಕಣ್ಣಲ್ಲಿ ಹಿಂದೆಂದೂ ನೋಡಿರದ ...ರ್ಯ ಕಾಣಿಸಿತು. ನನ್ನ ಎಡಭುಜದ ಮೇಲಿನಿಂದ ...ಹಾರಿಸುವುದು ನನಗೆ ಸುರಕ್ಷಿತವಾಗಿ ಕಾಣಲಿಲ್ಲವಾ... ನಾನು ಗಡಬಡಿಸಿ ಎದ್ದುನಿಂತೆ. ಹುಲಿ ಕೂಡ ...ಂತು ಮುಂಗಾಲನ್ನು ಬಗ್ಗಿಸಿಕೊಂಡೇ ಹಿಮ್ಮುಖವಾಗಿ ...ತೊಡಗಿತು. ತಕ್ಷಣ ಬಲಕ್ಕೆ ತಿರುಗಿ ಓಡಿಹೋಯಿತು. ...ಲ್ಲಿ ನನ್ನನ್ನು ಸಂಭಾಳಿಸಿಕೊಳ್ಳುತ್ತಾ ಒಂದು ಗುಂಡನ್ನು ...ದೆ. ಆದರೆ ಹುಲಿ ಮಿಂಚಿನಂತೆ ಮಾಯವಾಗಿತ್ತು. ...ದಿನ ಎರಡನೇ ಬಾರಿ ನಾನು ಪವಾಡಸದೃಶವಾಗಿ ...ವಾಗಿದ್ದೆ.

...ಲ್ಲಿ ಏನಾಗಿರಬಹುದೆಂದು ನಂತರ ನಾನು ಊಹಿಸಿದೆ. ...ಸ ಗುಡ್ಡದಲ್ಲಿದ್ದ ಹುಲಿ ಧ್ವನಿಬಂದ ನಿಖರವಾದ ...ನ್ನು ಗುರುತಿಸಿ ಬಳಸಿಕೊಂಡು ಅಲ್ಲಿಗೆ ತಲುಪಿತ್ತು. ...ಅಲ್ಲಿ ನಮ್ಮ ಕಣ್ಣಿಗೆ ಬೀಳದಂತೆ-ಅದು ಎಚ್ಚರವಹಿಸಿತ್ತು. ಭಯಭೀತರಾಗಿದ್ದ ಶಿಕಾರಿಗಳು ನನ್ನನ್ನು ಎಚ್ಚರಿಸದೆ ಹುಲಿಯ ಕಣ್ಣಿನಿಂದ ತಪ್ಪಿಸಿಕೊಳ್ಳಲು ಒಟ್ಟಾಗಿ ಬಗ್ಗಿ ಕುಳಿತಿದ್ದರು. ನಾನು ಸಂಪೂರ್ಣ ನಿಶ್ಚಲವಾಗಿ ಕುಳಿತಿದ್ದರಿಂದ ಹುಲಿಯ ಗಮನವನ್ನು ತಪ್ಪಿಸಿಕೊಂಡಿದ್ದೆ. ಹುಲಿಗಳ ವಾಸನಾಘ್ರಹಣ ಶಕ್ತಿ ಬಹಳ ಕಡಿಮೆ ಇರುವುದರಿಂದ ಅದಕ್ಕೆ ನಮ್ಮ ಇರವು ಅಷ್ಟು ಹತ್ತಿರದಿಂದ ಕೂಡ ತಿಳಿಯಲಿಲ್ಲ. ನನ್ನ ಗುಂಡು ಗುರಿತಪ್ಪಿತ್ತು. ಪೊದೆಗಳ ಮರೆಯಲ್ಲಿ ಓಡಿಹೋದ ಹುಲಿ ಒಂದು ಮೈಲು ದೂರದಲ್ಲಿ ಕಟ್ಟಿದ್ದ ಬಲಿಪಶುವೊಂದನ್ನು ಕೊಂದಿರುವುದು ಮರುದಿನ ಬೆಳಗ್ಗೆ ತಿಳಿಯಿತು.

ನೀಲಗಿರಿ ಬೆಟ್ಟಗಳಲ್ಲಿನ ಒಬ್ಬ ಅನುಭವಿ ಬೇಟೆಗಾರ ನನಗೆ ಹೇಳಿದ ಪ್ರಕಾರ ಜಿಂಕೆಗಳನ್ನು ಬೇಟೆಯಾಡಲು ಅದರ ಧ್ವನಿನಕಲನ್ನು ಮಾಡಿ ಕೆಲವರು ಅಪಾಯಕ್ಕೆ ಸಿಕ್ಕಿಕೊಳ್ಳುತ್ತಿದ್ದರು. ಜಿಂಕೆಯ ಕರೆಗೆ ಆಕರ್ಷಿತರಾಗಿ ಬರುವ ಹುಲಿ ಅಥವಾ ಚಿರತೆಗಳು ಅವರ ಜೀವಕ್ಕೇ ಮುಳುವಾಗುತ್ತಿದ್ದವು. ನನ್ನ ಅವತ್ತಿನ ಅನುಭವ ಇದನ್ನು ಪುಷ್ಟೀಕರಿಸಿತು.

ನಮ್ಮ ಬಲಿಪಶುವನ್ನು ಕೊಂದಿದ್ದ ಸ್ಥಳದಲ್ಲಿ ಮಚಾನನ್ನು ಕಟ್ಟಿ ಹುಲಿಯನ್ನು ಬೇಟೆಯಾಡಬೇಕೆಂದು ನಮ್ಮ ಶಿಕಾರಿಗಳು ಹೇಳಿದಾಗ ನಾನು ಒಪ್ಪಲಿಲ್ಲ. ಎರಡು ಬಾರಿ ನನ್ನ ಜೀವವುಳಿಸಿದ ಹುಲಿಯನ್ನು ಹೇಡಿಯಂತೆ ಮಚಾನಿನಲ್ಲಿ ಕುಳಿತು ಬೇಟೆಯಾಡುವುದು ಅನೈತಿಕವಾಗುತ್ತಿತ್ತು. ಬಲಿಪಶುವನ್ನು ಮನಃಪೂರ್ತಿ ತಿನ್ನಲು ಬಿಟ್ಟು ನಾನು ಸುಮ್ಮನಾದೆ.

ಧ್ವನಿನಕಲಿನ ರೋಮಾಂಚಕ ಅನುಭವಗಳು

ಧ್ವನಿನಕಲಿನ ಮೂಲಕ ಹುಲಿಬೇಟೆಯನ್ನು ಮಾಡುವುದು ಅಮಾಯಕ ಪ್ರಾಣಿಗಳನ್ನು ಬಲಿಪಶುವನ್ನಾಗಿ ಉಪಯೋಗಿಸುವುದನ್ನು ತಪ್ಪಿಸುತ್ತದೆ. ಅಷ್ಟೇ ಅಲ್ಲದೆ ಬೇಟೆಗಾರನಿಗೆ ತನ್ನ ಪ್ರಬಲ ಶತ್ರುವನ್ನು ಸಮಾನ ಸ್ತರದಲ್ಲಿ ಎದುರಿಸುವ ಅವಕಾಶ ನೀಡುತ್ತದೆ. ಸೋವುಗೆ ಮಾಡುವಾಗ ಹುಲಿಗಳು ಭಯದಿಂದ ಓಡುತ್ತಿರುತ್ತವೆ. ಆದರೆ ಈ ಅದ್ಭುತ ಪ್ರಾಣಿಗಳನ್ನು ಸೂರ್ಯನ ಬೆಳಕಿನಲ್ಲಿ ಸಹಜವಾಗಿ ಕಾಡಿನಲ್ಲಿ ಸುತ್ತಾಡುವಾಗ ನೋಡುವ ಅವಕಾಶ ಸಿಗುವುದು ಧ್ವನಿನಕಲನ್ನು ಉಪಯೋಗಿಸಿದಾಗ ಮಾತ್ರ. ಎಲ್ಲ ಬೇಟೆಗಾರರೂ ಅವರಿಗೆ ಸೂಕ್ತವಾದ ಮಾರ್ಗಗಳನ್ನು ಆಯ್ದುಕೊಳ್ಳಬಹುದಾದರೂ ಧ್ವನಿನಕಲನ್ನು ಉಪಯೋಗಿ ಸುವುದು ಅತ್ಯಂತ ರೋಮಾಂಚಕಾರಿ ಬೇಟೆಯ ಮಾದರಿ. ಇದರಲ್ಲಿ ಸಾಕಷ್ಟು ಸೋಲುಗಳಿದ್ದರೂ ಬೇಟೆಯಾಡಲು ಅಥವಾ ಚಿತ್ರೀಕರಿಸಲು ಸಾಧ್ಯವಾದಾಗ ಸಿಗುವ ಖುಷಿ ಅನನ್ಯವಾದದ್ದು.

ಎಷ್ಟೋಬಾರಿ ಕಾಡಿನಲ್ಲಿದ್ದಾಗ ನನ್ನ ಬಳಿ ಕ್ಯಾಮೆರಾ ಇದ್ದಿದ್ದರೆ ಎಂದು ಅನ್ನಿಸಿದ್ದು ನಿಜ. ಆದರೆ ಬೇಟೆಯಾಡವುದರತ್ತ ನನಗೆ ಹೆಚ್ಚು ಆಕರ್ಷಣೆಯಿತ್ತು. ರಾತ್ರಿಯ ಹೊತ್ತು ಹೊನಲು ಬೆಳಕನ್ನು ಉಪಯೋಗಿಸಿ ಕೆಲವರು ಉತ್ತಮ ಛಾಯಾಚಿತ್ರಗಳನ್ನು ತೆಗೆದಿದ್ದಾರೆ. ಆದರೆ ಧ್ವನಿನಕಲನ್ನು ಉಪಯೋಗಿಸಿ ಈ ನಿಶಾಚರಿಯನ್ನು ಪೂರ್ಣ ಬೆಳಕಿನಲ್ಲಿ ಬರುವಂತೆ ಮಾಡಿ ಅದ್ಭುತ ಚಿತ್ರಗಳನ್ನು ತೆಗೆಯಬಹುದು. ಭಾರತದ ಕಾಡುಗಳನ್ನು ಪ್ರೀತಿಸುವವರು ನಾನು ಇಲ್ಲಿ ಹೇಳಿರುವ ಮಾದರಿಯನ್ನು ಉಪಯೋಗಿಸಿ ಇಂತಹ ಚಿತ್ರಮಾಲಿಕೆಯನ್ನು ತಯಾರಿಸುತ್ತಾರೆಂದು ನಾನು ಆಶಿಸುತ್ತೇನೆ. ಹುಲಿಗಳನ್ನು ನಿಶ್ಚಿತ ಸ್ಥಳಕ್ಕೆ ಬರುವಂತೆ ಮಾಡಲು ಧ್ವನಿನಕಲಿಗಿಂತ ಉತ್ತಮ ವಿಧಾನ ನನಗೆ ತಿಳಿದಿಲ್ಲ.

ಒಮ್ಮೆ ಹುಲಿಯೊಂದು ನಮ್ಮ ಬಲಿಪಶುವನ್ನು ಕೊಂದು ದಟ್ಟ ಕಾಡಿನಲ್ಲಿ ಎಳೆದುಕೊಂಡುಹೋಗಿತ್ತು. ಬಿದಿರು ಮತ್ತು ಬಳ್ಳಿಗಳಿಂದ ತುಂಬಿದ್ದ ಕಾಡಿನಲ್ಲಿ ಹಗಲ ಹೊತ್ತಿನಲ್ಲಿ ಕೂಡ ಕತ್ತಲಾವರಿಸಿರುತ್ತಿತ್ತು. ಬಲಿಪಶುವನ್ನು ಸ್ವಲ್ಪ ಬಯಲು ಪ್ರದೇಶಕ್ಕೆ ತಂದು ಬಲವಾಗಿ ಕಟ್ಟಿದೆವು. 100 ಅಡಿ ದೂರದಲ್ಲಿದ್ದ ಮರ ಕೇವಲ 8 ಅಡಿ ಎತ್ತರವಿದ್ದರೂ ಅದರಲ್ಲೇ ಮಚಾನನ್ನು ನಿರ್ಮಿಸಿದೆವು. ರಾತ್ರಿಯಿಡೀ ಅಲ್ಲಿ ಕಳೆಯಲು ನಾನು ಸಿದ್ಧನಾದೆ. ಮಹಾದೈತ್ಯನೆಂದು ಪ್ರಸಿದ್ಧನಾಗಿದ್ದ ಹುಲಿಯನ್ನು ಇಂತಹ ದಟ್ಟಕಾಡಿನಲ್ಲಿ ಕೇವಲ ಗಾಯಗೊಳಿಸಿ ಬಿಟ್ಟರೆ ಏನಾಗಬಹುದು ಎನ್ನುವ ಯೋಚನೆ ನನ್ನಲ್ಲಿ ಸುಳಿಯಿತು.

ಕತ್ತಲಾದ ಮೇಲೆ ಚಂದ್ರನ ಮಂದಬೆಳಕಿನಲ್ಲಿ ಕಣಿವೆಯ ಕತ್ತಲಲ್ಲಿದ್ದ ಶವ ಕಾಣುತ್ತಿರಲಿಲ್ಲ. ಹಾಗಾಗಿ ಹುಲಿಯ ಆಗಮನವನ್ನು ತಿಳಿಯಲು ನನ್ನ ಕಿವಿಗಳನ್ನೇ ಆಧರಿಸಬೇಕಾಗಿತ್ತು. ಹುಲಿ ನೇರವಾಗಿ ಶವದ ಕಡೆ ಬರದೆ ಅದರ ಸುತ್ತ ವೃತ್ತಾಕಾರದಲ್ಲಿ ಚಲಿಸುತ್ತಿತ್ತು. ಒಂದೆರಡು ಬಾರಿ ನನ್ನ ಮಚಾನಿನ ಕೆಳಗೂ ಬಂದಿತ್ತು! ನಾನು ಎಲ್ಲಿರಬಹುದೆಂಬ ಬಗೆಗೆ ಹುಲಿಗೆ ಅನುಮಾನಗಳಿದ್ದೂ ನಿಶ್ಚಲವಾಗಿ ಬಂದೂಕನ್ನು ಸಿದ್ಧಮಾಡಿಕೊಂಡು ಕುಳಿತಿದ್ದ ನನ್ನನ್ನು ಅದು ಪತ್ತೆಮಾಡಲಿಲ್ಲ. ಕಾಲುಗಳು ಮರಗಟ್ಟಿಹೋಗಿದ್ದವು. ಮಧ್ಯರಾತ್ರಿಯ ನಂತರ ಬೀಳಲು ಶುರುವಾದ ಓಡದ ಟಪ್‌ಟಪ್ ಶಬ್ದದಿಂದ ಇತರ ಸದ್ದುಗಳನ್ನು ಕೇಳುವುದು ಕಷ್ಟವಾಯಿತು. ಜೊತೆಗೆ ಬಾನಿನಿಂದ ಮರೆಯಾದ ಚಂದ್ರ ಕಾಡನ್ನು ಕತ್ತಲಲ್ಲಿ ಮುಳುಗಿಸಿದ.

ಜಿಂಕೆಯೊಂದು ಅಪಾಯದ ಕರೆ ಮೊಳಗಿಸಿದಾಗ ನಾನು ಚುರುಕುಗೊಂಡೆ. ಕಣ್ಣನ್ನು ಕಿರಿದು ಮಾಡಿ ಶವದ ಬಳಿ ಹುಲಿಯ ಚಲನೆಗಾಗಿ ಕಾಯ್ದುಕುಳಿತಿದ್ದೆ. ಒಮ್ಮೆ ಏನೋ ಶಬ್ದ ಕೇಳಿದಂತಾಗಿ ಟಾರ್ಚ್‌ನ್ನು ಹೊತ್ತಿಸಿದಾಗ ಏನೂ ಕಾಣಲೇ ಇಲ್ಲ. ಅರ್ಧಗಂಟೆಯ ನಂತರ ದೊಡ್ಡ ಶಬ್ದವೊಂದು ಕೇಳಿದಾಗ ಹುಲಿ ಆಗಮಿಸಿರುವುದು ಖಚಿತವಾಯಿತು. ಮತ್ತೆ ಟಾರ್ಚ್‌ನ ಬೆಳಕನ್ನು ಹಾಯಿಸಿದೆ. ಆದರೆ ಅಲ್ಲಿ ಏನೂ ಇರಲಿಲ್ಲ! ಬೆಳಕು ಬಿದ್ದ ಕೂಡಲೆ ಹಿಂದಡಿಯಿಟ್ಟ ಹುಲಿ ಓಡಲು ಸಿದ್ಧವಾಗಿತ್ತು. ನಾನು ಗುಂಡು ಹಾರಿಸಿದ ನಂತರವೂ ಅದು ಮೌನವಾಗಿ ನಿರ್ಗಮಿಸಿತು. ಟಾರ್ಚ್‌ನ್ನು ಅತ್ತಿತ್ತ ಹೊರಳಿಸಿದಾಗ ಮರದ ಕಾಂಡದಲ್ಲಿ ಗುಂಡಿನ ಗುರುತನ್ನು ನೋಡಿ ನಾನು ನಿರಾಶನಾದೆ. ಆ ಕ್ಷಣದಲ್ಲಿ ಇನ್ನೇನು ಮಾಡಲು ಸಾಧ್ಯವಿಲ್ಲವಾದ್ದರಿಂದ ಕಾಲುಚಾಚಿ ನಿದ್ದೆಹೋದೆ.

ಮುಂಜಾವಿಗೆ ಮೊದಲು 200 ಅಡಿ ದೂರದಿಂದ ಹುಲಿಯ ಕೂಗು ಕೇಳಿಸುತ್ತಿತ್ತು. ಇದರ ಅರ್ಥ ಹುಲಿಗೆ ಗಾಯವಾಗಿದೆ ಎಂದು ನನಗೆ ಮನದಟ್ಟಾಯಿತು. ನನ್ನ ಜೊತೆಗಾರ ಶಿಕಾರಿಗಳು ಬಂದಮೇಲೆ ನಾವೆಲ್ಲಾ ಬೆಟ್ಟವನ್ನಿಳಿಯುತ್ತಾ ರಕ್ತದ ಗುರುತಿನ ಜಾಡು ಹಿಡಿದು ಹೊರಟೆವು. ಆ ದಟ್ಟವಾದ ಪೊದೆಗಳ ಮಧ್ಯೆ ನಾವು ಎಚ್ಚರಿಕೆಯಿಂದ ತೆವಳುತ್ತಾ ಸಾಗಬೇಕಾಗಿತ್ತು. ಸುಮಾರು 200 ಅಡಿ ದೂರ ಕ್ರಮಿಸಲು ನಮಗೆ ಅರ್ಧಗಂಟೆಯ ಸಮಯ ಬೇಕಾಯಿತು. ಮುಂದೆ ಹುಲ್ಲು ಮತ್ತು ಅರಣ್ಯದಿಂದ ಆವರಿಸಲ್ಪಟ್ಟ ಸಣ್ಣ ಕಣಿವೆಯ ಬಳಿ ಬಂದೆವು. ರಕ್ತದ ಜಾಡನ್ನು ಹಿಡಿದು ಮುಂದುವರೆದಾಗ ನಮ್ಮಿಂದ 50 ಅಡಿ ದೂರದ ಹುಲ್ಲು ಅಲುಗಾಡಿದಂತೆ ಅನ್ನಿಸಿ ರಕ್ತ ಹೆಪ್ಪುಗಟ್ಟುವಂತಹ ಹುಲಿಯ ಘರ್ಜನೆ ಕೇಳಿಸಿತು. ಅದು ನಮ್ಮತ್ತ ಆಕ್ರಮಣ ಮಾಡದಿರುವುದನ್ನು ನೋಡಿದರೆ ಅದಕ್ಕೆ ತೀವ್ರ ಗಾಯಗಳಾಗಿರಬೇಕು ಅಥವಾ ಅದು ಓಡಿಹೋಗಲು ಯತ್ನಿಸುತ್ತಿದೆ ಎನ್ನಿಸಿತು. ನಮ್ಮ ಮುಂದೆ ಕೆಲವೇ ಅಡಿಗಳು ದೂರವನ್ನೂ ನೋಡಲಾಗದಂತಹ ಒತ್ತಾದ ಪೊದೆಗಳು ಮತ್ತು ಹುಲ್ಲಿನ ರಾಶಿಯಿತ್ತು. ಹುಲಿಯನ್ನು ಕೆಣಕಲು ಒಂದು ಗುಂಡನ್ನು ಹಾರಿಸಿದಾಗಲೂ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ನಾವು ಸ್ವಲ್ಪ ಸಮಯದ ನಂತರ ಪರೀಕ್ಷಿಸಲು ನಿರ್ಧರಿಸಿ ಹಿಂತಿರುಗಿದೆವು.

ಉಪಾಹಾರ ಮುಗಿಸಿ ಬಂದ ನಾವು ಹುಲಿ ಅಡಗಿದ್ದ ಕಾಡಿನ ಸುತ್ತಲಿನ ಮರಗಳಲ್ಲಿ ಕೆಲವರನ್ನು ಕೂರಿಸಿ ಕೆಳಗೆ ನಡೆಯುವುದನ್ನು ನನಗೆ ಸೂಚಿಸಲು ತಿಳಿಸಿದೆ. ಮೂರ್‍ನಾಲ್ಕು ಗಂಟೆಗಳಾದರೂ ಏನೂ ನಡೆಯಲಿಲ್ಲ. ಆಗ ನಾನು ಮೃದುವಾದ ಧ್ವನಿನಕಲನ್ನು ಮಾಡಿದೆ. ಏನೂ ಉತ್ತರ ಬರದಿದ್ದಾಗ ಮತ್ತೆಮತ್ತೆ ಕೂಗಿದೆ. ಹುಲಿಯಿಂದ ಉತ್ತರ ಬಂದಿತು. ಅದು ಉತ್ತರಿಸಿದಂತೆಲ್ಲಾ ಒಂದು ಕಡೆ ಹುಲ್ಲು ನಿಧಾನವಾಗಿ ಅಲುಗಾಡುತ್ತಿತ್ತು. ನಾನು ದಂಡೆಯೊಂದನ್ನು ಹತ್ತಿ ಹುಲಿ ಇರುವ ಸ್ಥಳವನ್ನು ಅಂದಾಜು ಮಾಡಿ ಅದು ಕಾಣದಿದ್ದರೂ ಆ ದಿಕ್ಕಿನಲ್ಲಿ ಗುಂಡುಹಾರಿಸಿದೆ. ಅಲ್ಲಿ ಹೊರಳಾಡುವ ಗುರಗುಟ್ಟುವ, ಜೋರಾಗಿ ಉಸಿರಾಡುವ ಸದ್ದು ಕೇಳುತ್ತಾ ನಿಧಾನವಾಗಿ ಮೌನ ಆವರಿಸಿತು. ಉಸಿರಾಟದ ಸದ್ದು ಕೇಳುತ್ತಿರಲಿಲ್ಲವಾದ್ದರಿಂದ ಶಿಕಾರಿಗಳಿಗೆ ಹುಲಿ ಸತ್ತುಹೋಗಿರುವುದು ಖಾತ್ರಿಯಾಗಿತ್ತು. ಅರ್ಧಗಂಟೆಯ ನಂತರ ನಾವು ಪೊದೆಗಳಲ್ಲಿ ಜಾಗಮಾಡಿಕೊಳ್ಳುತ್ತಾ ಹುಲಿಯನ್ನು ಪತ್ತೆಮಾಡಿದೆವು. ಅದೊಂದು ದೈತ್ಯ ಗಂಡು ಹುಲಿಯಾಗಿತ್ತು.

(ಮುಂದುವರೆಯುವುದು)

ಮಂಗಳೂರು...

...ಕೊಲೆಗಾರನ ರೆಡಿ ಮಾಡುತ್ತೇನೆ ಅಂತಾನೆ. ಮನೆ ...ದ್ದ ಗೌತಮ್‌ಗೆ ದುಡ್ಡಿನ ಜರೂರತ್ತು ಬಿದ್ದಿತ್ತು. ...ಪತ್ತಿರ ಹಣ ಇರುವುದು ತಿಳಿದುಕೊಂಡಿದ್ದ ಆತ ...ಹಂತಕ 5 ಲಕ್ಷ ಕೇಳುತ್ತಿದ್ದಾನೆ. ಕೊಟ್ಟರಷ್ಟೇ ...ಆಗುತ್ತೆ ಎಂದ. ದುಸರಾ ಮಾತಾಡದೆ ಕಾವ್ಯ ಐದು ...ಡಲು ಸಮ್ಮತಿಸುತ್ತಾಳೆ. ತನ್ನ ಪಂಚರಂಗಿ ಆಟಕ್ಕೆ ...ವಾಗಿದ್ದ ಅಣ್ಣ ಆದಷ್ಟು ಬೇಗ ನಿಕಾಲಿಯಾದರೆ ...ತ್ತು ಕಾವ್ಯಳಿಗೆ.

ತಮ್ಮನ ಜತೆ ಸೇರಿಸಿಕೊಂಡ

...ತಮ್‌ಗೂ ಕಾರ್ತಿಕ್‌ನ ಕಂಡರಾಗುತ್ತಿರಲಿಲ್ಲ. ತಮ್ಮ... ಆತ ಕೊಂದರೆ ಕೊಡುತ್ತಾನೆಂಬ ಕೋಪ ...ತ್ತು. ದುಡ್ಡಿನ ಅಡಚಣೆಯಲ್ಲಿದ್ದ ಗೌತಮ್ ಬಾಡಿಗೆ ...ನಿಯಿಸುವುದಕ್ಕಿಂತ ತಾನೇ ಆ ಕೆಲಸ ಮಾಡಿದರೆ ...ರೂಪಾಯಿ ಸಿಗುತ್ತದೆಯಲ್ಲ ಎಂಬ ದುರಾಸೆಗೆ ...ಇಂಜಿನಿಯರಿಂಗ್ ಕಾಲೇಜ್‌ಗೆ ಹೋಗುತ್ತಿದ್ದ ...ಪ್ರಾಯದ ತಮ್ಮ ಗೌರವ್‌ನನ್ನು ಸಹಾಯಕ್ಕೆ ...ಕೊಂಡು ಕಾರ್ತಿಕ್‌ನ ಬೇಟೆಗೆ ಹೊಂಚು ಹಾಕುತ್ತಾನೆ ...!

ಪ್ರಿಯತಮೆಯಿಂದ ಆಕೆಯ ಅಣ್ಣ ಕಾರ್ತಿಕ್‌ನ ಚಲನ-ವಲನ ಗೊತ್ತು ಮಾಡಿಕೊಂಡಿದ್ದ ಗೌತಮ್. ಕಾರ್ತಿಕ್ ಮುಂಜಾನೆ 5.30 ಕ್ಕೇ ಜಾಗಿಂಗ್ ಮಾಡುತ್ತ ಜಿಮ್‌ಗೆ ಹೋಗುವುದನ್ನು ಕರಾರುವಾಕ್ಕಾಗಿ ಕಂಡುಕೊಂಡಿದ್ದ. ಅದೇ ಹಲ್ಲೆ- ದಾಳಿಗೆ ಸರಿಯಾದ ಮುಹೂರ್ತ ಎಂದು ಸ್ಕೆಚ್ ಹಾಕಿದ್ದ. 2016ರ ಅಕ್ಟೋಬರ್ 22ರ ಮುಂಜಾನೆ ಕಾರ್ತಿಕ್ ತನ್ನ ಪಜೀರ್ ಮನೆಯಿಂದ ಜಾಗಿಂಗ್‌ಗೆ ಹೊರಡುತ್ತಲೇ ಆತನ ಹಿಂದೆಯೇ ಬೈಕಲ್ಲಿ ಸಹೋದರ ಗೌರವ್‌ನ ಜತೆಗೂಡಿ ಹೋಗುತ್ತಾನೆ ಗೌತಮ್. ಇನ್ನೇನು ಕೊಣಾಜೆ ಪೊಲೀಸ್ ಸ್ಟೇಷನ್ ನಾಲ್ಕಾರು ಮಾರಷ್ಟೇ ದೂರ. ಹಿಂದಿನಿಂದ ಕಾರ್ತಿಕ್‌ನ ತಲೆ ಮೇಲೆ ಬಲವಾದ ಕಬ್ಬಿಣದ ರಾಡ್‌ನಿಂದ ಹೊಡೆಯುತ್ತಾನೆ. ರಕ್ತದ ಮಡುವಲ್ಲಿ ಬಿದ್ದ ಕಾರ್ತಿಕ್ ಮುದ್ದಿನ ತಂಗಿಯ ಕಾಮದಾಹಕ್ಕೆ ಆಹುತಿಯಾಗಿ ಹೋಗುತ್ತಾನೆ!

ಜಾರಿದ ಚೆಡ್ಡಿ

ದಾಂಪತ್ಯ ಮುರಿಯಬೇಡ, ನಡತೆಗೆಟ್ಟವಳು ಆಗಬೇಡ. ಮನೆತನದ ಮರಿಯಾದೆ ಕಳೆಯಬೇಡ ಎಂದು ಕಾರ್ತಿಕ್ ತಂಗಿಗೆ ಬುದ್ಧಿ ಹೇಳಿದ್ದೇ ಕೇಡಾಗಬಹುದೆಂದು ಆತ ಕನಸು-ಮನಸಿನಲ್ಲೂ ಊಹಿಸಿರಲಿಕ್ಕೂ ಸಾಧ್ಯವಿಲ್ಲ. ಮನೆಮಗಳೇ ಕೊಲೆಗಡುಕಿ ಆದಾಳೆಂಬ ಸಣ್ಣ ಸೂಚನೆಯಾದರೂ ಉಮೇಶ್ ಗಾಣಿಗನ ಮನೆಯವರಿಗೆ ಅದ್ಹೇಗ ಬಂದೀತು? ಪಾತಕಿ ಕಾವ್ಯ ಯಾವ ಸುಳಿವೂ ಬಿಟ್ಟುಕೊಟ್ಟಿರಲಿಲ್ಲ. ಅಣ್ಣನ ಕಳಕೊಂಡ ದುಃಖ ಆಕೆಯ ಮುಖದಲ್ಲಿ ಸದಾ ಇರುತ್ತಿತ್ತು. ಗೆಳೆಯ ಗೌತಮ್ ಈಕೆಗಿಂತಲೂ ಖತರ್‌ನಾಕ್. ಆತ-ಆತನ ತಮ್ಮ ಏನೂ ಗೊತ್ತಿಲ್ಲದಂತೆ ಆರಾಮಾಗಿದ್ದರು. ಯಾವಾಗ ಹಿಂದೂ ಸಂಘಟನೆಗಳು ಇದೊಂದು ಜೇಹಾದಿ ಬ್ಯಾರಿ ಕೃತ್ಯವೆಂದು ಹೈಡ್ರಾಮಾ ಶುರುಹಚ್ಚಿಕೊಂಡವೋ ಆಗಂತೂ ತಾವು ಬಚಾವೆಂದು ಭಾವಿಸಿದ್ದರು ಪಾತಕಿಗಳು!

ಆದರೆ ಕಾವ್ಯ-ಗೌತಮ್ ನಡುವೆ ಹರಿದಾಡಿದ ವಾಟ್ಸಪ್ ಕಾಲ್‌ಗಳು ಕಾರ್ತಿಕ್‌ನ ವ್ಯವಸ್ಥಿತವಾಗಿ ಇವರಿಬ್ಬರು ಮುಗಿಸಿದ್ದಾರೆಂಬುದನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಂತಿತ್ತು. ಅದನ್ನೇ ಆಧಾರವಾಗಿಟ್ಟು ತನಿಖೆ ನಡೆಸಿದ ಎಸಿಪಿ ವೆಲೆಂಟೈನ್ ಡಿಸೋಜಾ ತಂಡ ಭರ್ಜರಿ ಬೇಟೆಯನ್ನೇ ಬೋನಿಗೆ ಕೆಡವಿದ್ದಾರೆ! ಈಗ ಕಾವ್ಯ-ತಾನು ಅಣ್ಣನ ಕೊಂದು ಹಾಕಿ ಎಂದಿರಲಿಲ್ಲ. ಸರಿಯಾಗಿ ಥಳಿಸಿ ಎಂದಿದ್ದೆ ಎಂದು ಗೋಗರೆಯುತ್ತಿದ್ದಾಳೆ. ಪ್ರಿಯಕರನನ್ನೇ ಬಲಿಗೊಟ್ಟು ಪಾರಾಗಲು ಎದುಹಾಕುತ್ತಿದ್ದಾಳೆ. ಆದರೆ ಅದಷ್ಟು ಸರಳವಲ್ಲ. ಚಕ್ಕಂದಕ್ಕೆ ಅಡ್ಡಿಯಾಗಿದ್ದ ಅಣ್ಣನನ್ನು ಆಕೆ ಯೋಜನಾಬದ್ಧವಾಗಿ ಹತ್ಯೆ ಮಾಡಿಸಿದ್ದಾಳೆ.

ಈಗ ಇಂಗು ತಿಂದ ಮಂಗನಂತೆ ಬಿಜೆಪಿ-ಕೇಸರಿ ಪುಂಡರು ಕಣ್ಣು-ಬಾಯಿ ಬಿಡುತ್ತಿದ್ದಾರೆ. ಸಂಘಪರಿವಾರದ ಮಾನ ಮೂರು ಕಾಸಿಗೆ ಮಂಗಳೂರಲ್ಲಿ ಹರಾಜಾಗಿದೆ. ಆದರೆ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವ ಪೈಕಿಯಲ್ಲ ಸಂಘಿಸೈತಾನರು. ಮತ್ತೊಂದು ಇಂಥದೇ ಹುಸಿ ಜೇಹಾದಿ ಗುಲ್ಲು-ಗಲಾಟೆಗೆ ಚೆಡ್ಡಿ-ಕೇಸರಿ ಗ್ಯಾಂಗು ಕಾದು ಕುಳಿತಿದೆ. ಹಿಂದೂತ್ವದ ಅಸಲಿ ತತ್ವವೇ ಸುಳ್ಳು-ದೊಂಬಿ! ಇದೇ ಸಂಘಿಗಳ ಜಾಯಮಾನ ಮತ್ತು ದಂಧೆ. ಹಾಗಾಗಿ ಕಾರ್ತಿಕ್‌ರಾಜ್ ಕೊಲೆ ಪ್ರಕರಣದಿಂದ ಚೆಡ್ಡಿ ಜಾರಿದರೂ ಸಂಘಿಗಳು ಬುದ್ಧಿ ಕಲಿಯುತ್ತಾರೆಂದು ನಿರೀಕ್ಷಿಸಲಾಗದು.

ಹಾಗಾಗಿ ಮಂಗಳೂರಿನ-ಕರಾವಳಿಯ ಜನರೇ ಸಂಘಿಗಳ ಬಗ್ಗೆ ಹುಷಾರಾಗಿರಬೇಕಾಗಿದೆ. ಅನಾಹುತಕಾರಿ ಸಂಘಿಗಳ ಮಾತು ನಂಬಿ ಬಲಿ ಬೀಳುವ ಕರಾವಳಿಯ ಕುದುರಿಗೆ ಕಾರ್ತಿಕ್‌ರಾಜ್ ಪ್ರಕರಣ ಪಾಠವಾದೀತಾ? ಕೇಸರಿ ಗ್ಯಾಂಗಿನ ಒಳಗುಟ್ಟು ಈಗಲೂ ಅರ್ಥವಾಗದಿದ್ದರೆ ಅದಕ್ಕಿಂತ ದೊಡ್ಡ ದುರಂತ ಕರಾವಳಿ ಪಾಲಿಗೆ ಇನ್ನೊಂದಿರಲು ಸಾಧ್ಯವಿಲ್ಲ!!

■ ವರದಿಗಾರ

ತ್ವರೆಗೊಂಡಿರುವ ಸೇನಾಪಡೆಗಳ ಕೇಸರೀಕರಣ



ಸೇನಾಪಡೆಗಳ ಕೇಸರೀಕರಣ ಆರೆಸ್ಸೆಸ್‌ನ ರಹಸ್ಯ ಕಾರ್ಯಸೂಚಿಯ ಒಂದು ಭಾಗವಾಗಿದ್ದು ಆ ನಿಟ್ಟಿನಲ್ಲಿ ಅದು ಬಹಳ ಹಿಂದಿನಿಂದಲೂ ಕಾರ್ಯಪ್ರವೃತ್ತವಾಗಿದೆ. ಅಲ್ಪಸಂಖ್ಯಾತರನ್ನು ಬಗ್ಗುಬಡಿದು ಅವರನ್ನು ದ್ವಿತೀಯ ದರ್ಜೆಯ ಪ್ರಜೆಗಳಾಗಿಸುವ ಹುನ್ನಾರದ ಭಾಗವಾಗಿ ಸೇನಾಪಡೆಗಳನ್ನು ಕೇಸರೀಕರಣಗೊಳಿಸಲಾಗುತ್ತಿದೆ. ವಾಜಪೇಯಿ ಸರ್ಕಾರದ ಅವಧಿಯಲ್ಲಿ ಅದರ ಅನುಷ್ಠಾನದ ವೇಗ ಭಾರಿ ಹೆಚ್ಚಳ ಕಂಡಿತ್ತು, ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಂತೂ ಈ ಪ್ರಕ್ರಿಯೆ ಹಿಂದೆಂದಿಗಿಂತ ಹೆಚ್ಚು ತ್ವರಿತಗತಿಯಲ್ಲಿ ಸಾಗುತ್ತಿದೆ. ಸೇನಾಪಡೆಗಳು ಕೇಸರೀಕರಣಗೊಂಡರೆ ಅಲ್ಪಸಂಖ್ಯಾತರ ಪಾಲಿಗೆ ಅವರ ಕೊನೆಯ ಆಸರೆಯೂ ಇಲ್ಲದಂತಾಗಲಿದೆ. ಏಕೆಂದರೆ ಎಲ್ಲರಿಗೂ ತಿಳಿದಿರುವ ಹಾಗೆ ಕೋಮುಗಲಭೆಗಳಿಗೆ ಸಂಬಂಧಿಸಿದಂತೆ ಪೊಲೀಸರ ದಾಖಲೆ ತೀರ ಕೆಟ್ಟದಾಗಿದೆ. ಸೇನಾಪಡೆಗಳ ಕೇಸರೀಕರಣ ತ್ವರಿತಗತಿಯಲ್ಲಿ ಮುಂದುವರಿದಿರುವುದಕ್ಕೆ ಹಲವು ನಿದರ್ಶನಗಳನ್ನು ಕೊಡಬಹುದು.

ಸಂವಿಧಾನ ವಿರೋಧಿ ಕಾರ್ಯಕ್ರಮದಲ್ಲಿ ಸೇನಾಧಿಕಾರಿಗಳು

ಮೊನ್ನೆ ಮೇ 2ರಂದು ದಿಲ್ಲಿಯಲ್ಲೊಂದು ಸರ್ಕಾರಿ ಕಾರ್ಯಕ್ರಮ ಜರಗಿತು. ಇಂತಹ ನೂರಾರು ಸರ್ಕಾರಿ ಕಾರ್ಯಕ್ರಮಗಳು ಪ್ರತಿನಿತ್ಯ ನಡೆಯುತ್ತಲೇ ಇರುವಾಗ ಇದರಲ್ಲೇನು ವಿಶೇಷ ಎಂಬ ಪ್ರಶ್ನೆ ಸಹಜವೆ ಆಗಿದೆ. ಅದೇನೆಂದು ನೋಡೋಣ. ವಿಷಯ ಏನೆಂದರೆ ಅದೊಂದು ಭಾರತೀಯ ಸೈನಿಕರನ್ನು ಗೌರವಿಸುವ ಕಾರ್ಯಕ್ರಮವಾಗಿತ್ತು. ಸಭೆಯಲ್ಲಿ ಭೂಸೇನೆಯ ಉಪಮುಖ್ಯಸ್ಥ ಲೆ। ಜ। ಸರತ್ ಪಾಂಡೆ, ನೌಕಾಸೇನೆಯ ರಿ। ಆ। ಕ್ರಿಷನ್ ಪಾಂಡೆ, ವಾಯುಸೇನೆಯ ಏ। ಮಾ। ಎಚ್.ಎನ್. ಭಾಗವತ್, ರಕ್ಷಣಾ ಖಾತೆಯ ಉಪಸಚಿವ ಸುಭಾಸ್ ಭಾಮ್ರೆ, ಆರೆಸ್ಸೆಸ್‌ನ ಮಾಜಿ ಪ್ರಚಾರಕನೂ ಹಾಲಿ ರಾಜಕಾರಣಿಯೂ ಆಗಿರುವ ತರುಣ್ ವಿಜಯ್ ಮುಂತಾದವರು ಉಪಸ್ಥಿತರಿದ್ದರು. ಅಂದು ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರನ ದಿವ್ಯ ಹಸ್ತದಿಂದ 'ವಿದ್ಯಾ ವೀರತಾ ಅಭಿಯಾನ' ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಆದರೆ ನಿಜವಾಗಿ ವಿದ್ಯೆ ಅಥವಾ ಜ್ಞಾನದೊಂದಿಗೆ ಪ್ರಧಾನವಾಗಿ ಬೆಳೆಯಬೇಕಿರುವುದು ವಿನಯವೆ ಹೊರತು ಶೌರ್ಯ ಅಲ್ಲ. ಇಲ್ಲಿ ವಿದ್ಯೆಯನ್ನು 'ವೀರತೆ' ಅರ್ಥಾತ್ ಶೌರ್ಯದೊಂದಿಗೆ ಜೋಡಿಸಿರುವುದರ ಹಿಂದೆ ಒಂದು ದುರುದ್ದೇಶವಿರುವಂತೆ ತೋರುತ್ತದೆ. ಏಕೆಂದರೆ ಹಿಂದೂ ಮಕ್ಕಳಲ್ಲಿ ಇದೇ ವಿದ್ಯೆ, ಶೌರ್ಯಗಳನ್ನು ಬೆಳೆಸುವುದಕ್ಕೋಸ್ಕರ ಸಂಘ ಪರಿವಾರ ಕನಿಷ್ಠ ಎರಡು ಕಡೆಗಳಲ್ಲಿ ವಿಶಿಷ್ಟ ಶಿಕ್ಷಣಸಂಸ್ಥೆಗಳನ್ನು ನಡೆಸುತ್ತಿದೆ. ಭೋನ್ಸಾಲಾ ಮಿಲಿಟರಿ ಶಾಲೆ ಎಂಬ ಹೆಸರಿನ ಈ ಸಂಸ್ಥೆಗಳು ಮಹಾರಾಷ್ಟ್ರದ ನಾಗಪುರ ಮತ್ತು ನಾಸಿಕಗಳಲ್ಲಿವೆ. ಇವೆರಡನ್ನೂ ಸ್ಥಾಪಿಸಿದ ಡಾ। ಬಿ.ಎಸ್. ಮೂಂಜೆ ಆರೆಸ್ಸೆಸ್‌ನ ಸಂಸ್ಥಾಪಕರಲ್ಲೊಬ್ಬ. ಮೂಂಜೆಯ ಅಚ್ಚುಮೆಚ್ಚಿನ ಉಲ್ಲೇಖವೆಂದರೆ ಎವಾಲ್ಡ್ ಬಕ್ಸೆ ಎಂಬ ಜರ್ಮನ್ ಪ್ರೊಫೆಸರ್ ಬರೆದ 'ಮಿಲಿಟರಿ ವಿಜ್ಞಾನ' ಪುಸ್ತಕದ ಸಾಲುಗಳು: 'ಮರಣಶಯ್ಯೆಯಲ್ಲಿರುವ ಯೋಧನೊಬ್ಬನಿಗೆ ತನ್ನ ರಕ್ತ ತನ್ನ ರಾಷ್ಟ್ರದೇವತೆಗಾಗಿ ಹರಿದುಹೋಗುತ್ತಿದೆಯೆಂದು ಗೊತ್ತಿದ್ದಾಗ ಆತ ಹೆಚ್ಚು ನಿಶ್ಚಿಂತನಾಗಿ ಸಾಯುತ್ತಾನೆ. ಹೀಗಾಗಿ ದೇಶದ ಮನದಲ್ಲಿ ಚಿಕ್ಕಂದಿನಿಂದಲೇ ಯುದ್ಧದ ಯೋಚನೆಯನ್ನು ತುಂಬ, ಅದು ರೂಢಿಗತವಾಗುವ ರೀತಿಯಲ್ಲಿ ಅದನ್ನು ಸಜ್ಜುಗೊಳಿಸಬೇಕು'. ಮುಂದೆ ಬ್ರಿಟನ್, ಫ್ರಾನ್ಸ್, ಇಟಲಿ, ಜರ್ಮನಿಗಳಿಗೆ ಭೇಟಿ ನೀಡಿದ ಮೂಂಜೆ, ಅಲ್ಲಿನ ಮಿಲಿಟರಿ ಶಾಲೆಗಳ ಕಾರ್ಯನಿರ್ವಹಣೆಯನ್ನು ಅಭ್ಯಸಿಸಿದ. ಸ್ವದೇಶಕ್ಕೆ ಮರಳಿದ ಬಳಿಕ 1937ರಲ್ಲಿ ಮಹಾರಾಷ್ಟ್ರದ ನಾಸಿಕದಲ್ಲಿ ಹಿಂದೂಗಳಿಗಾಗಿ ಭೋನ್ಸಾಲಾ ಮಿಲಿಟರಿ ಅಕಾಡೆಮಿಯನ್ನು ಪ್ರಾರಂಭಿಸಿದ. ಕೆಲವು ವರ್ಷಗಳ ನಂತರ ಇದರ ಶಾಖೆಯೊಂದನ್ನು ನಾಗಪುರದಲ್ಲಿ ತೆರೆಯಲಾಯಿತು. 5ನೆ ತರಗತಿಯಿಂದ ಆರಂಭವಾಗುವ ಈ ಶಾಲೆಗಳಿಗೆ 9 1/2 ಯಿಂದ 10 1/2 ವರ್ಷ ಪ್ರಾಯದ ಬಾಲಕರನ್ನು ಸೇರಿಸಿಕೊಳ್ಳಲಾಗುತ್ತದೆ. ಗಮನಾರ್ಹವಾಗಿ ಈ ಶಾಲೆಗಳಲ್ಲಿ ಅನೇಕ ನಿವೃತ್ತ ಸೇನಾಧಿಕಾರಿಗಳನ್ನು ತರಬೇತುದಾರರಾಗಿ ನೇಮಿಸಲಾಗಿದೆ. ಶಾಲೆಯ ಉದ್ದೇಶಿತ ಗುರಿಗಳಿಗೂ ಆರೆಸ್ಸೆಸ್‌ನ ಗುರಿಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ:

- ಹಿಂದೂಗಳಲ್ಲಿ ಮಿಲಿಟರಿ ಪ್ರವೃತ್ತಿಯನ್ನು ಪುನರುಜ್ಜೀವಿತಗೊಳಿಸುವುದು.
- ಹಿಂದೂ ಯುವಜನರಲ್ಲಿ ತಾಯ್ನಾಡಿನ ರಕ್ಷಣೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಅಗತ್ಯವಿರುವ ಸಾಮರ್ಥ್ಯವನ್ನು ಬೆಳೆಸುವುದು.
- ಸನಾತನ ಧರ್ಮದ ಬಗ್ಗೆ ಶಿಕ್ಷಣ ನೀಡುವುದು.
- ವಿಜ್ಞಾನ, ಸ್ವರಕ್ಷಣೆ ಹಾಗೂ ರಾಷ್ಟ್ರರಕ್ಷಣೆಯ ಕಲೆಗಳಲ್ಲಿ ತರಬೇತಿ ಒದಗಿಸುವುದು.

ಇವತ್ತಿನ ಈ 'ವಿದ್ಯಾ ವೀರತಾ ಅಭಿಯಾನ'ದ ಮುಖ್ಯ ಉದ್ದೇಶ ಭೋನ್ಸಾಲಾ ಮಿಲಿಟರಿ ಶಾಲೆಗಳಿಗೆ ಹೆಚ್ಚೆಚ್ಚು ಹಿಂದೂ ಮಕ್ಕಳನ್ನು ಸೇರಿಸುವ ಮೂಲಕ ಮೇಲೆ ಉಲ್ಲೇಖಿಸಲಾದ ಗುರಿಗಳನ್ನು ಆದಷ್ಟು ಶೀಘ್ರದಲ್ಲಿ ಸಾಧಿಸುವುದಾಗಿದೆ ಎಂಬುದರಲ್ಲಿ ಸಂಶಯವಿಲ್ಲ.


ಸೇನಾಧಿಕಾರಿಗಳಿಂದ ಆರೆಸ್ಸೆಸ್‌ನ ಭಾರತಮಾತೆಗೆ ಚರಣವಂದನೆ

ಲೆ। ಜ। ಸರತ್ ಪಾಂಡೆ, ರಿ। ಆ। ಕ್ರಿಷನ್ ಪಾಂಡೆ, ಏ। ಮಾ। ಭಾಗವತ್ ಮೊದಲಾದವರು ಇದೇ 'ವಿದ್ಯಾ ವೀರತಾ ಅಭಿಯಾನ' ಸಮಾರಂಭದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ 'ಭಾರತಮಾತೆಗೆ ಚರಣವಂದನೆ' ಎಂಬ ಕಾರ್ಯಕ್ರಮದಲ್ಲಿಯೂ ಭಾಗವಹಿಸಿದ್ದಾರೆ. ಇದೊಂದು ತೀರ ಆಕ್ಷೇಪಣೀಯ ಘಟನೆಯಾಗಿದೆ. ಇವರು ಯಾವ ಭಾರತಮಾತೆಯ ಕಾಲಿಗೆ ಅಡ್ಡಬಿದ್ದರೋ ಆಕೆ ಓರ್ವ ಸಾಮಾನ್ಯ ಭಾರತಮಾತೆಯೂ ಅಲ್ಲ, ಹಿಂದೂ ಧರ್ಮದ ದೇವಿಯೂ ಅಲ್ಲ, ಧಾರ್ಮಿಕ ವ್ಯಕ್ತಿಯೂ ಅಲ್ಲ, ಒಂದು ಸಿಂಹಕ್ಕೆ ಎರಗಿಕೊಂಡು ಕೈಯಲ್ಲಿ ಕೇಸರಿ ಧ್ವಜ ಹಿಡಿದುಕೊಂಡಿರುವ ಆಕೆ ಅಸಲಿಗೆ ಆರೆಸ್ಸೆಸ್‌ನ ಪೇಟೆಂಟ್ ಭಾರತಮಾತೆ ಆಗಿದ್ದಳು. ಚಿತ್ರದ ಹಿನ್ನೆಲೆಯಲ್ಲಿದ್ದುದು ಆರೆಸ್ಸೆಸ್‌ನ ಅಖಂಡ ಭಾರತದ ಭೂಪಟ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ಅಖಂಡ ಭಾರತದ ಗಡಿಗಳು ಅಂತಾರಾಷ್ಟ್ರೀಯವಾಗಿ ಗುರುತಿಸಲ್ಪಟ್ಟಿರುವ ಗಡಿಗಳನ್ನು ಮೀರಿ ನೆರೆಕರೆಯ ಭೂಭಾಗಗಳನ್ನೂ ಒಳಗೊಳ್ಳುತ್ತವೆ! ಆರೆಸ್ಸೆಸ್ ಈ ಚಿತ್ರವನ್ನು ತನ್ನ ಹಿಂದುತ್ವ ಸಿದ್ಧಾಂತದ ಭೂಭಾಗ ವಿಸ್ತರಣಾ ನೀತಿಯ ಭಾಗವಾಗಿ ಅಳವಡಿಸಿಕೊಂಡಿದೆ. ಇದರ ಹಿಂದೆ ಹಲವು ದೂ(ದು)ರಾಲೋಚನೆಗಳಿವೆ. ಒಂದು, ಮುಸ್ಲಿಮರು ಅಖಂಡ ಭಾರತವನ್ನು ಒಡೆದು ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳನ್ನು ರಚಿಸಿಕೊಂಡು ಅನ್ಯಾಯ ಮಾಡಿದ್ದಾರೆ ಎಂಬ ವಿಚಾರವನ್ನು ತನ್ನ ಅನುಯಾಯಿಗಳಲ್ಲಿ ಬಿತ್ತುವುದು. ಆ ಮೂಲಕ ಅವರ ಮನಸ್ಸಿನಲ್ಲಿ ಪಾಕ್ ವಿರೋಧಿ ಕಿಚ್ಚು ಸದಾ ಉರಿಯುತ್ತಿರುವಂತೆ ನೋಡಿಕೊಳ್ಳುವುದು. ಎರಡು, ಅವರೆಲ್ಲರೂ ಈ ಅಖಂಡ ಭಾರತದ ಕನಸನ್ನು ನನಸು ಮಾಡುವ ದಿಕ್ಕಿನಲ್ಲಿ ಶ್ರಮಿಸುವಂತೆ ಕರೆಕೊಡುವುದು. ಆರೆಸ್ಸೆಸ್ ಪ್ರಕಾರ ಹಿಂದೂಗಳು ತಮ್ಮ ಯೋಗ್ಯತೆಯನ್ನು ತೋರಿಸಬೇಕಿರುವುದು ಭಾರತಮಾತೆಯ ಅಖಂಡತೆಯನ್ನು ಮರಳಿ ಪಡೆಯುವ ಮೂಲಕವಂತೆ.



ವಂದೇಮಾತರಂ ವೇಳೆ ಸೇನಾಧಿಕಾರಿಗಳ ಉಪಸ್ಥಿತಿ

ಮೇ 2ರ ಕಾರ್ಯಕ್ರಮದಲ್ಲಿ ನಡೆದ ಇನ್ನಷ್ಟು ಆತಂಕಕಾರಿ ವಿಷಯವೆಂದರೆ 'ಚರಣ ವಂದನೆ'ಯ ಬಳಿಕ ಸಮಗ್ರ ವಂದೇ ಮಾತರಂ ಹಾಡನ್ನು ಹಾಡಲಾಗಿದೆ (ಟೆಲಿಗ್ರಾಫ್ ವರದಿ). ಈ ಹಾಡು ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಬರೆದಿರುವ 'ಆನಂದಮಠ' ಪುಸ್ತಕದಲ್ಲಿ ಬರುತ್ತದೆ. ಮುಸ್ಲಿಮರನ್ನು ಖಳನಾಯಕರಂತೆ ಬಿಂಬಿಸುವ 'ಆನಂದಮಠ'ದಲ್ಲಿ ಅವರ ಜನಾಂಗ ಹತ್ಯೆಯನ್ನು ಸಂಭ್ರಮ



ದಿಂದ ಆಚರಿಸುವ ವಿವರಗಳಿವೆ. ಅದರಲ್ಲಿ ಸನ್ಯಾಸಿಗಳು ವಂದೇಮಾತರಂ ಹಾಡಿ ಮಾತೃಭೂಮಿಯಿಂದ ಮ್ಲೇಚ್ಛರನ್ನು ನಿರ್ಮೂಲನ ಮಾಡಲು ಶಕ್ತಿಯನ್ನು ಕರುಣಿಸುವಂತೆ ದುರ್ಗೆಯಲ್ಲಿ ಪ್ರಾರ್ಥಿಸುತ್ತಾರೆ. ಅವರು ತಮ್ಮ ಗುರಿ ಸಾಧನೆಗೆ ಬ್ರಿಟಿಷರ ಸಹಕಾರ ಪಡೆಯಲೂ ಹಿಂದೆಮುಂದೆ ನೋಡುವುದಿಲ್ಲ. ಮುಂದೆ ಸಂಘ ಪರಿವಾರ ಇದೇ ವಂದೇ ಮಾತರಂಅನ್ನು ಸ್ವತಂತ್ರ ಭಾರತದ ರಾಷ್ಟ್ರಗೀತೆಯಾಗಿಸಲು ಭೂಮ್ಯಾಕಾಶ ಒಂದು ಮಾಡಿತ್ತಾದರೂ ಅಂದಿನ ಮುತ್ಸದ್ದಿಗಳ ದೃಢ ನಿಲುವಿನಿಂದಾಗಿ ಜನಗಣಮನವನ್ನೆ ರಾಷ್ಟ್ರಗೀತೆಯಾಗಿ ಅಳವಡಿಸಿಕೊಳ್ಳಲಾಯಿತು. ವಂದೇ ಮಾತರಂನ ಮೊದಲೆರಡು ಚರಣಗಳಲ್ಲಿ ಯಾವುದೆ ದೇವರುಗಳ ಉಲ್ಲೇಖವಿರದ ಕಾರಣ ಅಷ್ಟನ್ನು ಮಾತ್ರ ರಾಷ್ಟ್ರಗಾನವಾಗಿ ಒಪ್ಪಿಕೊಳ್ಳಲಾಗಿದೆ. ಹೀಗಿದ್ದರೂ 'ವಿದ್ಯಾ ವೀರತಾ ಅಭಿಯಾನ'ದ ವೇಳೆ ಸಂವಿಧಾನದ ಜಾತ್ಯತೀತತೆಯ ಆಶಯವನ್ನು ಧಿಕ್ಕರಿಸಿ ಇಡೀ ಹಾಡನ್ನು ಹಾಡಿರುವುದು ಮತ್ತು ಇದರಲ್ಲಿ ಸರಕಾರಿ ಅಧಿಕಾರಿಗಳು, ಮಂತ್ರಿಗಳು, ಸೇನಾಪಡೆಗಳ ಹಿರಿಯ ಅಧಿಕಾರಿಗಳಂಥವರು ಪಾಲ್ಗೊಂಡಿರುವುದು ಅತ್ಯಂತ ಆತಂಕಕಾರಿ ಹಾಗೂ ಅಪಾಯಕಾರಿ ಬೆಳವಣಿಗೆ. ಇದರ ಅಂತಿಮ ಪರಿಣಾಮ ಏನಾಗಲಿದೆ ಎಂದು ಊಹಿಸಲೂ ಭಯವಾಗುತ್ತಿದೆ.

ಸೇನಾ ನೇಮಕಾತಿಯಲ್ಲಿ ಹಸ್ತಕ್ಷೇಪ

ಸೇನೆಯಲ್ಲಿ ರಾಜಕೀಯ ಕೈವಾಡ ತಪ್ಪಿಸುವ ಸಲುವಾಗಿ ಬಹಳ ಹಿಂದಿನಿಂದಲೂ ಅತ್ಯಂತ ಹಿರಿಯ ಹಾಗೂ ಅರ್ಹ ಅಧಿಕಾರಿಯನ್ನು ಮುಖ್ಯಸ್ಥನಾಗಿ ನೇಮಿಸುವ ಸಂಪ್ರದಾಯವನ್ನು ಅನುಸರಿಸುತ್ತ ಬರಲಾಗಿದೆ. ಆದರೆ ಮೋದಿ ಸರ್ಕಾರ ಈ ಸತ್ಸಂಪ್ರದಾಯವನ್ನು ಮುರಿದು ತನಗೆ ಬೇಕಾದ ಅಧಿಕಾರಿಯನ್ನು ನೇಮಿಸಿದೆ. ಮೋದಿ ಸರ್ಕಾರದ ಹಸ್ತಕ್ಷೇಪದ ಪರಿಣಾಮವಾಗಿಯೆ ಜ। ಬಿಪಿನ್ ರಾವತ್ ಸೇನಾ ಮುಖ್ಯಸ್ಥರಾಗಿದ್ದಾರೆ. ಬೇರೆ ಇಬ್ಬರು ಹಿರಿಯ ಅಧಿಕಾರಿಗಳಿದ್ದರೂ ಅವರನ್ನು ಕಡೆಗಣಿಸಿ ರಾವತ್‌ರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ. "ರಾವತ್‌ಗೆ ಕದನ ವಲಯಗಳಲ್ಲಿ ಕೆಲಸ ಮಾಡಿರುವ ಅನುಭವ ಇದೆ; ಭಯೋತ್ಪಾದನೆ, ಪಾಕಿಸ್ತಾನದಿಂದ ಬದಲಿ ಸಮರ, ಈಶಾನ್ಯ ರಾಜ್ಯಗಳಲ್ಲಿ ಕೆಟ್ಟ ಪರಿಸ್ಥಿತಿ ಇರುವಂತಹ ಪ್ರಸಕ್ತ ಸನ್ನಿವೇಶವನ್ನು ಎದುರಿಸಲು ಅಂತಹ ವ್ಯಕ್ತಿಯ ಅಗತ್ಯವಿದೆ" ಎಂಬಿತ್ಯಾದಿ ಸಮರ್ಥನೆಗಳಿಗೇನೂ ಬರವಿಲ್ಲ! ನೇಮಕಾತಿಗಳಲ್ಲಿ ರಾಜಕೀಯ ಹಸ್ತಕ್ಷೇಪ ಪ್ರಾರಂಭವಾಗಿರುವುದು ಆತಂಕಕಾರಿಯಾಗಿದ್ದು ಇದು ರಾಜಕೀಯರಹಿತ ಸೇನೆಯ ಅಂತ್ಯದ ಆರಂಭ ಎಂದು ಅನೇಕ ಅಧಿಕಾರಿಗಳು ಅಭಿಪ್ರಾಯಿಸಿದ್ದಾರೆ. (27-12-2016ರ The Hindu)

ಅಯೋಧರ ನೇಮಕ

ಇತ್ತೀಚೆಗೆ ಪಾಕಿಸ್ತಾನ ಮತ್ತು ಚೀನಾ ಜತೆಗಿನ ಗಡಿಭಾಗಗಳಲ್ಲಿ ಕಾರ್ಯಾಚರಿಸುತ್ತಿರುವ ತುಕಡಿಗಳಲ್ಲಿ ಇಬ್ಬರು ಅಯೋಧರ ಸ್ಥಾನಗಳನ್ನು ಹೊಸದಾಗಿ ಸೃಷ್ಟಿಸಲಾಗಿದೆ. ಇವರಿಗೆ ಅಲ್ಲಿ ನಡೆಯುವ ಎಂಜಿನಿಯರಿಂಗ್ ಯೋಜನೆಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ವಹಿಸಲಾಗಿದೆ. ಈ ಹುದ್ದೆಗಳಿರುವುದು ಉಧಮ್‌ಪುರ ನೆಲೆಯ ... ಕಮಾಂಡ್ ಮತ್ತು ಕೋಲ್ಕತ್ತ ನೆಲೆಯ ಪ... ಕಮಾಂಡ್‌ಗಳಲ್ಲಾದರೂ ಕಚೇರಿಗಳಿರುವುದು ಜ... ಗೌಹಾಟಿಗಳಲ್ಲಿ, ಇದರಿಂದಾಗಿ ಗಂಭೀರ ಹೊಂದಾಣ... ಸಮಸ್ಯೆಗಳಾಗಲಿವೆ ಮತ್ತು ವ್ಯಕ್ತಿಗಳ ನಡುವೆ ಸಂಘರ್ಷ... ಹುಟ್ಟಿಕೊಳ್ಳಲಿವೆ. ಅಂತಿಮವಾಗಿ ಇದು ಸೇ... ಕಾರ್ಯಚಟುವಟಿಕೆಗಳಿಗೆ ಅಡಚಣೆ ಉಂಟು ಮಾಡ... ರಕ್ಷಣಾ ಸಚಿವ ಪಾರಿಕ್ಕರನ ಈ ನಡೆಯಿಂದಾಗಿ ಸೇ... ಹಿರಿಯ ಅಧಿಕಾರಿಗಳು ಕಳವಳಕ್ಕೊಳಗಾಗಿದ್ದಾರೆ. ಏ... ಈ ನಿರ್ಧಾರಕ್ಕೆ ಬರುವ ಮುನ್ನ ಸೇನೆಯನ್ನು ವಿ... ತೆಗೆದುಕೊಳ್ಳಲಾಗಿಲ್ಲ. ಈ ಕುರಿತಂತೆ ದೂರು... ಬಂದಬಳಿಕ ಆದೇಶದ ಅನುಷ್ಠಾನವನ್ನು ತಾತ್ಕಾಲಿ... ತಡೆಹಿಡಿಯಲಾಗಿದೆ. (27-10-2016ರ The Hin...

ಸೇನಾ, ಅರೆಸೇನಾ ಪಡೆಗಳ ದುರ್ಬ...

ಪಶ್ಚಿಮ ಬಂಗಾಳದಲ್ಲಿ Greater Co... Behar People's Association (GC... ಎಂಬ ಸಂಘಟನೆಯ ಅಡಿಯಲ್ಲಿ ಕಾರ್ಯಾಚರಿಸುವ ... ಸೇನಾಪಡೆ ನಾರಾಯಣಿ ಸೇನಾ ಪ್ರತ್ಯೇಕ ರಾಜ... ಹೋರಾಟ ನಡೆಸುತ್ತಿದೆ. ವರದಿಗಳ ಪ್ರಕಾರ ನಾರಾಯಣಿ ಸೇನೆಯ 81 ಯುವತಿಯರು ಮತ್ತು ... ಯುವಕರಿಗೆ 2016ರ ಆಗಸ್ಟ್ 16ರಿಂದ 20ರ ... ಬಿಎಸ್‌ಎಫ್ ಸಿಬ್ಬಂದಿ ವತಿಯಿಂದ ತರಬೇತಿ ನೀಡಲಾ... ಇದರ ಹಿಂದೆ ಮೋದಿ ಸರ್ಕಾರದ ಕೈವಾಡವಿರುವ ಕು... ಬಲವಾದ ಶಂಕೆಗಳಿವೆ. ಏಕೆಂದರೆ ಈ ಕಾರ್ಯಕ್ರ... ರಾಜ್ಯ ಸರ್ಕಾರದಿಂದ ಅನುಮತಿ ಪಡೆದುಕೊಳ್ಳಲಾ... ಇದು ಮೋದಿ ಸರ್ಕಾರ ಇಂದು ಪಶ್ಚಿಮ ಬಂಗಾ... ಅಶಾಂತಿಯನ್ನು ಹರಡಿ ಅದರ ರಾಜಕೀಯ ಲಾಭ ಪ... ವುದಕ್ಕಾಗಿ ಅರೆಸೇನಾಪಡೆಗಳನ್ನು ಬಳಸುತ್ತಿದೆ ಎಂಬ ಪ... ಪುಷ್ಟಿ ನೀಡುತ್ತದೆ. (25-8-2016 ರ ಡೆಕ್ಕನ್ ಹೆ...

ಸಮಾಜದ ಮಿಲಿಟರೀಕರಣ ಮತ್ತು ನಿವೃತ್ತ ಸೇನಾಧಿಕಾರಿಗಳು

ಸಂಘ ಪರಿವಾರ ಮತ್ತು ನಿವೃತ್ತ ಸೇನಾಧಿಕಾ... ನಂಟು ಸಾಕಷ್ಟು ಹಳೆಯದು. ಆರೆಸ್ಸೆಸ್‌ನ ಭೋನ... ಮಿಲಿಟರಿ ಶಾಲೆಯ ತರಬೇತುದಾರರಲ್ಲಿ ಮೇ... ಪ್ರಭಾಕರ್ ಕುಲ್‌ಕರ್ಣಿ, ಕರ್ನಲ್ ಶೈಲೇಶ್ ರಾ... ಮುಂತಾದ ಅನೇಕ ನಿವೃತ್ತ ಸೇನಾಧಿಕಾರಿಗಳ... ಕೆಲವೊಮ್ಮೆ ಗುಪ್ತದಳದ ಹಿರಿಯ ಅಧಿಕಾರಿಗಳ ಹ... ಕೂಡ ಕೇಳಿಬಂದಿದೆ. ನಿಮಗೆ ಬಹುಶಃ ನೆನಪಿರಬಹು... ಮಾಲೆಗಾಂವ್ ಮತ್ತಿತರ ಸ್ಫೋಟಗಳನ್ನು ನಡೆಸಿದ... ಕೇಸರಿ ಭಯೋತ್ಪಾದಕರಿಗೆ ಇದೇ ನಾಗಪುರದ ಶಾಲೆ... ತರಬೇತಿ ನೀಡಲಾಗಿತ್ತು.

ಇತ್ತೀಚಿನ ಬೆಳವಣಿಗೆಯೊಂದರಲ್ಲಿ ಆರೆಸ್ಸೆಸ್‌ನ... ನಿವೃತ್ತ ಯೋಧರ ಮೂಲಕ ಕ್ಯಾಂಪಸ್‌ಗಳನ್ನು ಮಿಲಿ... ಕರಣ ಮಾಡುವ ಹುನ್ನಾರವೊಂದು ಪ್ರಾರಂಭವಾ... ಇದರ ಭಾಗವಾಗಿಯೆ ವಿಶ್ವವಿದ್ಯಾನಿಲಯಗಳಲ್ಲಿ ... ಟ್ಯಾಂಕುಗಳನ್ನು ಪ್ರದರ್ಶಿಸಬೇಕು ಎಂಬ ಪ್ರಸ್ತಾಪವೊಂ... ಹರಿಯಬಿಡಲಾಗಿದೆ. ಇಂತಹುದೆ ಇನ್ನೊಂದು ... ತರುಣ್ ವಿಜಯ್‌ನಿಂದ ಹೊರಬಿದ್ದಿದೆ. ವಿಶ್ವ... ನಿಲಯಗಳೂ ಕಾಲೇಜುಗಳೂ ತಂತಮ್ಮ ಕ್ಯಾಂಪಸ್... 21 ಪರಮವೀರ ಚಕ್ರ ಪ್ರಶಸ್ತಿ ವಿಜೇತರ ಚಿತ್ರ... ಪ್ರದರ್ಶಿಸಬೇಕಂತೆ, ಅದೂ ಸ್ವಂತ ಖರ್ಚಿನಲ್ಲಿ! ಆರೆ... ಸರಸಂಘಚಾಲಕ ಮೋಹನ್ ಭಾಗ್ವತ್ ಕೂಡ ... ಬಿದ್ದಿಲ್ಲ. ಈತ ಪ್ರತಿಯೊಬ್ಬ ಭಾರತೀಯ ಮಗು... ಭಾರತ್ ಮಾತಾ ಕಿ ಜೈ ಘೋಷಣೆ ಕೂ... ಕಲಿಸಬೇಕೆಂದು ಕರೆಕೊಟ್ಟವನು. ಭಾರತ್ ಮಾತಾ ... ಪದದ ಒಳಾರ್ಥ ಹಿಂದೂರಾಷ್ಟ್ರ ಎಂದಾಗಿದೆ.

ಮತ್ತೊಂದು ಘಟನೆಯಲ್ಲಿ ಕಳೆದ ವರ್ಷ ದಿಸೆ...

▶▶

ನಮ್ಮ ತಪ್ಪಿನ ಶಿಲುಬೆಗಳನ್ನು ಕಾಶ್ಮೀರಿಗಳು ಹೊರುತ್ತಿದ್ದಾರೆ...

EPW ಸಂಪಾದಕೀಯ

ಕೃಪೆ: *Economic and Political Weekly*
May 6, 2017. Vol. 52. No. 18.

■ ಅನು: ಶಿವಸುಂದರ್

ಸತ್ಯಗಳು ಬಯಲಾಗುತ್ತವೆಂಬ ಹೆದರಿಕೆಯಿಂದಲೇ ಸರ್ಕಾರವು ಕಾಶ್ಮೀರದಲ್ಲಿ ಸಾಮಾಜಿಕ ಮಾಧ್ಯಮಗಳನ್ನು ನಿಷೇಧಿಸಿದೆ.



ಈ ಹಿಂದೆ ಕಾಶ್ಮೀರದಲ್ಲಿ ತಪ್ಪುಸುದ್ದಿಗಳು ಹರಡುವು...ನ್ನು ತಡೆಗಟ್ಟುವ ಉದ್ದೇಶದಿಂದ ಕೆಲವು ಬಾರಿ ಸುದ್ದಿಗಳ...ವನ್ನು ಮತ್ತು ಕೆಲವೊಮ್ಮೆ ಕೆಲವು ಸುದ್ದಿತಾಣಗಳನ್ನೇ ...ಧಿಸಿರುವುದುಂಟು. ಆದರೆ ಈಗ ಹೇರಲಾಗಿರುವ ...ಧ ಹಿಂದಿನ ನಿಷೇಧಗಳ ತರದ್ದಲ್ಲ. ಕಾಶ್ಮೀರಿ ಹೋರಾಟ...ರು ಪರಸ್ಪರ ಸಂಪರ್ಕವಿಟ್ಟುಕೊಂಡು ಸಂಘಟಿತರಾಗ...ದೆಂಬುದೂ ಮತ್ತು ಹಲವು ಮಾನವ ಹಕ್ಕು ಉಲ್ಲಂಘನೆ...ನ್ನು ಬಟಾಬಯಲು ಮಾಡುವ ಪ್ರತಿ ಭಟನೆಗಳ ವಿಡಿ...ೀಗಳನ್ನು ವಿನಿಮಯ ಮಾಡಿಕೊಳ್ಳುವು ದನ್ನು ತಡೆಗಟ್ಟು...ೇ ಈ ಬಾರಿ ಸಾಮಾಜಿಕ ಮಾಧ್ಯಮಗಳ ಮೇಲೆ ...ಮು ತಿಂಗಳ ಕಾಲ ವಿಧಿಸಿರುವ ನಿಷೇಧದ ಉದ್ದೇಶ ...ಗಿದೆಯೆಂಬುದು ಸ್ಪಷ್ಟ.

...ಹಾಗೆ ನೋಡಿದರೆ ಕಾಶ್ಮೀರದ ಒಂದು ಇಡೀ ಪೀಳಿಗೆ ...ೆ ಸರ್ಕಾರದ ಪಶ್ಚಾತ್ತಾಪರಹಿತ ಹಿಂಸೆ ಮತ್ತು ಸೆನ್ಸಾರ್...ಗಳ ಜೊತೆಜೊತೆಗೆ ಬೆಳೆದಿದ್ದಾರೆ. ಹಾಗಿದ್ದೂ ಭಾರತದ ...ಯುತ್ವವನ್ನು ಕಾಶ್ಮೀರಿಗಳು ಹೇಗೆ ಪರಿಭಾವಿಸುತ್ತಾರೆ...ಬುದಕ್ಕೆ ನಿದರ್ಶನಗಳಂತಿರುವ ಈ ಕಥನಗಳು ...ಡುವುದನ್ನು ತಡೆಗಟ್ಟಲು ಕೇಂದ್ರ ಮತ್ತು ರಾಜ್ಯ ...ರ್ಕಾರಗಳು ಯಾವ ಮಟ್ಟಕ್ಕೆ ಇಳಿಯಬಲ್ಲವೆಂಬುದಕ್ಕೆ ...ಬೆಳವಣಿಗೆಯು ಮತ್ತೊಂದು ಪುರಾವೆಯನ್ನು ಒದಗಿಸಿದೆ. ...ೀರದಲ್ಲಿರುವ ಅತ್ಯಧಿಕ ಪ್ರಮಾಣದ ಸೈನಿಕ ಗಸ್ತಿನ ...ತೆಜೊತೆಗೆ ಇದೂ ಸಹ ಸೇರಿಕೊಂಡಿದೆ. ಏಕೆಂದರೆ ...ು ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ಮತ್ತು ...ು ಸುದ್ದಿ ಹರಡುವಿಕೆಯ ನಿಷೇಧವೆಂಬ ಭಾಷೆಯಲ್ಲಿ ...ದ್ದರೂ ಸಾರಾಂಶದಲ್ಲಿ ಕಾಶ್ಮೀರಿಗಳ ವಾಕ್ ಸ್ವಾತಂತ್ರ...ನ್ನು ಕಿತ್ತುಕೊಳ್ಳುವ ಆದೇಶವೇ ಆಗಿದೆ. ಈ ಆದೇಶವನ್ನು ...ತ್ಯಾಸತ್ಯತೆಯನ್ನು ಪರಿಶೀಲಿಸದ, ಆಕ್ಷೇಪಾರ್ಹ ಮತ್ತು ...ೋದನಾತ್ಮಕ ಸುದ್ದಿಸಾರಗಳಿಂದ ಕಾಶ್ಮೀರಿಗಳನ್ನು ಬಚಾವು...ಡುವ ಉದ್ದೇಶದಿಂದಲೇ ತರಲಾಗಿದೆಯೆಂದು" ...ಲಾಗಿದೆ. ಆದರೆ ಈ ಕಲ್ಲು ತೂರುವ ಹೋರಾಟಗಳು ...ತ್ತು ಪ್ರತಿಭಟನೆಯ ದೃಶ್ಯಾವಳಿಗಳು ಸರ್ಕಾರದ ...ೋಧಿಯಾದದ್ದೇ ವಿನಃ "ಸಮಾಜದ ವಿರೋಧಿಯೂ" ಅಥವಾ "ಸಾರ್ವಜನಿಕ ವಿರೋಧಿಯೂ" ಅಲ್ಲವೆಂಬುದನ್ನು ಸರ್ಕಾರವು ಮರೆಮಾಚುತ್ತಿದೆ.

ಮೇಲಾಗಿ ಸರ್ಕಾರವು ಕಾಶ್ಮೀರದ ಯಾವ "ಸತ್ಯಾಸತ್ಯತೆಯನ್ನು ಪರಿಶೀಲಿಸದ" ಸುದ್ದಿಗಳನ್ನು ಉದ್ದೇಶಿಸಿ ಈ ಕ್ರಮವನ್ನು ತೆಗೆದುಕೊಂಡಿದೆ? ಏಪ್ರಿಲ್ 9ರಂದು ನಡೆದ ಲೋಕಸಭಾ ಉಪಚುನಾವಣೆಯ ವೇಳೆಯಲ್ಲಿ ನೂರಾರು ವಿಡಿಯೋಗಳು ವೈರಲ್ ಆದವು. ಅದರಲ್ಲಿನ ಚಿತ್ರಗಳು 'ಸ್ಪಷ್ಟವಾಗಿರುತ್ತಿರಲಿಲ್ಲ, ಸ್ಥಿರವಾಗಿರುತ್ತಿರಲಿಲ್ಲ. ಜೊತೆಗೆ ಅವುಗಳಲ್ಲಿ ಗುಂಡುಗಳ ಸದ್ದುಗಳು ಮತ್ತು ಜನರ ಆಕ್ರಂದನಗಳ ಸದ್ದುಗಳೂ ಕೇಳುತ್ತಿದ್ದವು. ಇವು ಕಾಶ್ಮೀರಿಗಳ ಮತ್ತು ಅಲ್ಲಿ ನಿಯೋಜಿಸಲಾದ ಸೈನಿಕರ ನಡುವಿನ 'ಒಡನಾಟಗಳು' ಹೇಗಿರುತ್ತದೆಂಬುದರ ಚಿತ್ರಣವನ್ನು ನಮಗೆ ಕೊಡುತ್ತವೆ. ಇದರಲ್ಲಿ ಒಂದು ತನ್ನ ಮೃತ ಸಹೋದರನ ದೇಹವನ್ನು ಕೊಂಡೊಯ್ಯುತ್ತಿದ್ದ ಆಂಬುಲೆನ್ಸ್ ವಾಹನವನ್ನು ಪೊಲೀಸರು ತಡೆಗಟ್ಟಿದಾಗ 17 ವರ್ಷದ ತರುಣನೊಬ್ಬ ಫೇಸ್‌ಬುಕ್ ಲೈವ್‌ನ ಮೂಲಕ ಹೊರಜಗತ್ತಿಗೆ ನೇರವಾಗಿ ಬಿತ್ತರಿಸಿದ ಚಿತ್ರಗಳಾಗಿದ್ದವು. ಮತ್ತೊಂದು ದೃಶ್ಯಾವಳಿ, ಮಿಲಿಟೆಂಟ್‌ಗಳ ಜೊತೆ ಗುಂಡಿನ ಚಕಮಕಿಯಲ್ಲಿ ತೊಡಗಿದ್ದ ಭದ್ರತಾ ಪಡೆಗಳ ಮೇಲೆ ಕಲ್ಲು ತೂರುತ್ತಾ ಗುಂಡಿನ ಪೆಟ್ಟಿಗೆ ಗುರಿಯಾದ ಯುವಕನೊಬ್ಬ ತೆಗೆದ ದೃಶ್ಯಗಳ ನೇರಪ್ರಸಾರವಾಗಿತ್ತು. ಭಾರತದ ಭದ್ರತಾ ಪಡೆಗಳ ಸಹನೆ ಮತ್ತು ನಿಗ್ರಹದ ಪೊಳ್ಳುತನವನ್ನು ಬಯಲಿಗೊಳಿಸಲು ಕಾಶ್ಮೀರದ ಯುವ ಸಮುದಾಯ ಈ ವಿಡಿಯೋಗಳನ್ನು ವಿಸ್ತೃತವಾಗಿ ಬಳಸಿದರು. ಮತ್ತೊಂದೆಡೆ ಭಾರತದ ಜನತೆಯ ಮನಸ್ಸಿನಲ್ಲಿ ಕ್ರಾಲ್‌ಪೋರಾದಲ್ಲಿ ಕಾಶ್ಮೀರಿ ಯುವಕನೊಬ್ಬ ಸಿಆರ್‌ಪಿಎಫ್‌ನ ಯೋಧನೊಬ್ಬನನ್ನು ಕೆಣಕುತ್ತಿದ್ದ ವಿಡಿಯೋ ದೃಶ್ಯ ಮಾತ್ರ ಉಳಿದುಕೊಂಡಿತು. ಸಾಮಾಜಿಕ ಮಾಧ್ಯಮಗಳಲ್ಲಿ ಸರ್ವರಿಗೂ ಸಮಾನ ಅವಕಾಶಗಳಿವೆಯೆಂದು ಹೇಳಲಾಗುತ್ತಿದ್ದರೂ ಅಲ್ಲಿಯೂ ಸಹ ದೇಹಬಲದ ರೀತಿಯಲ್ಲಿ ಸಂಖ್ಯೆಗಳ ಮೇಲಾಟವೇ ಮೇಲುಗೈ ಪಡೆಯುತ್ತದೆ. ಹಲವಾರು ಬಾರಿ ಅಂಥಾ ಖಾತೆಗಳನ್ನು ಸರ್ಕಾರದ ಐಟಿ ಕೋಶಗಳು (ಸೆಲ್) ದುಡ್ಡು ಕೊಟ್ಟು ನಡೆಸುತ್ತವೆ. ಆದರೂ ಸಿಆರ್‌ಪಿಎಫ್‌ನ ಇನ್ಸ್‌ಪೆಕ್ಟರ್ "ತನಿಖೆಯಲ್ಲಿ ಈ ವಿಡಿಯೊ ಅಧಿಕೃತವಾದದ್ದು ಎಂದು ತಿಳಿದುಬಂದಿತು" ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಆದರೆ ಸೈನಿಕರು ನಡೆಸಿರುವ ಅತ್ಯಾಚಾರಗಳ ಇತರ ದೃಶ್ಯಾವಳಿಗಳ ಅಧಿಕೃತತೆಯ ಬಗ್ಗೆ ಏಕೆ ಇಂಥಾ ತನಿಖೆಗಳನ್ನು ನಡೆಸುವುದಿಲ್ಲ?

ಕೆಲವು ವಿಶ್ಲೇಷಕರು ಗುರುತಿಸಿರುವಂತೆ ಸಿಆರ್‌ಪಿಎಫ್ ಯೋಧರ ಬಗ್ಗೆ ಇರುವ ವಿಡಿಯೋ ದೃಶ್ಯಾವಳಿಗಳಲ್ಲಿ ಕನಿಷ್ಠ ನಾಲ್ಕು ಜನರು ಯೋಧರಿಗೆ ಹಾನಿ ಮಾಡಬೇಡಿ ಎಂದು ಹೇಳುತ್ತಿರುವ ಧ್ವನಿಗಳಿವೆ. ಒಂದು ಚಲನಚಿತ್ರದ ದೃಶ್ಯಾವಳಿಗಳನ್ನು ಚಿತ್ರಿಸಿದಾಗ ಈ ಎಲ್ಲಾ ಪದರಗಳೂ ದಾಖಲಾಗುತ್ತವೆ. ಆದರೆ ವಿಡಿಯೋಗಳನ್ನು ಹೆಚ್ಚೆಚ್ಚು ಹಂಚಿಕೊಳ್ಳುತ್ತಾ ಹೋದಂತೆ ಈ ಪದರುಗಳು ಇಲ್ಲವಾಗುತ್ತಾ ಹೋಗುತ್ತವೆ.

ಒಂದೋ ಇಂಥಾ ದೃಶ್ಯಾವಳಿಗಳ ಸತ್ಯಾಸತ್ಯತೆಗಳ ಇಡಿಯಾದ ಪರಿಶೀಲನೆ ಸಾಧ್ಯ ಅಥವಾ ಯಾವ ಪರಿಶೀಲನೆಯೂ ಸಾಧ್ಯವಿಲ್ಲವೆಂಬ ನಂಬಿಕೆ ಚಾಲ್ತಿಯಲ್ಲಿದೆ. ಆದರೆ ವಾಸ್ತವ ಹಾಗೇನೂ ಇಲ್ಲ. ಜಗತ್ತಿನ ಹಲವಾರು ಕಡೆಗಳಲ್ಲಿ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಜನರು ಸಾಮಾಜಿಕ ಮಾಧ್ಯಮಗಳಲ್ಲಿ ನೇರ ಪ್ರಸಾರ ಮಾಡುವ ಮಾರ್ಗಗಳನ್ನು ಅನುಸರಿಸುತ್ತಾರೆ. 'ವಾಟ್ಸಪ್ ವಿಡಿಯೋ'ಗಳು ನೀಡುವ ತತ್‌ಕ್ಷಣದ ಅಧಿಕೃತತೆಯನ್ನು ಜನ ಸತ್ಯದ ಪುರಾವೆಯೆಂದು ಭಾವಿಸುತ್ತಾರೆ. ಇಂಥಾ ವಿಡಿಯೋಗಳನ್ನು ಹಂಚಿಕೊಳ್ಳಲು ವ್ಯಕ್ತವಾಗುವ ಪ್ರೇರಣೆಯೊಂದೇ. ಮುಖ್ಯವಾಹಿನಿ ಮಾಧ್ಯಮಗಳು ನಿಜವೆಂದು ಬಿತ್ತರಿಸುವ ಸತ್ಯಗಳನ್ನು ಬುಡಮೇಲು ಮಾಡುತ್ತೇವೆಂಬ ಕಥನ. ರಾಜಕೀಯ ಭಿತ್ತಿಯ ಯಾವ ಕಡೆಗೆ ಸೇರಿದವರಾಗಿದ್ದರೂ, ಅವರ ಪ್ರಕಾರ ಮುಖ್ಯವಾಹಿನಿ ಎಂಬುದರ ಅರ್ಥ ಏನೇ ಆಗಿದ್ದರೂ ದೃಶ್ಯಾವಳಿಗಳ ಹಂಚಿಕೆಯ ಹಿಂದಿನ ಕಥನ ಮಾತ್ರ ಇದೇ ಆಗಿರುತ್ತದೆ. ಆದರೆ ಅದರ ಅಧಿಕೃತತೆಯ ದಿರಿಸಿನಿಂದಾಗಿಯೇ ಅವನ್ನು ಮತ್ತಷ್ಟು ಪ್ರಚಾರಗಳಿಗಾಗಿ ಬಳಸಿಕೊಳ್ಳುವ ಸಾಧ್ಯತೆಗಳು ಇಲ್ಲದಿಲ್ಲ.

ಆದರೆ ಸರ್ಕಾರವೊಂದು ವದಂತಿಗಳನ್ನು ಹಬ್ಬಿಸುವ ವಾಟ್ಸಪ್ ಬಳಕೆದಾರನಂತೆ ವರ್ತಿಸುತ್ತಾ ತನ್ನ ಸೈದ್ಧಾಂತಿಕ ನಿಲುವುಗಳಿಗೆ ಸರಿಹೊಂದುವ ದೃಶ್ಯಗಳ ಸತ್ಯಾಸತ್ಯತೆಗಳನ್ನು ಮಾತ್ರ ಪರಿಶೀಲಿಸುತ್ತಾ ಉಳಿದವುಗಳ ಬಗ್ಗೆ ಜಾಣ ಕುರುಡನ್ನು ಪ್ರದರ್ಶಿಸಲು ಸಾಧ್ಯವಿಲ್ಲ. ಸುಳ್ಳುಸುದ್ದಿಗಳನ್ನು ಹರಡುವುದನ್ನು ತಡೆಗಟ್ಟುವುದರ ಬಗ್ಗೆ ಗಂಭೀರವಾಗಿರುವ ಸರ್ಕಾರವೊಂದು, ಸುಳ್ಳು ಸುದ್ದಿಗಳನ್ನು ನಿಗ್ರಹಿಸಲು ಐರೋಪ್ಯ ಒಕ್ಕೂಟವು ಮಾಡುತ್ತಿರುವಂತೆ, ದೃಶ್ಯಾವಳಿಗಳ ಸಂದರ್ಭವನ್ನು ಮತ್ತು ಅದರಲ್ಲಿ ಅಡಕವಾಗಿರುವ ಪದರಗಳನ್ನು ಗುರುತಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲು ಮುಂದಾಗುತ್ತದೆ. ಕಾಶ್ಮೀರಿ ಪ್ರತಿಭಟನೆಗಳ ಬಗ್ಗೆ ವೈರಲ್ ಆಗಿರುವ ವಿಡಿಯೋದಲ್ಲಿ ಸುಳ್ಳು ಸುದ್ದಿಯಿದೆಯೆಂದು ಸರ್ಕಾರವು ಅನುಮಾನಿಸುತ್ತಿದ್ದರೆ ಆ ವಿಡಿಯೋದಲ್ಲಿ ತಪ್ಪಾಗಿ ತೋರಿಸಲ್ಪಟ್ಟಿರುವ ಸಂಗತಿಗಳು ಯಾವುವು- ದೃಶ್ಯಾವಳಿಗಳನ್ನು ತಿದ್ದಲಾಗಿದೆಯೇ ಅಥವಾ ಅವು ಬೇರೆ ಪ್ರದೇಶದ ದೃಶ್ಯಗಳೆ ಅಥವಾ ಹಳೆಯ ದೃಶ್ಯಗಳೇ ಎಂಬಿತ್ಯಾದಿಗಳ ಬಗ್ಗೆ ಜನರಿಗೆ ಹೇಳಬೇಕಾಗುತ್ತದೆ.

ಹಲವಾರು ಸಾರಿ ಮುಖ್ಯವಾಹಿನಿ ಪ್ರಕಾಶನ ಸಂಸ್ಥೆಗಳು ಸಹ ವೈರಲ್ ಆದ ವಿಡಿಯೋಗಳ ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಆದರೆ ಅದು ಆ ಘಟನೆ ಸಂಭವಿಸಿದ ಜಾಗ ದುರ್ಗಮವಾಗಿರುವ ಕಾರಣದಿಂದಲೋ ಅಥವಾ ಅವುಗಳ ಸತ್ಯಾಸತ್ಯೆಯನ್ನು ಒರೆಹಚ್ಚಲು ಬೇಕಾದ ವ್ಯವಸ್ಥೆ ಇಲ್ಲದಿದ್ದುದರಿಂದಲೋ ಸಂಭವಿಸುವುದಿಲ್ಲ. ಬದಲಿಗೆ ಸತ್ಯಾಸತ್ಯತೆಗಳನ್ನು ಒರೆಹಚ್ಚಿ ನೋಡಲು ಇರುವ ತಾಳ್ಮೆಯ ಕೊರತೆ ಮತ್ತು ಉತ್ತರದಾಯಿತ್ವದ ಕೊರತೆಗಳೇ ಬಹಳಷ್ಟು ಬಾರಿ ಇದಕ್ಕೆ ಕಾರಣವಾಗಿರುತ್ತವೆ. ಆದರೆ ಇಂಥಾ ಸುಳ್ಳು ಸುದ್ದಿಯನ್ನು ಪತ್ತೆಹಚ್ಚುವುದರಲ್ಲಿ ತೊಡಗಿಕೊಂಡಿರುವ ಸ್ವತಂತ್ರ ಪತ್ತೆದಾರಿಗಳು ಬಹಳಷ್ಟು ಪೊಳ್ಳು ಫೋಟೋಗಳನ್ನು ಕೇವಲ 'ರಿವರ್ಸ್ ಇಮೇಜ್ ಸರ್ಚ್'(ಹಿಮ್ಮುಗ ಚಿತ್ರ ಪರೀಕ್ಷೆ)ಯಿಂದಲೇ ಪತ್ತೆ ಹಚ್ಚಬಹುದೆಂದು ತೋರಿಸಿಕೊಟ್ಟಿದ್ದಾರೆ. ಬಹಳಷ್ಟು ಪಾಶ್ಚಿಮಾತ್ಯ ದೇಶಗಳು ಇಂಥಾ ಪರೀಕ್ಷಾ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಒಂದು ಸಂದೇಶವನ್ನು ಹಂಚಿಕೊಳ್ಳುವ ಮುನ್ನ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಿಕೊಳ್ಳಬೇಕೆಂಬ ಸಂಸ್ಕೃತಿಯು ಹರಡಬೇಕೆಂದರೆ ಮೊದಲು ಸರ್ಕಾರಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಈ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಆದರೆ ಇದು ಅಸಂಭವ. ಉದಾಹರಣೆಗೆ ಭಾರತೀಯ ಜನತಾ ಪಕ್ಷದ ಸದಸ್ಯನಾದ ಸಂಗೀತ್ ಸೋಮ್ ಅವರು 2013ರಲ್ಲಿ ಮುಝಫ್ಫರ್‌ನಗರದ ಗಲಭೆಗೆ ಮೂಲ ಕಾರಣವಾದ ಸುಳ್ಳು ವಿಡಿಯೋ ಒಂದರ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ತನ್ನ ಫೇಸ್‌ಬುಕ್ ಪೇಜಿನಲ್ಲಿ ಹಂಚಿಕೊಂಡ ಆರೋಪವನ್ನು ಎದುರಿಸುತ್ತಿದ್ದಾರೆ.

ಸರ್ಕಾರದ ಐಟಿ ಸೆಲ್ ಮತ್ತು ಕೆಲವು ಮುಖ್ಯ ಅಧಿಕಾರಿಗಳು ಉತ್ತರದಾಯಿತ್ವವಿಲ್ಲದ ಪ್ರಚಾರ ಮತ್ತು ಅಧಿಕೃತ ಮೌನಗಳ ಮೂಲಕ ಸುಳ್ಳು ಸುದ್ದಿಗಳ ಪ್ರಚಾರಕ್ಕೆ ಇಂಬುಗೊಟ್ಟಿದ್ದಾರೆ. ಆದರೆ ಅವರು ಸಾಮಾಜಿಕ ಮಾಧ್ಯಮಗಳ ಅಸ್ಥಿರ (ಫಜಿ) ಸ್ವರೂಪವನ್ನು ಮುಂದುಮಾಡಿ ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದು ಆಗಕೂಡದು. ಸರ್ಕಾರವು ಮಾಡಿರುವ ಅಧಿಕಾರದ ದುರುಪಯೋಗವನ್ನು ಸಾಬೀತುಮಾಡುವ ದೃಶ್ಯಾವಳಿಗಳನ್ನು ಹೊಂದಿರುವ ವಿಡಿಯೋಗಳನ್ನು ಕಾಶ್ಮೀರಿಗಳು ದೇಶದ ಮುಂದಿಟ್ಟಿದ್ದಾರೆ. ಆದರೆ ಸರ್ಕಾರವು ಅವುಗಳ ಸತ್ಯಾಸತ್ಯತೆಗಳನ್ನು ನಿಖರವಾಗಿ ಪತ್ತೆಹಚ್ಚಲು ಅಸಾಧ್ಯವೆಂಬ ಕಥನವನ್ನು ಮುಂದಿಡುವುದರ ಮೂಲಕ ತನಗೆ ಸತ್ಯವನ್ನು ಅರಿತುಕೊಳ್ಳಲು ಯಾವ ಆಸಕ್ತಿಯಿಲ್ಲವೆಂದು ಮತ್ತೊಮ್ಮೆ ರುಜುವಾತು ಮಾಡಿದೆ. ■

2 ⏮

...ರಂದು ನಡೆದ ಧರ್ಮ ಸಂಸ್ಕೃತಿ ಮಹಾಕುಂಭದಲ್ಲಿ ...ಾಪಡೆಯ ಹಿರಿಯ ನಿವೃತ್ತ ಅಧಿಕಾರಿಗಳಾದ ಜ। ...ಸಿ. ವಿಜ್, ಏ। ಮಾ। ಭೂಷಣ್ ಗೋಖಲೆ, ಲೆ। ಸಯ್ಯದ್ ಅಟಾ ಹಸ್ನೈನ್ ಭಾಗವಹಿಸಿದ್ದರು. ಇವರು ...ಸ್ಸ್ ಮುಖ್ಯಸ್ಥ ಮೋಹನ್ ಭಾಗ್ವತ್ ಮತ್ತು ...ಜಿಗಳ ಜೊತೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ...ದಿನ ಸಭೆಯಲ್ಲಿ ಹಿಂದೂತ್ವದ ವಿಷಯದಲ್ಲಿ ಬೆಂಕಿ ...ಳುವ ಭಾಷಣಗಳು ಕೇಳಿಬಂದಿದ್ದವು. ಮುಘಲರ ...ಕೆಯ ವಿರುದ್ಧ ವಾಗ್ದಾಳಿ ನಡೆಸಿದ ಮೋಹನ ಭಾಗ್ವತ್, ...ಪ್ರಭುತ್ವದಲ್ಲಿ ಜನರ ಆಡಳಿತ ಇರಬೇಕಿದ್ದರೂ ಕಳೆದ ...ರ ವರ್ಷಗಳಲ್ಲಿ ದೇಶದ ಜನರಿಗೆ ಆಳುವ ಅವಕಾಶ ...ಲ್ಲ ಎಂದಿದ್ದ.

ವಾಜಪೇಯಿ ಸರ್ಕಾರದ ಕಾಲದಲ್ಲಿ


ವಾಜಪೇಯಿ ಸರ್ಕಾರದ ಕಾಲದಲ್ಲಿಯೂ ಸೇನೆಯ ...ೀಕರಣದ ಪ್ರಕ್ರಿಯೆ ಸಾಕಷ್ಟು ವೇಗವಾಗಿ ನಡೆದಿತ್ತು. ...ಾಹರಣೆಗೆ ಅಂದು ಅಡ್ವಾಣಿಯ ಸೂಚನೆಯಂತೆ ...ಸ್ ಪಡೆಯಿಂದ ಲಡಾಕ್‌ನ ಲೆಯಲ್ಲಿ ಸಿಂಧು ದರ್ಶನ ...ು ಧಾರ್ಮಿಕ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳ...ು. ಆದರೆ ಆ ಕಾರ್ಯಕ್ರಮದ ಆತಿಥೇಯನಾಗಿ ...ವನ್ನು ನೇಮಿಸಲಾಯಿತು ಗೊತ್ತೆ? ಭಾರತೀಯ ...ವನ್ನು! 500ಕ್ಕೂ ಅಧಿಕ ಸಂಘಿಗಳು, ತರುಣ್ ವಿಜಯ್ ಮುಂತಾದವರು ಭಾಗವಹಿಸಿದ್ದ ಆ ಕಾರ್ಯಕ್ರಮದಲ್ಲಿ ಊಟ, ವಸತಿ, ವೇದಿಕೆ ಮತ್ತು ಎಲ್ಲ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಿರುವುದು ಲಡಾಕ್‌ನ ತೃತೀಯ ಪದಾತಿ ದಳ (3rd infantry division).

ಇಂದು ಮೋದಿ ಸರ್ಕಾರ ಭಾರತ ಮಾತೆಯನ್ನು ಓರ್ವ ಸಮರಪ್ರಿಯ ದೇವಿಯಂತೆ ಪರಿವರ್ತಿಸುತ್ತಿರುವುದು ಸ್ಪಷ್ಟವಿದೆ. ವಿಷಯ ಏನೆಂದರೆ ಸಂಘ ಪರಿವಾರದ ಹಿಂದೂರಾಷ್ಟ್ರ ಅಸ್ತಿತ್ವಕ್ಕೆ ಬಂತೆಂದಾದರೆ ಅಲ್ಲಿ ಸೇನಾಪಡೆಗಳಿಗೆ ಭಾರಿ ಪ್ರಾಮುಖ್ಯತೆ ಇರುತ್ತದೆ. ಕಾರಣವೇನೆಂದರೆ ಹೇಗೂ ಹಿಂದೂರಾಷ್ಟ್ರಕ್ಕೆ ಅವಶ್ಯವಾಗಿ ಇರಲೇಬೇಕಾದ, ಒಂದು ವೇಳೆ ಇಲ್ಲದಿದ್ದರೂ ಸೃಷ್ಟಿಸಲಾಗುವ, ಬಾಹ್ಯ ಶತ್ರುಗಳನ್ನಷ್ಟೆ ಅಲ್ಲದೆ ಹಿಂದೂತ್ವವಾದದ ಆಂತರಿಕ ವಿರೋಧಿಗಳನ್ನು ಸಹಿತ ಹತ್ತಿಕ್ಕಲು ಸೇನೆ ಬೇಕೇ ಬೇಕು. ಆದುದರಿಂದಲೆ ಸಂಘ ಪರಿವಾರಕ್ಕೆ ಸೇನಾಪಡೆಗಳ ಬಗ್ಗೆ ಅತಿಯಾದ ಒಲವು. ಸೇನೆಗೆ ಆದರ ಬಲವನ್ನು ಮನಗಾಣಿಸಿದ್ದೆ ಬಿಜೆಪಿ ಸರ್ಕಾರ ಎಂಬ ಮಾಜಿ ರಕ್ಷಣಾ ಸಚಿವ ಪರಿಕ್ಕರ್‌ನ ಹೇಳಿಕೆಯೂ ಇದನ್ನೆ ಧ್ವನಿಸುತ್ತದೆ. ವಾಸ್ತವದಲ್ಲಿ ಇದು ಸೇನೆಗೆ ಮಾಡಿದ ಅವಮಾನವಾಗಿದ್ದು ಇದನ್ನು ಯಾರೂ ಪ್ರತಿಭಟಿಸಿದಂತಿಲ್ಲ. ಇಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕು. ಸಂಘಿಗಳ ಆತ್ಯಾಸಕ್ತಿ, ಅನುಕಂಪಗಳೆಲ್ಲವೂ ಕೇವಲ ಹುತಾತ್ಮ ಯೋಧರಿಗಷ್ಟೆ ಸೀಮಿತವಾಗಿರುವಂತಿದೆ. ಇವರ್‍ಯಾರೂ ಸೇನೆಯಲ್ಲಿರುವ ಯೋಧರು ದಿನಾ ಎದುರಿಸುವ ಕಳಪೆ ಆಹಾರ, ಆರ್ಡರ್ಲಿ ಡ್ಯೂಟಿಗಳಂತಹ ಹಲವಾರು ಜ್ವಲಂತ ಸಮಸ್ಯೆಗಳ ಕಡೆ ತಿರುಗಿಯೂ ನೋಡಿದವರಲ್ಲ. ಗಮನಿಸಬೇಕಿರುವ ಅಂಶವೆಂದರೆ ಸೇನೆ ಮತ್ತು ಅರೆಸೇನಾ ಪಡೆಗಳ ಪದಾತಿ ದಳಗಳಲ್ಲಿರುವವರಲ್ಲಿ ಹೆಚ್ಚಿನವರು ಕೆಳವರ್ಗಗಳಿಂದ ಬಂದವರು. ಇವರು ಮುಖ್ಯವಾಗಿ ತಮ್ಮ ಕುಟುಂಬಗಳಿಗೆ ಆಸರೆಯಾಗುವ ಉದ್ದೇಶದಿಂದ ಅಲ್ಲಿದ್ದಾರೆ ಹೊರತು ಆರೆಸ್ಸೆಸ್ಸಿಗರು ಕಿರುಚಾಡುತ್ತಿರುವ ದೇಶಭಕ್ತಿಯ ಕಾರಣಕ್ಕಲ್ಲ.

■ **ಸುರೇಶ್ ಭಟ್ ಬಾಕ್ರಬೈಲ್**

(ಆಧಾರ: *scroll.in*ನಲ್ಲಿ ಅಪೂರ್ವಾನಂದ್; *5-1. 2017*ರ *AlterNetAlterNet* ನಲ್ಲಿ ತೀಸ್ತಾ ಸೆಟಲ್ವಾದ್; ಕೇಸರಿ ಭಯೋತ್ಪಾದನೆ, ಪುಟ *75, 76, 77*)

'ಮರಳಿ ಮನೆಗೆ' ಚಿತ್ರಕ್ಕಿಲ್ಲದ ಪ್ರಚಾರ 'ಬಾಹುಬಲಿ'ಗ್ಯಾಕೆ?



'ಬಾಹುಬಲಿ' ತೆಲುಗು ಚಲಚಿತ್ರದ ಸುದ್ದಿರೂಪದ ಜಾಹಿರಾತುಗಳನ್ನು ಕನ್ನಡ ಪತ್ರಿಕೆಗಳಲ್ಲಿ ನೋಡಿ ನೋಡಿ ವಾಕರಿಕೆ ಬರುತ್ತಿದೆ. ಯಾವುದೇ ಪರಭಾಷೆಯ ಚಿತ್ರದ ಸುದ್ದಿರೂಪದ ಜಾಹಿರಾತು ಪ್ರಕಟಿಸುವುದಕ್ಕೂ ಒಂದು ಮಿತಿ ಇರಬೇಕು. ಹಿಂದಿನ ಎರಡು ವಾರದಿಂದ ದಿನಾಲೂ ಯಾವುದೇ ಕನ್ನಡ ಪತ್ರಿಕೆ ತೆರೆದ ಕೂಡಲೇ ಕಣ್ಣಿಗೆ ಬೀಳುವುದು ತೆಲುಗು ಬಾಹುಬಲಿಯ ಸುದ್ದಿರೂಪದ ಜಾಹಿರಾತುಗಳು ಅರ್ಥಾತ್ ಪೇಡ್ ನ್ಯೂಸ್‌ಗಳು. ಹಾಲಿವುಡ್ಡಿನ ಐತಿಹಾಸಿಕ ಗ್ರೀಕ್/ರೋಮನ್ ಹಿನ್ನೆಲೆಯ ಚಲಚಿತ್ರ ಅಥವಾ ಗ್ರೀಕ್ ಪೌರಾಣಿಕ ಕಥೆಯುಳ್ಳ ಇಂಗ್ಲಿಷ್ ಚಲನಚಿತ್ರಗಳನ್ನು ನೋಡಿದವರಿಗೆ ಈ ತೆಲುಗು ಬಾಹುಬಲಿಯಲ್ಲಿ ವಿಶೇಷವೇನೂ ಕಾಣುವುದಿಲ್ಲ.

ಆದರೆ, ನಾನು ಇತ್ತೀಚಿಗೆ ನೋಡಿದ ಚಿತ್ರಗಳಲ್ಲಿ ಅತ್ಯುತ್ತಮವಾದುದೆಂದರೆ 'ಮರಳಿ ಮನೆಗೆ' ಎಂಬ ಕನ್ನಡ ಚಿತ್ರ. ಯಾವುದೇ ಹೆಚ್ಚಿನ ಸದ್ದು-ಗದ್ದಲವಿಲ್ಲದೇ ಕಳೆದ ವಾರ ಬಿಡುಗಡೆಗೊಂಡ ಈ ಚಿತ್ರ 1970-80 ರ ದಶಕಗಳ ರಾಜಕುಮಾರ್ ತರಹದ ಕೌಟುಂಬಿಕ ಚಿತ್ರ. ಇದನ್ನು 2017 ರಲ್ಲಿ ನೋಡುವಾಗ 'ನೊಸ್ಟಾಲ್ಜಿಕ್' ಆಗಿ ಮನಸ್ಸಿಗೆ ಮುದ ನೀಡುತ್ತದೆ. ಆದರೆ ಕನ್ನಡಿಗ ಪ್ರೇಕ್ಷಕರು ಮಚ್ಚು ಲಾಂಗು, ಬಡಾಯಿ, ಆರ್ಭಟೆ, ದ್ವಂದ್ವಾರ್ಥದ ಸಂಭಾಷಣೆ ಇವುಗಳಿಗೆ ಮಾನಸಿಕವಾಗಿ ಅಡ್ಜಸ್ಟ್ ಆಗಿ ಹೋಗಿರುವುದರಿಂದ ಅವರಿಗೆ ಈಗ 'ಮರಳಿ ಮನೆಗೆ'ಯಂತಹ ಹೃದಯಸ್ಪರ್ಶಿ ಕೌಟುಂಬಿಕ ಚಿತ್ರಗಳು ಹಿಡಿಸುತ್ತಿಲ್ಲದಿರಬಹುದು.

ಈ 'ಮರಳಿ ಮನೆಗೆ' ಕಥೆ ಕರ್ನಾಟಕದ ಒಳನಾಡಿನಲ್ಲಿ ನಡೆದಿದ್ದರೂ ಇದು ನಮ್ಮ ತುಳುನಾಡಿಗೆ ತುಂಬಾ ಅನ್ವಯ ವಾಗುವ ಕಥೆ, ಯಾಕೆಂದರೆ 1950 ರಿಂದ 1980 ರ ನಡುವಿನ ಕಾಲಘಟ್ಟದಲ್ಲಿ ತುಳುನಾಡಿನ ಬಹಳಷ್ಟು ಮಧ್ಯಮ ವರ್ಗದ ಕುಟುಂಬಗಳಲ್ಲಿ 14 ರಿಂದ 20 ವರ್ಷದ ನಡುವಿನ ಹುಡುಗರು ತಂದೆ ತಾಯಿಗಳಿಗೆ ಹೇಳದೇ ಕೇಳದೆ ಮನೆ ಬಿಟ್ಟು ಮುಂಬೈಗೆ ಓಡಿ ಹೋಗುವುದು ಸಾಮಾನ್ಯವಾಗಿತ್ತು. ಪ್ರತಿಯೊಂದು ಬಂಟ ಅಥವಾ ಬಿಲ್ಲವ ಕುಟುಂಬದಲ್ಲೂ ಯಾವನಾದರೂ ಒಬ್ಬ ಹುಡುಗ ಮನೆ ಬಿಟ್ಟು ಬಾಂಬೆಗೆ ಓಡಿಹೋದ ಘಟನೆ ನಡೆದೇ ಇರುತ್ತಿತ್ತು. ಆದರೆ ಅವರಲ್ಲಿ ಕೆಲವರು ಮುಂಬೈಯಲ್ಲಿ ಹೋಟೆಲು ಮಾಡಿ ಹಣ ಗಳಿಸಿ 10-15 ವರ್ಷಗಳ ನಂತರ 'ಶ್ರೀಮಂತ' ಊರಿಗೆ ಬಂದು ತಂದೆ ತಾಯಿಗೆ ಖುಷಿ ಕೊಡುತ್ತಿದ್ದರು, ಆದರೆ ಬಹಳಷ್ಟು ಹುಡುಗರು ಏನಾದರೆಂದು ಗೊತ್ತಾಗದೇ ಹೆತ್ತವರು ಚಾತಕಪಕ್ಷಿಯಂತೆ ಮಗನ ನಿರೀಕ್ಷೆಯಲ್ಲಿಯೇ ಕಣ್ಣೀರಿಡುತ್ತಾ ಜೀವನ ಕೊನೆಗೊಳಿಸುತ್ತಿದ್ದರು. ಇಂತಹದ್ದೇ ನಿರೀಕ್ಷೆ-ನಿರಾಸೆಗಳ ತಾಕಲಾಟದ ಕಥೆ ಹೊಂದಿರುವ ಯೋಗೇಶ್ ಮಾಸ್ಟರ್ ಅವರ 'ಮರಳಿ ಮನೆಗೆ' ಚಿತ್ರ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ. ಉತ್ತರ ಕರ್ನಾಟಕದ ಪ್ರೇಕ್ಷಕರಿಗೆ ಈ ಚಿತ್ರ ಹೆಚ್ಚು ಇಷ್ಟವಾಗಬಹುದು. ಶಿವರಾಮ ಕಾರಂತರ 'ಬೆಟ್ಟದ ಜೀವ' ಎಂಬ ಕಾದಂಬರಿಯನ್ನು ಇದು ಸ್ವಲ್ಪಮಟ್ಟಿಗೆ ನೆನಪಿಸುತ್ತದೆ. 'ಬೆಟ್ಟದ ಜೀವ' ಕಾದಂಬರಿಯಲ್ಲೂ ಒಂದು ಬ್ರಾಹ್ಮಣ ದಂಪತಿ ಮನೆ ಬಿಟ್ಟು ಓಡಿಹೋದ ತಮ್ಮ ಮಗನ ನಿರೀಕ್ಷೆಯಲ್ಲಿಯೇ ಜೀವನ ಸವೆಸುವ ಕತೆಯಿದೆ. ಐದು ಲಕ್ಷ ಕನ್ನಡಿಗರಿರುವ ಹೈದರಾಬಾದಿನಂತಹ ಮಹಾನಗರದಲ್ಲೂ ಕನ್ನಡ ಚಲನಚಿತ್ರಗಳು ಪ್ರದರ್ಶನ ಆಗುವುದಿಲ್ಲ, ಆದರೆ ಕರ್ನಾಟಕದ ಮೂಲೆಮೂಲೆಯಲ್ಲಿ ತೆಲುಗು ಚಿತ್ರ ಜಯಭೇರಿ ಬಾರಿಸುತ್ತಿರುವುದು ಕನ್ನಡಿಗರ ಮನೆಹಾಳು ಬುದ್ಧಿಗೆ ಸಾಕ್ಷಿ.


-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ತೆಲುಗು 'ಬಾಹುಬಲಿ-2' ಚಿತ್ರದ ಪರೋಕ್ಷ ಪ್ರಚಾರಕ್ಕೆ ಅಂದರೆ ಲೇಖನ-ವರದಿ-ಸಮೀಕ್ಷೆ-ಸಂದರ್ಶನ ವೇಷದ ಪ್ರಚಾರಕ್ಕೇನೇ ನಿರ್ಮಾಪಕರು ನೂರಾರು ಕೋಟಿ ರೂಪಾಯಿ ಖರ್ಚು ಮಾಡಿರುವಾಗ ಅದು ಒಂದು ಸಾವಿರ ಕೋಟಿ ಗಳಿಸುವುದು ದೊಡ್ಡ ಸಂಗತಿಯಲ್ಲ. ಯಾವುದೇ ಕನ್ನಡ ಚಿತ್ರ ನಿರ್ಮಾಪಕರು ತಮ್ಮ ಚಿತ್ರದ ಪ್ರಚಾರಕ್ಕೆ ಹೆಚ್ಚೆಂದರೆ 25 ಲಕ್ಷ ಖರ್ಚು ಮಾಡುತ್ತಾರಂತೆ. ಇತ್ತೀಚಿನ 'ಮರಳಿ



ಮನೆಗೆ' ಕನ್ನಡ ಚಿತ್ರದ ಪ್ರಚಾರಕ್ಕೆ ಆಗಿರುವ ಒಟ್ಟು ಖರ್ಚು ಕೇವಲ ಐದು ಲಕ್ಷ ರೂಪಾಯಿ ಮಾತ್ರವಂತೆ ಪಾಪ! ಇದಕ್ಕೆ ಹೋಲಿಸಿದರೆ 'ಬಾಹುಬಲಿ'ಯ ಪ್ರಚಾರಕ್ಕೆ ಆಗಿರುವ ಖರ್ಚು ನೂರು ಕೋಟಿ ರೂಪಾಯಿ. ಹಾಗಾಗಿ ಕನ್ನಡ ಟಿವಿ ವಾಹಿನಿಗಳು ಮತ್ತು ಕನ್ನಡ ಪತ್ರಿಕೆಗಳು ಮುಗಿಬಿದ್ದು 'ಬಾಹುಬಲಿ'ಯ ನಾನಾ ವೇಷದ ಪರೋಕ್ಷ ಪ್ರಚಾರ ಮಾಡುತ್ತಿರುವುದಕ್ಕೆ ಮೂಲಕಾರಣ ಅದರ ನಿರ್ಮಾಪಕರು ಮಾಧ್ಯಮದವರಿಗೆ ಕೈತುಂಬಾ ದಕ್ಷಿಣೆ ನೀಡುತ್ತಿರುವುದೇ ಆಗಿದೆ. ಕನ್ನಡ ಮಾಧ್ಯಮದವರು ತೆಲುಗರ ಎಂಜಲು ಹಣಕ್ಕಾಗಿ ಕನ್ನಡ ದ್ರೋಹ ಬಗೆಯುತ್ತಿರುವುದು ದುಃಖದ ವಿಚಾರ. ಎರಡು ವರ್ಷದ ಹಿಂದೆ 'ಬಾಹುಬಲಿ-1'ರ ಪ್ರಚಾರದ ಬಿರುಗಾಳಿಗೆ ಕನ್ನಡದ 'ರಂಗಿತರಂಗ' ಎದೆಯೊಡ್ಡಿ ನಿಂತು ಭರ್ಜರಿ ಗೆಲುವು ಸಾಧಿಸಿತ್ತು, ಈಗ 'ಬಾಹುಬಲಿ-2'ರ ಪ್ರಚಾರದ ಬಿರುಗಾಳಿ ಎದುರಿಸಿ ಕನ್ನಡದ 'ಮರಳಿ ಮನೆಗೆ' ಚಿತ್ರ ಗೆದ್ದಿರುವುದು ಕನ್ನಡಿಗರಿಗೆ ಸಮಾಧಾನದ ವಿಷಯ.

- ಅನಿಲ್ ಕುಮಾರ್ ಪೂಜಾರಿ, ಬೆಳಗಾವಿ



ಯಡ್ಡಿ-ಈಶು ಜಗಳದಲ್ಲಿ ಚೆಡ್ಡಿಗೆ ಲಾಭ


ಈಶ್ವರಪ್ಪನವರು ಆ ಚೆಡ್ಡಿ ಚತುರ ಸಂತೋಷ್(ಜಿ?) ಹೇಳಿದಂತೆ ಕುಣಿಯಬಾರದು. ಆ ಸಂತೋಷ ಎಂಬವನು 'ಮೀನು ತಿನ್ನುವ ಕೊಂಕಣಿ ಬ್ರಾಹ್ಮಣ'. ನಮ್ಮ ಕಾರ್ಕಳ-ಉಡುಪಿಯ ಮೇಲ್ಜಾತಿ ಕೊಂಕಣಿಗರು ಒಬ್ಬ ವ್ಯಕ್ತಿಯನ್ನು 'ಧೂರ್ತ ಕ್ರಿಮಿನಲ್ ಬುದ್ಧಿಯವ' ಎಂದು ಸೂಚಿಸಬೇಕಾದರೆ "ಅವನೊಬ್ಬ ಬಂಟ ಶೆಟ್ಟಿ" ಅಥವಾ "ಬ್ಯಾರಿ ಮುಸ್ಲಿಮರನ್ನು ನಾಲ್ಕು ಹೆಜ್ಜೆಗಾದರೂ ನಂಬಬಹುದು ಆದರೆ ಬಂಟ ಶೆಟ್ಟಿಗಳನ್ನು ಒಂದು ಹೆಜ್ಜೆಗೂ ನಂಬಬಾರದು" ಎಂಬ ಜಾತಿಸೂಚಕ ಬಳಸುತ್ತಾರೆ. ಅದರಂತೆ ಒಬ್ಬನನ್ನು 'ಮಂದ ಬುದ್ಧಿಯವ, ದಡ್ಡ ಪೆದ್ದ' ಎಂದು ಸೂಚಿಸಲು "ಅವನೊಬ್ಬ ಕುರುಬ" ಎಂಬ ಅನ್ವರ್ಥನಾಮವನ್ನು ಕೊಂಕಣಿಗರು ಬಳಸುತ್ತಾರೆ. ಈ ಜಾತಿ ಹೀಯಾಳಿಕೆಯುಳ್ಳ ನುಡಿಗಟ್ಟುಗಳೇ ಈ ಕೊಂಕಣಿ ಮೇಲ್ಜಾತಿಗಳಿಗೆ ಬಂಟ ಮತ್ತು ಕುರುಬರ ಬಗ್ಗೆ ಇರುವ ತಿರಸ್ಕಾರ ಭಾವನೆಗೆ ಸಾಕ್ಷಿ. ವ್ಯಾಪಾರಿ ಬುದ್ಧಿಯ ಇವರ ಕೆಲಸವೇ ಇಬ್ಬರು ಶೂದ್ರರ ನಡುವೆ ಜಗಳ ತಂದಿಟ್ಟು ತಮ್ಮ ಲಾಭ ಮಾಡಿಕೊಳ್ಳುವುದು. ಈ ಸಾರಸ್ವತ ಬ್ರಾಹ್ಮಣರು ಮೂಲತಃ ಗೋವೆಯಿಂದ ವಲಸೆ ಬಂದವರು. ಇವರು ಶುದ್ಧ ಕನ್ನಡಿಗರಲ್ಲ, ಇವರ ಮಾತೃಭಾಷೆ ಕೊಂಕಣಿ. ಇವರು ಮುಸ್ಲಿಮರಿಗಿಂತ ಹೆಚ್ಚಾಗಿ ಕ್ರೈಸ್ತರನ್ನು ದ್ವೇಷಿಸುತ್ತಾರೆ. ಇದಕ್ಕೆ ಮೂಲ ಕಾರಣ ಗೋವೆಯಲ್ಲಿ ಪೋರ್ಚುಗೀಸರು ತಮ್ಮ ಪೂರ್ವಜರನ್ನು ಬಲಾತ್ಕಾರದಿಂದ ಮತಾಂತರಗೊಳಿಸಿದರು ಎಂಬ 500 ವರ್ಷ ಹಳೆಯ ಮರೆತು ಹೋದ ಗೋವೆಯ ಇತಿಹಾಸವನ್ನು ಇವರು ಕರ್ನಾಟಕಕ್ಕೂ ಹೊತ್ತು ತಂದು ನಮ್ಮ ಕನ್ನಡ ಕರಾವಳಿಯ ವಾತಾವರಣವನ್ನೂ ವಿಷಪೂರಿತಗೊಳಿಸಿ ಶಾಂತಿಪ್ರಿಯ ಕಥೋಲಿಕ್ ಕ್ರೈಸ್ತರ ವಿರುದ್ಧ ಈಗಲೂ ಹಿಂದೂಗಳಲ್ಲಿ ದ್ವೇಷ ಹರಡುತ್ತಿದ್ದಾರೆ.

ಕ್ರೈಸ್ತರು ತಮ್ಮ ಮಾತೃಭಾಷೆಯಾದ ಕೊಂಕಣಿಯಲ್ಲಿ ಸಾಹಿತ್ಯ ರಚಿಸಲು ಕನ್ನಡ ಲಿಪಿ ಬಳಸಿದರೆ ಸಾರಸ್ವತ ಬ್ರಾಹ್ಮಣರು ಮಾತ್ರ ದೇವನಾಗರಿ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ ರಚಿಸುತ್ತಾರೆ. ಇದುವೇ ಸಾರಸ್ವತ ಬ್ರಾಹ್ಮಣರು ಕನ್ನಡ ದ್ರೋಹಿಗಳು ಎಂಬುದಕ್ಕೆ ಪುರಾವೆ.

ಈ ಆರೆಸ್ಸೆಸ್ಸಿನ ಸಂತೋಷ್ ಗೋವೆಯ ಮುಖ್ಯಮಂತ್ರಿಯಾದ ತನ್ನದೇ ಜಾತಿಯ ಮನೋಹರ್ ಪಾರೀಕರ್‌ನ ಆತ್ಮೀಯ ಮಿತ್ರ. ಹಿಂದಿನ ಹಲವಾರು ವರ್ಷಗಳಿಂದ ಗೋವೆಯಲ್ಲಿ ಬಿಜೆಪಿ ಸರಕಾರ ಬಂದಾಗಲೆಲ್ಲಾ ಗೋವೆಯಲ್ಲಿ ನೆಲೆಸಿರುವ ಹಿಂದೂಗಳೇ ಆದ ಕನ್ನಡಿಗರ ಮೇಲೆ ಭೀಕರ ಹಲ್ಲೆಗಳಾಗುತ್ತಿವೆ. ಆದರೆ ಈ ಸಂತೋಷ್ ಅಥವಾ ಕರ್ನಾಟಕದ ಯಾವುದೇ ಕೊಂಕಣಿ ನೇತಾರ ಅದನ್ನು ಖಂಡಿಸಿ ಗೋವೆಯ ಹಿಂದೂ-ಕನ್ನಡಿಗರ ಪರ ಒಂದು ಶಬ್ದವನ್ನೂ ಆಡಿಲ್ಲವೆಂದರೆ ನಾವೆಲ್ಲಾ ಹಿಂದೂ ನಾವೆಲ್ಲಾ ಒಂದು ಎಂಬ ಘೋಷಣೆಗೆ ಅರ್ಥವೆಲ್ಲಿ ಉಳಿಯಿತು?

ಇಂತಹ ಒಬ್ಬ ಕನ್ನಡದ್ರೋಹಿ ಕೊಂಕಣಿಗ ಈಗ ಕರ್ನಾಟಕದ ಮುಖ್ಯಮಂತ್ರಿ ಆಗಲು ಹೊರಟಿದ್ದಾನೆ. ಅವನಿಗೆ ಇನ್ನೊಬ್ಬ ಕೊಂಕಣಿ ವೈಶ್ಯ ಚಕ್ರವರ್ತಿ ಸೂಲಿಬೆಲೆ ಬೆಂಬಲಿಗ.

ಈ ಸಂತೋಷ್ ಸಹ ವಿಜಯ ಮಲ್ಯಾನ ಜಾತಿಯವನೇ. ಇಂತಹ ಚೆಡ್ಡಿ ಸಂತೋಷನನ್ನು ಆರೆಸ್ಸೆಸ್ ಕರ್ನಾಟಕದ ಮುಖ್ಯಮಂತ್ರಿ ಮಾಡಲು ಹವಣಿಸುತ್ತಿದೆ. ಅದಕ್ಕಾಗಿ ಈಶ್ವರಪ್ಪ ಮತ್ತು ಯಡಿಯೂರಪ್ಪ ಮಧ್ಯೆ ಜಗಳ ತಂದಿಟ್ಟು ತನ್ನ ಬೇಳೆ ಬೇಯಿಸಿಕೊಳ್ಳಲು ಆರೆಸ್ಸೆಸ್ ಪ್ರಯತ್ನಿಸುತ್ತಿದೆ. ಕೊನೆಗೆ ಇವರಿಬ್ಬರ ಜಗಳದಲ್ಲಿ ಮುಖ್ಯಮಂತ್ರಿ ಆಗುವುದು 'ತೆಲುಗು ಬ್ರಾಹ್ಮಣ' ಅನಂತ ಕುಮಾರ್ ಅಥವಾ 'ಕೊಂಕಣಿ ಬ್ರಾಹ್ಮಣ' ಸಂತೋಷ್. ಈಶು-ಯಡ್ಡಿಗೆ ಮತ್ತು ನೈಜ ಕನ್ನಡಿಗರಿಗೆ ಬರಿ ಚೊಂಬು!




ಹರ್ಯಾಣ ಮತ್ತು ಮಹಾರಾಷ್ಟ್ರದಲ್ಲಿ ಎಲ್ಲಿಯೋ ಮೂಲೆಯಲ್ಲಿದ್ದ ಬ್ರಾಹ್ಮಣರನ್ನು ತಂದು ಮುಖ್ಯಮಂತ್ರಿ ಮಾಡಲಿಲ್ಲವೇ ಆರೆಸ್ಸೆಸಿನವರು! ಇನ್ನು ಕರ್ನಾಟಕ ಅವರಿಗೆ ಯಾವ ಲೆಕ್ಕ.

- ರಶ್ಮಿತ್ ಸುಜೇರ್, ಕಾರ್ಕಳ

ಎಲ್.ಕೆ.ಅಡ್ವಾಣಿ, ಮುರಳಿ ಜೋಷಿ, ಉಮಾಭಾರತಿ, ಕಲ್ಯಾಣ್ ಸಿಂಗ್ ಮುಂತಾದವರ ಮೇಲೆ ಬಾಬ್ರಿ ಧ್ವಂಸಕ್ಕೆ ಒಳಸಂಚು ರೂಪಿಸಿದ ಆರೋಪವನ್ನು ಸುಪ್ರೀಂಕೋರ್ಟ್ ಪುನರೂರ್ಜಿತಗೊಳಿಸಿದೆ. ಮೂಲತಃ ಇದೆಲ್ಲಾ ಸ್ವತಃ ಮೋದಿ ರಚಿಸಿದ ಷಡ್ಯಂತ್ರ. ಮೋದಿಗೆ ಅಡ್ವಾಣಿ ರಾಷ್ಟ್ರಪತಿ ಆಗುವುದು ಬೇಡವಾಗಿದೆ. ಕಾರಣ ಅಡ್ವಾಣಿ ರಾಷ್ಟ್ರಪತಿ ಆದರೆ ಅವರು ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದು ಎಂಬ ಭಯ ಮೋದಿ-ಅಮಿತ್ ಶಾಗೆ ಇದೆ. 2002 ರ ಗುಜರಾತ್ ಹತ್ಯಾಕಾಂಡದ ನಂತರ ಆಗಿನ ಪ್ರಧಾನಿ ವಾಜಪೇಯಿಯವರು ಮೋದಿಯನ್ನು ಗುಜರಾತ್ ಮುಖ್ಯಮಂತ್ರಿ ಪದದಿಂದ ಕಿತ್ತೆಸೆಯುವಂತೆ ಹೇಳಿದ್ದರು ಹಾಗೂ ಹರೇನ್ ಪಾಂಡ್ಯಾ ಎಂಬ ಸಾತ್ವಿಕನನ್ನು ಮುಖ್ಯಮಂತ್ರಿ ಮಾಡುವಂತೆ ಪಕ್ಷಕ್ಕೆ ಆದೇಶ ಕೊಟ್ಟಿದ್ದರು. ಆದರೆ ಆಗ ಇದೆ ಅಡ್ವಾಣಿ ಮೋದಿಯ ಪರವಾಗಿ ಬ್ಯಾಟಿಂಗ್ ಮಾಡಿ ಮೋದಿಯನ್ನು ಮುಖ್ಯಮಂತ್ರಿ ಪದವಿಯಿಂದ ಕಿತ್ತೆಸೆಯದಂತೆ ರಕ್ಷಿಸಿದ್ದರು. ಅಂದು ತನ್ನನ್ನು ರಕ್ಷಿಸಿದ ಅಡ್ವಾಣಿಗೇ 2014 ರಲ್ಲಿ ಮೋದಿ ಭಯಂಕರವಾಗಿ ಬೆನ್ನಿಗೆ ಇರಿದು ಪ್ರಧಾನ ಮಂತ್ರಿ ಪಟ್ಟ ಕಸಿದುಕೊಂಡು ಮೂಲೆಯಲ್ಲಿ ಕೂಡಿಸಿದರು. ಈ ಸಿಟ್ಟು-ನಿರಾಶೆ ಅಡ್ವಾಣಿಯವರಲ್ಲಿ ಇಂದಿಗೂ ಮಡುಗಟ್ಟಿದೆ.

ಮೇಲಾಗಿ ವಾಜಪೇಯಿಯ ನೆಚ್ಚಿನ ಶಿಷ್ಯ ಹಾಗೂ ಮೋದಿಯ ಪ್ರತಿಸ್ಪರ್ಧಿ ಹರೇನ್ ಪಾಂಡ್ಯಾರ ಸುಪಾರಿ ಹತ್ಯೆ 2003 ಮಾರ್ಚಿನಲ್ಲಿ ಆಗಿದ್ದು ಸಹ ಗುಜರಾತಿನಲ್ಲಿ, ಆಗ ಅಧಿಕಾರದಲ್ಲಿದ್ದ ಮೋದಿ-ಅಮಿತ್ ಶಾ ಕಡೆಯ



ವರಿಂದಲೇ ಎಂಬ ಸೂಕ್ಷ್ಮ ಅಡ್ವಾಣಿಗೆ ಈಗ ಅರಿವ... ಹಾಗಾಗಿ ಒಂದುವೇಳೆ ಅಡ್ವಾಣಿ ರಾಷ್ಟ್ರಪತಿ ಆದರೆ ... ತನ್ನ ವಿರುದ್ಧ ಸೇಡು ತೀರಿಸಿಕೊಳ್ಳಬಹುದು ಎಂಬ ... ಮೋದಿಗೆ ಈಗಲೂ ಇದೆ.

ಬಾಬ್ರಿ ಧ್ವಂಸ ದೇಶದ ಸ್ವಾತಂತ್ರ್ಯ ಹೋ... ಸಮಾನಾಗಿತ್ತು, ಸ್ವಾತಂತ್ರ್ಯ ಹೋರಾಟಕ್ಕೆ ಯಾ... ಕ್ರಿಮಿನಲ್ ಅಪರಾಧಿ ಎಂದು ಪರಿಗಣಿಸದಿರುವಾಗ ... ಧ್ವಂಸಕ್ಕೆ ಅಡ್ವಾಣಿ ಮತ್ತು ಸಂಗಡಿಗರ ಮೇಲೆ ಸು... ಕೋರ್ಟ್ ಕ್ರಿಮಿನಲ್ ಮೊಕದ್ದಮೆ ಸ್ವೀಕರಿಸಿರು... ಸರಿಯಲ್ಲ ಎಂದು ಮೊನ್ನೆ ಪೇಜಾವರಶ್ರೀ ಹೇಳಿ... ಪೇಜಾವರಶ್ರೀ ತಾನೊಬ್ಬ ಮಹಾ ಕಾನೂನು ಪ... ಸಂವಿಧಾನ ಪರಿಣಿತ ಎನ್ನುವ ರೀತಿಯಲ್ಲಿ ಯಾವಾ... ರಾಜಕೀಯ ಹೇಳಿಕೆ ನೀಡುತ್ತಾರೆ. ಬಾಬ್ರಿ ಧ್ವ... ಪಿತೂರಿಯಲ್ಲಿ ನಿಜವಾಗಿ ಪೇಜಾವರ ಸ್ವಾಮೀಜಿಯ ... ಪಾತ್ರ ಸಹ ಇದೆ. ಈ ಸ್ವಾಮಿ 1992 ಡಿಸೆಂಬ... ರಂದು ಬಾಬ್ರಿಯ ಗುಮ್ಮಟದ ಮೇಲೆ ನಿಂತು 'ಕು... ಕುಡ್ಲೆವ್' ಎಂದು ತುಳು-ಕನ್ನಡದಲ್ಲಿ ತನ್ನ ಕರಾ... ಪಡ್ಡೆಗಳಿಗೆ ಬಾಬ್ರಿ ಕೆಡುವಲು ಆದೇಶ ಕೊಟ್ಟ... ಎಂಬುದಾಗಿ ಸ್ವತಃ ಸಾಕ್ಷಿ ಮಹಾರಾಜ್ ಲೈಬ್ರಹಾ... ಕಮಿಷನ್ ಮುಂದೆ ಸಾಕ್ಷಿ ನುಡಿದಿದ್ದಾನೆ. ಆಗ ಸ್ವಾಮಿ... 58 ವರ್ಷದ ತಾರುಣ್ಯ. ಹಾಗಿರುವಾಗ ಅಡ್ವಾಣಿ, ಜೋ... ಉಮಾಭಾರತಿ ಜತೆಗೆ ಈ ಪೇಜಾವರ ಸ್ವಾಮೀಜಿ... ಬಾಬ್ರಿ ಧ್ವಂಸದ ಪಿತೂರಿಯಲ್ಲಿ ಪಾಲ್ಗೊಂಡಿದ್ದರು ... ಸಿಬಿಐ ಪೇಜಾವರರ ಮೇಲೂ ಮೊಕದ್ದಮೆ ದಾ... ಬೇಕಿತ್ತು, ಜತೆಗೆ ವಿರೋಧ ಪಕ್ಷಗಳು ಲೈಬರ್... ಕಮಿಷನ್ನಿನ ವರದಿಯನ್ನು ಪಾರ್ಲಿಮೆಂಟಿನಲ್ಲಿ ಮ... ಅದರ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡ... ಎಂಬ ಬೇಡಿಕೆ ಇಡುವ ಬದಲು ಲೈಬರ್ಹಾನ್ ... ಬಗ್ಗೆ ವಿರೋಧ ಪಕ್ಷಗಳೇಕೆ ಜಾಣ ಕುರುಡು ಪ್ರದರ್ಶಿ... ಎಂದು ಜನತೆಗೆ ಗೊತ್ತಾಗಬೇಕಿದೆ.

- ರಾಮಕೃಷ್ಣ ಕುಲಾಲ್, ಬೆಂಗಳ...

ನಕ್ಸಲರಲ್ಲಿ ಒಂದು ಕಳಕಳಿಯ ಮ...

ಬಂಧುಗಳೇ, ನೀವು ಇತ್ತೀಚಿನ ಛತ್ತೀಸ್‌ಗಢದ ... ದಾಳಿಯೂ ಸೇರಿದಂತೆ, 2008ರಿಂದ 2017ರ... ಕಳೆದ ಹತ್ತು ವರ್ಷಗಳಲ್ಲಿ ಒರಿಸ್ಸಾ, ಜಾರ್ಖಂಡ್, ಛ... ಗಢ, ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರ ಮು... ರಾಜ್ಯಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಯೋಧ... ಸೈನಿಕರನ್ನು ಬಲಿ ತೆಗೆದುಕೊಂಡಿರುತ್ತೀರಿ. ಅಲ್ಲ... ದಾಳಿಗಳಲ್ಲಿ ನೀವೂ ಸಹ ಬಹಳ ಮಂದಿಯನ್ನು ... ಕೊಂಡಿದ್ದೀರಿ ಆದರೆ ಆ ಬಗ್ಗೆ ನಿಖರ ಮಾಹಿತಿ ...

ಪ್ರಸ್ತುತ ಪ್ರಶ್ನೆ ಇಷ್ಟೇ: ನೀವು ಇಷ್ಟೆಲ್ಲಾ ಜನರ ... ನೋವಿನಿಂದ ಸಾಧಿಸಿದ್ದಾದರೂ ಏನು? ಯಾವ ಪು... ರ್ಥಕ್ಕಾಗಿ ಈ ಜೀವ ಹತ್ಯೆ? ಜನಪದರು ಹೇಳ... ನಾವು ಒಂದು ಇರುವೆಯನ್ನೂ ಸೃಷ್ಟಿಸಲಾರೆವು; ಅಂದ... ಅಂಥ ಜೀವವನ್ನು ಕೊಲ್ಲುವ ಅಧಿಕಾರ ನಮಗೆಲ್ಲಿ... ಎಂದು. ನೀವು ಹೇಳಬಹುದು; ಈ ಭ್ರಷ್ಟ ವ್ಯವ... ವಿರುದ್ಧ, ಅದಕ್ಕೆ ಕಾರಣರಾದವರ ವಿರುದ್ಧ, ... ಗಮನವನ್ನು ಸೆಳೆಯುವುದಕ್ಕಾಗಿ, ದನಿ ಇಲ್ಲದವರಿಗ... ನೀಡುವುದಕ್ಕಾಗಿ, ಅವಕಾಶ ವಂಚಿತರಿಗೆ ಅ... ಕಲ್ಪಿಸುವುದಕ್ಕಾಗಿ ನಾವು ಬಂದೂಕು ಹಿಡಿದಿದ್ದೇವೆ; ... ದಿನ, ಇನ್ನೆಷ್ಟು ಕಾಲ ಸುಮ್ಮನಿರುವುದು? ಇಲ್ಲ... ಈ ಅನ್ಯಾಯ ನಿಲ್ಲುವುದೆಂದು? ಸಂವಿಧಾನದತ್ತ ಸಮ... ಸೋದರತ್ವ, ಸ್ವಾತಂತ್ರ್ಯ ಸಿಗುವುದೆಂದು? ಇಲ್ಲವಾದ... ಹಟ್ಟಭದ್ರ ವ್ಯವಸ್ಥೆ ಅಲುಗಾಡುತ್ತದೆಯೇನು? ನಮ್ಮ ... ಕೊಂಪೆಗಳತ್ತ, ನಮ್ಮ ದಟ್ಟಾರಣ್ಯಗಳತ್ತ ಅವರ ... ಹರಿಯುತ್ತದೆಯೇನು? ಇಲ್ಲ, ಆದ್ದರಿಂದ ಅವರ ಕೈ... ಗಳಾದ ಸೈನಿಕರನ್ನು, ಪೊಲೀಸರನ್ನು, ಯೋಧರನ್ನು ... ಮಾಡಿ ಅವರ ಗಮನವನ್ನು ಸೆಳೆಯುತ್ತಿದ್ದೇವೆ.

ಇಷ್ಟಕ್ಕೂ ಇನ್ನೊಂದು ಮಾತು. ನಮ್ಮ ಮರ... ನಾವು ನಮ್ಮ ಸಿದ್ಧಾಂತದಂತೆ ಪ್ರಾಣ ಕೊಡಲು ... ಸಿದ್ಧವಾಗಿರುವಾಗ ನಿಮ್ಮದೇನು ಪ್ರಶ್ನೆ ಎಂದು ... ಕೇಳಬಹುದು. ಬಂದೂಕಿನ ಬಾಯಿಂದಲೇ ನಮ್ಮ ... ಬಾಧ್ಯತೆಗಳನ್ನು ಹೊಂದುತ್ತೇವೆ ಎಂದೂ ... ಹೇಳಬಹುದು.


ಆದರೆ ಬಂಧುಗಳೇ, ನೀವು ಬಂದೂಕಿನ ಗುಂಡಿ... ಒತ್ತುವ ಮುನ್ನ ಒಂದುಕ್ಷಣ ಮನುಷ್ಯರಾಗಿ ಯೋ... ನಿಮ್ಮ ದಾಳಿಗಳಿಂದ ಮಡಿಯುವವರೂ ಸಹ ... ಸಮ ಸೋದರರಲ್ಲವೇ? ಅವರಿಗೂ ಸಹ ತಂದೆ ... ಮಡದಿ ಮಕ್ಕಳು ಇರುತ್ತಾರಲ್ಲವೆ? ಅವರೆಲ್ಲ ಶ್ರೀ... ವರ್ಗದಿಂದ ಬಂದವರೇನೂ ಅಲ್ಲ. ಅವರೂ ನಿಮ್ಮ...

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕೆ.ಫಣಿರಾಜ್ 11


ದೃಶ್ಯ ಪ್ರತಿಭೆಯ ಮಾದರಿ

ತನ್ನ 24ನೇ ವಯಸ್ಸಿಂದಲೇ ಸಿನಿಮಾಗಳನ್ನು ನಿರ್ದೇಶಿಸುತ್ತಿರುವ ಬೆಂಡೆಕ್ ಗ್ರಾಫ್ (42), ಇದುವರೆವಿಗು 5 ಕಿರುಚಿತ್ರಗಳು, 4 ಸಾಕ್ಷ್ಯಚಿತ್ರಗಳು ಹಾಗು 6 ಕಥಾಚಿತ್ರಗಳನ್ನು ಮಾಡಿರುವನು. 2002 ಹಾಗು 2012ರಲ್ಲಿ ರ್ಲಿನ್ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದಿರುವ ಬೆಂಡೆಕನ ಹೊಸ ಸಿನಿಮಾಗಳನ್ನು ಕಲಾಸಕ್ತರು ಭರವಸೆ ಇಟ್ಟು ಕಾಯುವಷ್ಟು ಸೃಜಶೀಲ. ವ್ ಡಿಯಾಜ್, ಅಪಿಚಿತ್ಪಾಂಗ್‌ರಂತೆ) ಬೆಂಡೆಕ್ 'ನಿಧಾನಗತಿಯ ಸಿನಿಮಾ' ಲ್ಲೋ ಸಿನಿಮಾ) ಪ್ರಯೋಗದಲ್ಲಿ ತೊಡಗಿರುವವನು. ಘಟನಾವಳಿಗಳ ದೃಕ್-ಶಬ್ದ ಾಲೆಕಟ್ಟುವ ಮೂಲಕ ಸಿನಿಮಾದ ಕಥನಾ ಅಥವ ತಾತ್ವಿಕತೆಯನ್ನು ನಿರೂಪಿಸುವ ಧಾನವು (ಎಪಿಸೋಡಿಕಲ್ ನೆರೆಟಿವ್) ಆಧುನಿಕ ಸಿನಿಮಾ ನಿರ್ದೇಶನದಲ್ಲಿ ಗ ಸಹಜವಾಗಿದೆ. ಒಂದು ಸಾಮಾಜಿಕ ಸನ್ನಿವೇಶ, ಆ ಸನ್ನಿವೇಶದಲ್ಲಿ ಾತ್ರಗಳ ಅಸ್ತಿತ್ವದ ಸ್ಥಿತಿಗತಿಗಳನ್ನು ಸವಿವರವಾಗಿ ಪ್ರೇಕ್ಷಕರ ಬುದ್ಧಿಭಾವಗಳಲ್ಲಿ ಥಾಪಿಸಲು ದೀರ್ಘ ಅವಧಿಯ 'ದೂರ ಮತ್ತು ಮಧ್ಯಮದೂರ' ಸ್ಥಿರ ಕ್ಯಾಮೆರ ಶ್ಯಗಳ (ಲಾಂಗ್ ಅಂಡ್ ಮಿಡ್ ಸ್ಟೇಷನರಿ ಕ್ಯಾಮೆರ ಷಾಟ್ಸ್) ಬಳಕೆ, ಟನಾವಳಿಗಳು ನಡೆಯುವ ಕಾಲಾವಧಿಯನ್ನು ಪ್ರೇಕ್ಷಕರ ಅನುಭವಕ್ಕೆ ತರಲು ೀರ್ಘ ದೃಶ್ಯಾವಳಿಗಳ ರಚನೆ-ಸಂಯೋಜನೆ, ಇವು 'ನಿಧಾನಗತಿಯ ಸಿನಿಮಾ' ಧಾನದ ಮುಖ್ಯ ಲಕ್ಷಣಗಳು. ತನ್ನ ಫಿಲಿಪೈನ್ಸ್ ಸಮಾಜದ ರಾಜಕೀಯ ಹಾಗು ತತ್ಪರಿಣಾಮವಾದ ಜನರ ಬದುಕಿನ ಸ್ಥಿತಿಯನ್ನು ಮರ್ಶೆಗೆ ಒಡ್ಡಲು, ಲವ್ ಡಿಯಾಜ್ 6ರಿಂದ 11 ಸುಗಳಷ್ಟು ದೀರ್ಘ ಅವಧಿಯ ಸಿನಿಮಾಗಳನ್ನು ಮಾಡಿರುವನು. ಆದರೆ ಬೆಂಡೆಕ್ (ಅಪಿಚಿತ್ಪಾಂಗ್‌ನ ಹಾಗೆ) ತನ್ನ ಕಾಲದ ಸಮಾಜದಲ್ಲಿ, ಮನುಷ್ಯರ ಂಬಂಧಗಳ ಸ್ಥಿತಿಯನ್ನು ನಿರೂಪಿಸಲು, ಅರ್ಥಹೀನ ಂಬಂಧಗಳನ್ನು ಅರ್ಥಪೂರ್ಣಗೊಳಿಸುವ ತಾತ್ವಿಕತೆಯ ರಂತರ ಹುಡುಕಾಟಕ್ಕಾಗಿ 'ನಿಧಾನಗತಿ ಸಿನಿಮಾ' ಚನೆಯ ಪ್ರಯೋಗದಲ್ಲಿ ತೊಡಗಿದ್ದವನು; ಪ್ರಸ್ತುತ ಸಿನಿಮಾದಲ್ಲಿ, ಮಗ್ಗಲು ಬದಲಿಸಿ ಅತಿ ಸಮೀಪದ ಹಾಗು ಸಮೀಪದ ದೃಶ್ಯಗಳ (ಎಕ್ಸ್‌ಟ್ರೀಮ್ ಕ್ಲೋಸಪ್ ಮತ್ತು ಕ್ಲೋಸಪ್) ಸಂಯೋಜನೆ ಹಾಗು ಚುರುಕಿನ ಸಂಕಲನಗಳನ್ನು ಬಳಸಿಕೊಂಡು ಹೊಸ ಬಗೆಯ ನಿರೂಪಣೆಗೆ ಕೈ ಹಾಕಿದ್ದಾನೆ.



ಸಿನಿಮಾದ ಕಥಾ ಸಾರಾಂಶ

ಕತೆ ಅಂತ ಇರೋದು ಒಂದೇ ಎಳೆ; ಆ ಎಳೆಯಲ್ಲಿ ಬೆಂಡೆಕ್ ಯುವತಿ ಯಾಗಿರುವ ತಾಯಿ ರೆಬೆಕ ತನ್ನ ಏಳು ವರ್ಷದ ಮಗ ಡಾನಿಗೆ ಬದುಕಿನ ಪಾಠ ಕಲಿಸುವ ದೃಶ್ಯಕತೆ ಹೆಣೆದಿರುವನು. ಚಿತ್ರಕತೆಯೇ ಸಿನಿಮಾದ ಜೀವಾಳವಾಗಿ, ಆದರಿಂದ ಹೀರಿ ಗುಟುಕು ಕಥನಾರಸ ಕೊಡಬಹುದು: ರೆಬೆಕಳ ಬಾಲ್ಯ ಸುಖದಾಯವಾದುದಲ್ಲ, ರೆಬೆಕಗೆ ಲೋಕ ತಿಳಿಯುವ ಮೊದಲೇ, ತಂದೆ ಸಂಸಾರ ತೊರೆದು ದೇಶಾಂತರ ಹೋಗಿಬಿಟ್ಟಿದ್ದಾನೆ. ತನ್ನದೇ ವಿಷಾದಮಯ ಬದುಕಿನಲ್ಲಿ ಮಗ್ನಳಾಗಿ, ಇಳಿವಯಸ್ಸಿನಲ್ಲಿ ತಾಯಿ ಮಾರಕರೋಗದಿಂದ ತೀರಿ ಹೋಗಿದ್ದಾಳೆ. ಹಂಗೆರಿಯ ರಾಜಧಾನಿ ಬುಡಾಪೆಸ್ಟಿನ ಹೊರವಲಯದಲ್ಲಿ, ಕಾಡುಗಳ ಮಧ್ಯೆ ಇರುವ 'ಲಿಲ್ಲಿ ಲೇನ್'ನ ತನ್ನ ತಾಯಿಯ ಶವವೋ ಅಥವಾ ಅವಳ ಸಂಸ್ಕಾರದ ನಂತರ ಉಳಿದಿರುವ ಎಲುಬಿನ ಚೂರುಗಳೋ, ಆ ಹಳೆ ಮನೆಯಲ್ಲಿ ಇರಬಹುದು ಎಂದು ರೆಬೆಕಗೆ ಅನುಮಾನ. ರೆಬೆಕಳ ಗಂಡನೂ ಅವಳಿಂದ ಬೇರೆಯಾಗಿರುವನು. ಡಾನಿ ಕೆಲ ಕಾಲ ರೆಬೆಕಳ ಜೊತೆ, ಉಳಿದ ಕಾಲ ಅವಳ ವಿಚ್ಛೇದಿತ ಗಂಡನ ಜೊತೆ ಬದುಕುವ ಬಾಲಕ. ರೆಬೆಕಳ ಅಸುಖಿ ಸಂಸಾರದ ಬಾಲ್ಯ ಮನಃಪಟಲದ ಮೇಲೆ ಒಂದು ಹೊರೆಯಾಗಿ ಕೂತಿದೆ; ಆ ಭೂತವನ್ನು ಉಚ್ಚಾಟನೆ ಮಾಡಿಕೊಂಡು, ತನ್ನ ತಂದೆಯನ್ನು ಹುಡುಕಿಕೊಳ್ಳುವುದು ಅವಳ ಬದುಕಿನ ತುರ್ತು ಆಯ್ಕೆ; ತನ್ನ ಬಾಲ್ಯದ ದುಸ್ವಪ್ನವನ್ನು ಮೀರುವಾಗಲೇ ಡಾನಿಯನ್ನು ಲೋಕದ ಕೇಡುಗಳ ಅರಿವುಳ್ಳ ಗಟ್ಟಿಗನನ್ನಾಗಿಸುವ ಸಂಕಲ್ಪ ಅವಳದ್ದು; ಹೀಗಾಗಿ ಅವಳು ಮಗನಿಗೆ ಮಲಗುವಾಗ ಸಿಹಿ ಲಾಲಿ ಹಾಡೋದಿಲ್ಲ, ರಮ್ಯ ಕತೆಗಳನ್ನು ಹೇಳೋದಿಲ್ಲ; ಬದಲಿಗೆ ತನ್ನ ಬಾಲ್ಯದ ದುಸ್ವಪ್ನವನ್ನು ಒಂದು ವಿಲಕ್ಷಣ ಬೇಟೆಯ ಕತೆಯಾಗಿ ಕಟ್ಟಿ, ಭಯದ ಸೆಳಕು ಹೊಕ್ಕಳು ಹಾಯುವಂತೆ ಪಿಸುಮಾತಿನಲ್ಲಿ ಹೇಳಿ ಮಲಗಿಸುವಳು-ಒಬ್ಬಂಟಿಯಾಗಿ ಹೋಗಲು ಬೆದರಬಹುದಾದ ಕಾಡು ಕಾಲುದಾರಿಗಳಲ್ಲಿ ಕರೆದೊಯ್ಯುವಳು-ತಾವುಂಟೋ ಮೂರ್ಲೋಕವುಂಟೋ ಎಂಬಂತೆ ನಗರದಲ್ಲಿ ಮನುಷ್ಯ ವಾಸನೆಯನ್ನು ಬಿಟ್ಟುಕೊಡದಂತೆ ಜನ ಹರಿದಾಡುವ ಜನರ ಮಧ್ಯೆಕೊಂಡು ಹೋಗುವಳು-ರೆಬೆಕ ಡಾನಿಗೆ ಬದುಕಿನ ಕತ್ತಲ ಮೂಲೆಗಳಲ್ಲಿ ಲಗ್ಗೆ ಹಾಕಿ ಸಾವಧಾನದಿಂದ ಮನುಷ್ಯ ಸಂಬಂಧಗಳ ಬದುಕಿನ ಒಳನೋಟ ಪಡೆಯುವಂತೆ ಮಾಡುವಳು. ಆ ಅರಿವು ದಕ್ಕಿದಾಕ್ಷಣ, ಈಗ ರೆಬೆಕ, ಡಾನಿ ಇಬ್ಬರು ಮಕ್ಕಳಾಗಿ ಬಿಡುವರು; ರೆಬೆಕಳ ತಂದೆಯನ್ನು ಹುಡುಕಿ ಹೋಗುವರು. ಸಿಕ್ಕಾಗ ಆ ತಂದೆ, ಮಗಳಿಗೂ, ಮೊಮ್ಮಗನಿಗೂ ಭದ್ರತೆಯನ್ನೇನೂ ಕೊಡದೆ, ಬದುಕಿನ ಅನಿಶ್ಚತತೆಯನ್ನೇ ಒಂದು ವಿಲಕ್ಷಣ ಯಕ್ಷ ಕತೆಯಂತೆ ಕೇಳಬಲ್ಲ ಸ್ಥಿತಿಗೆ ಕೈಮರವಾಗುವನು.



ಈ ಸಿನಿಮಾ ಯಾಕೆ ಮುಖ್ಯ?

ಆಡು ನುಡಿಯ ಶಬ್ದ ಶಕ್ತಿ ಅರಿತು, ಪ್ರತಿಮೆಗಳನ್ನು ಕೆತ್ತಿ ಸಂಯೋಜಿಸುವ ಕಸುಬು ಒಂದು ಉತ್ತಮ ಪದ್ಯಕ್ಕೆ ಹೇಗೆ ಪ್ರಾಣದಾಯಕವೋ ಹಾಗೆಯೇ ಸಿನಿಮಾಕ್ಕೆ ಬಿಗಿ ಬಂಧದ ಚಿತ್ರಕತೆ ಹಾಗು ದೃಶ್ಯ ಸಂರಚನೆ. ಕವಿ ಹೇಗೆ ಭಾಷೆಯ ಶಬ್ದ ಶಕ್ತಿ ಹಾಗು ಪ್ರತಿಮೆಗಳ ಸಂವೇದನೆ ಸಂವಹನ ಶಕ್ತಿಯಷ್ಟರಿಂದ ಮಾತ್ರವೇ ಲೋಕದ ಸಕಲ ಕಷ್ಟಸುಖಗಳ ದರ್ಶನಕ್ಕೆ ಹೊರಡುವಂತೆ, ಪ್ರತಿಭಾವಂತ ಸಿನಿಮಾ ನಿರ್ದೇಶಕ ತನ್ನ ಸಂವೇದನೆಯನ್ನು ಪ್ರೇಕ್ಷಕರಿಗೆ ಸಂವಹಿಸಲು ನೆಚ್ಚುವುದು ದೃಶ್ಯ ಸಂಯೋಜನೆಯನ್ನು ಮಾತ್ರವೇ. ರೆಬೆಕ ತನ್ನ ಬಾಲ್ಯದ ದುಸ್ವಪ್ನಗಳಿಂದ ಬಿಡುಗಡೆ ಪಡೆಯುವ ಯತ್ನದಲ್ಲೇ ಹಾಗು ಡಾನಿಗೆ ಲೋಕ ದರ್ಶನ ಮಾಡಿಸುವ ವಿಲಕ್ಷಣ ಬಗೆಯನ್ನು ದೃಶ್ಯ ಶಕ್ತಿಯನ್ನು ಬಳಸಿ ಮಾತ್ರವೇ ಹೇಳುವ ಬೆಂಡೆಕನ ಕಸುಬುದಾರಿಕೆ, ಸಿನಿಮಾ ಕಲೆಯ ಘನತೆಯನ್ನು ಎತ್ತಿ ಹಿಡಿದಿದೆ; ಯುರೋಪ್ ಹಾಗು ಏಶಿಯಾಗಳ ಯುವ ನಿರ್ದೇಶಕರು ಹಾಲಿವುಡ್ಡಿನ ಯಜಮಾನಿಕೆಗೆ ತಮ್ಮ ಸಿನಿಮಾ ಕಲೆಯ ಶ್ರದ್ಧೆಯ ಮೂಲಕ ಸವಾಲು ಒಡ್ಡುತ್ತಿದ್ದಾರೆ-ಬೆಂಡೆಕ್‌ನ ಈ ಬಗೆಯ ಸಿನಿಮಾ ಅಂಥದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

ತಂದೆಯ ಸಂವೇದನೆಯ ಆಯ್ಕೆಗಳ ಮೂಲಕ ಸಂಸಾರ ಸಂಬಂಧವನ್ನು ನಿರೂಪಿಸದೇ (ತಂದೆಯ ಪಾತ್ರ ಬರಿ ಚ್ಯಾಟ್ ಮೆಸೇಜುಗಳ ಮೂಲಕ ಮಾತ್ರವೇ ದಾಖಲಾಗುವುದು), ಬೆಂಡೆಕ್ ರೆಬೆಕಳ ವ್ಯಕ್ತಿತ್ವದ ಧೀಮಂತಿಕೆ ಹಾಗು ಮಾನಸಿಕ ತುಮುಲದಲ್ಲೂ ತನ್ನ ಮಗನ ವ್ಯಕ್ತಿತ್ವವನ್ನು ಭಿನ್ನ ರೀತಿಯಲ್ಲಿ ಕಟ್ಟುವ ಅವಳ ಛಾತಿ, ವಿಲಕ್ಷಣ ಸೂಕ್ಷ್ಮಜ್ಞತೆಗಳನ್ನು ಪ್ರೇಕ್ಷಕರಿಗೆ ಮುಟ್ಟಿಸುವ ಉಮೇದಿನಲ್ಲಿ ಬೆಂಡೆಕ್ ಪ್ರತಿಯೊಂದು ದೃಶ್ಯವನ್ನು ಕಟ್ಟಿರುವುದು 'ಲಿಲ್ಲಿ ಲೇನ್'ನನ್ನು ವಿಶಿಷ್ಟ ಸಿನಿಮಾವಾಗಿಸಿದೆ. ■

ಡಕೂಲಿಕಾರ ಹಾಗೂ ರೈತ ಮಕ್ಕಳು. ಅವರ ಕುಟುಂಬ ರ್ಗವನ್ನು ಸಾಕುವುದಕ್ಕಾಗಿ ತಾನೆ ಇವರು ಸೈನ್ಯಕ್ಕೆ ಸೇರಿದ್ದು? ಕುಟುಂಬಗಳಿಗೆ ಆಧಾರವಾದ ಇವರು ಸತ್ತರೆ ಅವರ ಬನಿಯನ್ನು ಒರೆಸುವವರಾರು? ವ್ಯವಸ್ಥೆಯಲ್ಲಿ ಭ್ರಷ್ಟತೆ ದೆ, ನಿಜ. ಅದಕ್ಕೆ ಕಾರಣರಾದವರು ಎಲ್ಲೋ ಆರಾಮವಾಗಿ ತ್ತಾರೆ. ನೀವೀಗ ಯಾರ ಮೇಲಿನ ಸಿಟ್ಟನ್ನೊ ಇನ್ನಾರ ೀಲೋ ತೀರಿಸಿಕೊಳ್ಳುತ್ತಿದ್ದೀರಲ್ಲವೆ? ಇದು ಯಾವ ಯ? ಇನ್ನೊಮ್ಮೆ ಪರ್ಯಾಲೋಚಿಸಿ. ಈಗ ಕಾಲಬದ ಗುತ್ತಿದೆ. ನೀವು ಯಾರ ಪರವಾಗಿ ನಿಂತು ಹೋರಾಟ ಾಡುತ್ತಿರುವಿರೊ ಆ ಹೋರಾಟದಿಂದ ಅವರ ದುಕಾದರೂ ನೆಮ್ಮದಿಯಿಂದ ಇರಬಲ್ಲದೆ? ಇಲ್ಲ. ನಿಮ್ಮ ಡಗುದಾಣಗಳನ್ನು ಹುಡುಕುತ್ತ ಬರುವ ಪೊಲೀಸರು ವರಿಗೆ ಕಿರುಕುಳ ಕೊಡುತ್ತಾರೆ; ನೀವೂ ಸಹ ತಮ್ಮ ಷ್ಯವನ್ನು ಅವರಿಗೆ ತಿಳಿಸಬೇಡಿರೆಂದು ಬೆದರಿಸುತ್ತೀರಿ. ಯಸ್ಸಿಗೆ ಬಂದ ಅವರ ಮಕ್ಕಳನ್ನೂ ಸಹ ನೀವು ದೊಯ್ಯುತ್ತೀರಿ; ಈಗ ಅವರ ಪಾಡೇನು? ಅತ್ತ ದರಿ ತ್ತ ಪುಲಿ ಎಂಬಂತಾಗುತ್ತದೆಯಲ್ಲವೇ?

ಕಾಮ್ರೆಡ್ಸ್, ಈ ಭ್ರಷ್ಟ ವ್ಯವಸ್ಥೆಗೆ ಕಾರಣರಾದವರು ಮ್ಮ ಕೈಗಂತೂ ಸಿಗಲಾರರು. ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಾ ಕೋಟೆಯಲ್ಲಿ ಅವರು ಕೂದಲೂ ಕೊಂಕದಂತಿ ತ್ತಾರೆ. ಆದರೆ ಸಾಯುವವರು ಮಾತ್ರ ಪೊಲೀಸರು, ನಿಕರು. ಇವರನ್ನು ಹತ್ಯೆ ಮಾಡಿದರೆ ಏನೂ ಯೋಜನವಿಲ್ಲ, ಕೇವಲ ಹಿಂಸೆಗೆ ಹಿಂಸೆ; ಕೊಲೆಗೆ ಕೊಲೆ. ರಿ ಹಾಕಿದಂತೆ. ಹಿಂದೆ ಅಂಗುಲಿಮಾಲನಿಗೆ ತಿಳಿಯಹೇಳಿ ದಾರಿಗೆ ತಂದ ಬುದ್ಧ ಗುರುವೂ ಈಗ ಇಲ್ಲ; ಚಂಬಲ್ ವೆ ಕಂದರಗಳಲ್ಲಿದ್ದ ಡಕಾಯಿತರನ್ನು ಶರಣಾಗಿಸಿದ ಪ್ರಕಾಶ ನಾರಾಯಣರಂಥವರೂ ಇಲ್ಲ; ಆದರೆ ಶ್ರೀಲಂಕಾದಲ್ಲಿ ತಮಿಳು ಹುಲಿ(ಈಳಂ)ಗಳನ್ನು ನೆಲಕಚ್ಚಿಸಿದ ಇತಿಹಾಸ ಮಾತ್ರ ಇನ್ನೂ ಕೆಂಪಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹದಗೆಟ್ಟಿರುವುದೇನೋ ನಿಜ. ಆದರೂ ಅದನ್ನು ಬಿಟ್ಟು ಅನ್ಯ ಬೇರೆ ಮಾರ್ಗ ಇಲ್ಲ. ಇದು ಲೋಕವಿದಿತ.

ಆದ್ದರಿಂದ ನಕ್ಸಲ್ ಬಂಧುಗಳೇ, ಮತ್ತೊಮ್ಮೆ ನಿಧಾನಕ್ಕೆ ಯೋಚಿಸಿ ನೋಡಿ. ಈಗ ಬಂದೂಕು ಹಿಡಿದು ಪ್ರತಿಭಟಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಇದೂ ನಿಮಗೆ ಈಗಾಗಲೇ ಮನವರಿಕೆಯಾಗಿರಬಹುದು. ಆದರೂ ಅದೇ ಹಿಂಸಾಮಾರ್ಗದಲ್ಲಿ ಹೋಗುತ್ತಿದ್ದೀರಿ. ಇನ್ನಾದರೂ ಹಿಂಸಾ ಹೋರಾಟಕ್ಕೆ ವಿದಾಯ ಹೇಳಿ; ನಿಮ್ಮ ಅಡಗುದಾಣಗಳಿಂದ ಹೊರಬಂದು, ಸಾರ್ವಜನಿಕವಾಗಿ ಕಾಣಿಸಿಕೊಂಡು ಮುಖ್ಯವಾಹಿನಿಯೊಂದಿಗೆ ಬೆರೆತು, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವಿರೆಂದು ಆಶಿಸೋಣವೆ? ಉದಾಹರಣೆಗೆ: ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ ಶತಾಯುಷಿ ಎಚ್.ಎಸ್. ದೊರೆಸ್ವಾಮಿಯವರ ಸಲಹೆ ಸೂಚನೆಯಂತೆ ಇಲ್ಲಿ ಕೆಲವರು ಈಚೆಗೆ ಶರಣಾಗಿ ಬಂದು ಮುಖ್ಯವಾಹಿನಿಗೆ ಸೇರಿಕೊಂಡಿರುವುದು ಸಹ ನಿಮಗೆ ತಿಳಿದಿರಬೇಕು. ಇದು ಅಹಿಂಸಾತ್ಮಕ ಹೋರಾಟದ ಒಂದು ಮಾದರಿ. ಇನ್ನು ಪ್ರಭುತ್ವವೂ ಸಹ ನಕ್ಸಲ್ ಸಮಸ್ಯೆ ಉಲ್ಬಣಿಸಿರುವ ಪ್ರದೇಶಗಳತ್ತ ಗಮನಹರಿಸಿ, ಅವರ ಪಾರಂಪರಿಕ ನೆಲೆಗಳನ್ನು ಸಂರಕ್ಷಿಸಿ, ಅವರ ಗೌರವಾನ್ವಿತ ಸಂಸ್ಕೃತಿಯನ್ನು ಮನ್ನಿಸಿ, ಆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ನಕ್ಸಲ್ ಚಳವಳಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು. ಹೀಗೆ ಪ್ರಜಾತಾಂತ್ರಿಕ ಮೌಲ್ಯಗಳ ನೆಲೆಯಲ್ಲಿಯೇ ಸರ್ಕಾರವೂ ಸಹ ಅಹಿಂಸಾತ್ಮಕವಾಗಿ ಮುನ್ನಡೆಯುವುದು ಅಪೇಕ್ಷಣೀಯ.

- ಪ್ರೊ. ಶಿವರಾಮಯ್ಯ, ಬೆಂಗಳೂರು

ಛತ್ತೀಸ್‌ಗಡದಲ್ಲಿ ಬಡ ಶೋಷಿತ ನಕ್ಸಲರು 26 ಬಡ ಸಿಆರ್‌ಪಿಎಫ್ ಜವಾನರನ್ನು ಕೊಂದರು. ಎರಡೂ ಕಡೆ ಸತ್ತವರು ಬಡವರೇ ಆಗಿರುವರು. ಸತ್ತ ಜವಾನರಲ್ಲಿ ಒಬ್ಬನೇ ಒಬ್ಬ ಮೇಲ್ಜಾತಿಯವನಿಲ್ಲ, ಆದರೆ ಒಬ್ಬ ಮುಸ್ಲಿಮ ನಿದ್ದಾನೆ. ಛತ್ತೀಸ್‌ಗಡದ ಅರಣ್ಯದ ಅದಿರು ನಿಕ್ಷೇಪದ ಲಾಭ ಪಡೆಯುತ್ತಿರುವ ಉದ್ಯಮಿಗಳು ಮತ್ತು ರಾಜಕಾರಣಿಗಳು ಮಾತ್ರ ಸೌಖ್ಯವಾಗಿ ಇದ್ದಾರೆ. ಛತ್ತೀಸ್‌ಗಡದಲ್ಲಿ ನಕ್ಸಲಿಸಂ ಮೊಟ್ಟ ಮೊದಲು ಹುಟ್ಟಿದ್ದು ಹೇಗೆ ಎಂಬ ಜಿಜ್ಞಾಸೆ ಅಗತ್ಯವಿದೆ.

ಇವರು ಯಾರೂ ಹೊರಗಿನಿಂದ ಬಂದವರಲ್ಲ, ಎಲ್ಲಾ ನಕ್ಸಲರೂ ಸ್ಥಳೀಯ ಬುಡಕಟ್ಟು ಜನಾಂಗದವರೇ ಆಗಿರುವರು. ಭಾರಿ ಅಲ್ಯೂಮಿನಿಯಂ ಬಾಕ್ಸೈಟ್ ಮತ್ತು ಚಿನ್ನದ ಅದಿರಿನ ನಿಕ್ಷೇಪವಿರುವ ಅಲ್ಲಿಯ ಅರಣ್ಯ ಪ್ರದೇಶವನ್ನು ಮಾರ್ವಾಡಿ ಕಂಪನಿಗಳಿಗೆ ಕವಡೆ ಬೆಲೆಗೆ ಲೀಸ್ ಮೇಲೆ ಕೊಡಲು ಹಿಂದಿನ ಕಾಂಗ್ರೆಸ್ ಸರಕಾರ ಇಲ್ಲಿಯ ಬಡ ಬುಡಕಟ್ಟು ಜನಾಂಗದವರನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸಿತು. ಆಗ ಕೆಲವು ಯುವಕರು ವಿರೋಧಿಸಿದ್ದಕ್ಕೆ ಅವರನ್ನು ಪೊಲೀಸರ ಮುಖಾಂತರ ಭೀಕರವಾಗಿ ನಕಲಿ ಎನ್‌ಕೌಂಟರ್ ಮೂಲಕ ಕೊಲ್ಲಿಸಲಾಯಿತು. ಅಷ್ಟೇ, ಅಲ್ಲ ಸಲ್ವಾ-ಜುಡಮ್ ಎಂಬ ರೌಡಿಗಳ ಸಂಘಟನೆಯನ್ನು ಸರಕಾರವೇ ಕಟ್ಟಿ ಬುಡಕಟ್ಟು ಜನಾಂಗದ ಹೆಂಗಸು ಮಕ್ಕಳ ಮೇಲೆಯೂ ಭೀಕರ ಅತ್ಯಾಚಾರ ಮಾಡಿಸಲಾಯಿತು. ಇದಕ್ಕೆ ಪ್ರತಿರೋಧವಾಗಿ ಸಿಡಿದೆದ್ದ ಆದಿವಾಸಿ ಯುವಕರಿಂದ ಅಲ್ಲಿ ನಕ್ಸಲಿಸಂ ಹೆಚ್ಚು ಪ್ರಬಲಗೊಂಡಿತು.


ದೊಡ್ಡ ಉದ್ಯಮಿಗಳಿಗೆ ಪ್ರಾಕೃತಿಕ ಸಂಪತ್ತು ಲೂಟಿ ಮಾಡಲು ಅನುಕೂಲ ಮಾಡಿಕೊಡಲು ಸರಕಾರವೇ ಬುಡಕಟ್ಟು ಜನರ ಮೇಲೆ ಅನ್ಯಾಯ ಮಾಡುವಾಗ ನಗರವಾಸಿ ವಿದ್ಯಾವಂತರಲ್ಲಿ ಯಾರಿಗೂ ಬೇಜಾರು ಆಗಲೇ ಇಲ್ಲ. ಕಾರಣ ಎಲ್ಲಾ ಇಂಗ್ಲಿಷ್-ಹಿಂದಿ ಪತ್ರಿಕೆಗಳನ್ನು ಉದ್ಯಮಿಗಳು ತಮ್ಮ ಜೇಬಿನಲ್ಲಿ ಇಟ್ಟುಕೊಂಡಾಗಿತ್ತು, ಹಾಗಾಗಿ ಎಲ್ಲ ಪತ್ರಿಕೆಗಳೂ ಕಾಶ್ಮೀರಿ ಭಯೋತ್ಪಾದಕರಂತೆ ನಕ್ಸಲರನ್ನು ಕೂಡ ದೇಶದ್ರೋಹಿಗಳು ಎಂಬಂತೆ ಬಿಂಬಿಸ ತೊಡಗಿದವು. ಬುಡಕಟ್ಟು ಜನರ ಹಕ್ಕಿಗಾಗಿ ಹೋರಾಡುತ್ತಿರುವವರೇ ನಕ್ಸಲರು ಎಂಬ ಸತ್ಯ ಯಾರೂ ಗಮನಿಸಲಿಲ್ಲ.

ಬಿಜೆಪಿಯವರು ಅಧಿಕಾರಕ್ಕೆ ಬಂದಮೇಲೆ ಈ ಬುಡಕಟ್ಟು ಜನರ ಸಮಸ್ಯೆಗಳನ್ನು ಇನ್ನಷ್ಟು ಉಲ್ಬಣಗೊಳಿಸಿದರು. ಆದಿವಾಸಿಗಳ ಅಭಿವೃದ್ಧಿಗಾಗಿ ವಿದೇಶಿ ದಾನಿಗಳಿಂದ ಇಲ್ಲಿಯ ಎನ್‌ಜಿಓಗಳಿಗೆ ಬರುತ್ತಿದ್ದ ದೇಣಿಗೆಯನ್ನು ಏನೇನೋ ನೆವ ಒಡ್ಡಿ ಬಿಜೆಪಿ ಸರಕಾರ ಸಂಪೂರ್ಣ ನಿಲ್ಲಿಸಿತು. ಬುಡಕಟ್ಟು ಜನರನ್ನು 'ಆದಿವಾಸಿಗಳು' ಎಂದು ಕರೆಯಬಾರದು, ಅವರನ್ನ 'ವನವಾಸಿ'ಗಳೆಂದು ಕರೆಯಬೇಕು ಎಂಬ ಶಬ್ದಗಳ ಕಸರತ್ತನ್ನು ಹೊಸ ಸರಕಾರ ನಡೆಸಿತು. ಅದಕ್ಕೆ ಕಾರಣ 'ಆದಿ'ವಾಸಿ ಎಂದು ಕರೆದರೆ ಅವರೇ ಇಲ್ಲಿಯ 'ಮೂಲನಿವಾಸಿಗಳು' ಹಾಗೂ ವೈದಿಕರೆಲ್ಲಾ ಮಧ್ಯ ಏಷಿಯಾದಿಂದ ವಲಸೆ ಬಂದ ಬರ್ಬರ ಆರ್ಯ ಜನಾಂಗದವರು ಎಂದು ಅಧಿಕೃತವಾಗಿ ಒಪ್ಪಿಕೊಂಡಂತೆ ಆಗುತ್ತದೆ ಎಂಬುದು ಆರೆಸ್ಸೆಸ್ ಮಂಡೆಗಳ ಕುತ್ಸಿತ ಲೆಕ್ಕಾಚಾರ.

ಮಾತುಕತೆಯ ಮೂಲಕ ಪರಿಹರಿಸಬೇಕಿರುವ ಈ ಸಮಸ್ಯೆಯನ್ನು ಬಂದೂಕಿನ ಮೂಲಕ ಸೇಡು ತೀರಿಸುವುದಾಗಿ ಪ್ರಧಾನಿ ಮೋದಿ ಮತ್ತು ಗೃಹಮಂತ್ರಿ ರಾಜನಾಥ ಸಿಂಗ್ ಬೊಬ್ಬಿರಿಯುತ್ತಿರುವುದು ದುರದೃಷ್ಟಕರ. ಆದಿವಾಸಿಗಳ ನೆಲೆಗಳನ್ನು ಅವರಿಗೆ ಮರಳಿ ಕೊಟ್ಟರೆ ನಕ್ಸಲ್ ಸಮಸ್ಯೆ ಸುಲಭವಾಗಿ ಪರಿಹಾರವಾಗುತ್ತದೆ. ಮೋದಿಯ ನೋಟು ರದ್ದತಿಯಿಂದ ನಕ್ಸಲಿಸಂ ಸಂಪೂರ್ಣ ನಿರ್ನಾಮವಾಗಿದೆ ಎಂದು ಬಡಾಯಿ ಕೊಚ್ಚಿದವರು ಈಗ ಎಲ್ಲಿದ್ದಾರೋ.


- ಹರೀಶ್ ಎಂ ರೈ, ಉಡುಪಿ





Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 24-05-2017 RNI No.

ಕಿರಿಕ್ ಸಂಯುಕ್ತ...




ತಮಿಳು ಸಿನಿಮಾ ರಂಗದಲ್ಲಿ ಬಂಪರ್ ಆಫರ್ ಬಂತು ಅನ್ನುವ ಕಾರಣಕ್ಕಾಗಿ ಕನ್ನಡದ ಎರಡು ಸಿನಿಮಾಗಳಿಗೆ ಕೈಕೊಟ್ಟು ಸಿನಿಮಾರಂಗದ ಆಕ್ರೋಶಕ್ಕೆ ಗುರಿಯಾದವರು ಸಂಯುಕ್ತ ಹೆಗಡೆ. 'ಕಿರಿಕ್ ಪಾರ್ಟಿ' ಸಿನಿಮಾದ ಮೂಲಕ ಚಿತ್ರರಂಗಕ್ಕೆ ಪರಿಚಯವಾದ ಈ ಹುಡುಗಿ, ಕನ್ನಡದಲ್ಲಿ 'ಕಾಲೇಜ್ ಕುಮಾರ್' ಮತ್ತು 'ವಾಸು' ಎಂಬೆರಡು ಚಿತ್ರಗಳಿಗೆ ಸಹಿ ಮಾಡಿದ್ದರು. ಇದೇ ವೇಳೆಯಲ್ಲಿ ತನ್ನೊಂದಿಗೇ ಸಿನಿಮಾ ರಂಗಕ್ಕೆ ಕಾಲಿಟ್ಟ ರಶ್ಮಿಕಾ ಮಂದಣ್ಣ ನೆರೆಯ ರಾಜ್ಯದ ಸಿನಿಮಾರಂಗಕ್ಕೆ ಭರ್ಜರಿಯಾಗಿ ಎಂಟ್ರಿ ಕೊಟ್ಟರು. ತನಗೆ ಅಂತಹ ಆಫರ್ ಸಿಗಲಿಲ್ಲ ಅನ್ನುವ ಕೊರಗು ಸಂಯುಕ್ತಗಿತ್ತು. ಎರಡು ಕನ್ನಡ ಸಿನಿಮಾಗಳನ್ನು ಒಪ್ಪಿಕೊಂಡ ನಂತರ ಇವರಿಗೆ ತಮಿಳಿನಲ್ಲಿ ಆಫರ್ ಬಂತು. ಸಿಕ್ಕ ಅವಕಾಶವನ್ನು ಮಿಸ್ ಮಾಡಬಾರದು ಅಂತ ಕನ್ನಡದ ಎರಡು ಸಿನಿಮಾಗಳಿಗೆ ಕೈಕೊಡಲು ಮುಂದಾದರು. ನಿರ್ಮಾಪಕರು ಈ ಹುಡುಗಿಗೆ ಸರಿಯಾದ ಪಾಠವನ್ನೇ ಕಲಿಸಿದ್ದಾರೆ. ಒಪ್ಪಿಕೊಂಡ ಸಿನಿಮಾವನ್ನು ಮುಗಿಸಿ ಕೊಡದೇ ಇದ್ದರೆ, ಕನ್ನಡ ಸಿನಿಮಾರಂಗದಲ್ಲಿಯೇ ಬ್ಯಾನ್ ಮಾಡುವ ಎಚ್ಚರಿಕೆ ಕೊಟ್ಟಿದ್ದಾರೆ. ಅಲ್ಲದೇ, ಈಗಾಗಲೇ ಫೋಟೋ ಶೂಟ್ ಮತ್ತು ಕಾಸ್ಟ್ಯೂಮ್‌ಗೆ ಖರ್ಚಾಗಿರುವ ಹಣವನ್ನೂ ಕೊಡುವಂತೆ ಕೇಳಿದ್ದಾರೆ. ಇದರಿಂದಾಗಿ ಹೆದರಿದ ಸಂಯುಕ್ತ ಎರಡೂ ಸಿನಿಮಾಗಳಲ್ಲಿ ನಟಿಸುವುದಾಗಿ ಹೇಳಿದ್ದಾರೆ. ಆದರೆ, 'ವಾಸು' ಸಿನಿಮಾದ ನಿರ್ಮಾಪಕ ಕಂ ನಾಯಕ ಅನೀಶ್ ಅದನ್ನು ಒಪ್ಪದೇ, ತಮ್ಮ ಸಿನಿಮಾಗೆ ಹೊಸ ಹುಡುಗಿಯನ್ನು ಆಯ್ಕೆ ಮಾಡಿಕೊಂಡು ಶೂಟಿಂಗ್ ನಡೆಸಿದ್ದಾರೆ. "ಸಂಯುಕ್ತ ಒಲ್ಲದ ಮನಸ್ಸಿನಿಂದ ಸಿನಿಮಾ ಒಪ್ಪಿಕೊಂಡು ಬಂದರೆ, ಅವರಿಂದ ನಟನೆ ತೆಗೆಸಲು ಸಾಧ್ಯವಿಲ್ಲ ಹಾಗಾಗಿ ಅವರು ಬೇರೆ ಭಾಷೆಯ ಸಿನಿಮಾಗಳನ್ನೇ ಮಾಡಲಿ" ಎಂದು ಹಾರೈಸಿದ್ದಾರೆ. ತಾವು ಮಾಡಿಕೊಂಡ ಎಡವಟ್ಟಿನಿಂದಾಗಿ ಸಂಯುಕ್ತ ಕನ್ನಡದ ಒಂದು ಸಿನಿಮಾವನ್ನೂ ಕಳೆದುಕೊಂಡಿದ್ದಾರೆ.

'ಬಾಹುಬಲಿ' ಸೆಟ್‌ನಲ್ಲಿ ದರ್ಶನ್

'ಬಾಹುಬಲಿ' ಸಿನಿಮಾದ ಶೂಟಿಂಗ್ ಸೆಟ್‌ನಲ್ಲಿ ದರ್ಶನ್ ಕಾಣಿಸಿಕೊಂಡಿರುವ ಸುದ್ದಿ ತಡವಾಗಿ ಬೆಳಕಿಗೆ ಬಂದಿದೆ. 'ಬಾಹುಬಲಿ' ಚಿತ್ರಕ್ಕೂ ದರ್ಶನ್‌ಗೂ ಏನು ಸಂಬಂಧ ಎಂಬ ಪ್ರಶ್ನೆ ಕೂಡ ಎದ್ದಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ದರ್ಶನ್ 'ಕುರುಕ್ಷೇತ್ರ' ಸಿನಿಮಾದಲ್ಲಿ ದುರ್ಯೋಧನನ ಪಾತ್ರ ನಿರ್ವಹಿಸುತ್ತಿದ್ದಾರೆ. ಈ ಪಾತ್ರದ ಫೋಟೋ ಶೂಟ್ ಹೈದರಾಬಾದ್‌ನ ರಾಮೋಜಿರಾವ್ ಫಿಲ್ಮ್ ಸಿಟಿಯಲ್ಲಿ ನಡೆದಿದೆ. ಅಲ್ಲಿಯೇ 'ಬಾಹುಬಲಿ' ಸೆಟ್ ಕೂಡ ಇದೆ. ಈ ಸೆಟ್‌ನಲ್ಲಿಯೇ ಕುರುಕ್ಷೇತ್ರದ ನಿರ್ದೇಶಕ ನಾಗಣ್ಣ ಕಾಸ್ಟ್ಯೂಮ್ ಮತ್ತು ಮೇಕಪ್ ಟೆಸ್ಟ್ ಮಾಡಿದ್ದಾರಂತೆ. ಈ ಶೂಟಿಂಗ್‌ನಲ್ಲಿ ದರ್ಶನ್ ಪಾಲ್ಗೊಂಡಿದ್ದಾರೆಂಬ ಮಾಹಿತಿ ಇದೆ.

ಅಂದಹಾಗೆ 'ಕುರುಕ್ಷೇತ್ರ' ಕನ್ನಡದ ಭಾರೀ ಬಜೆಟ್‌ನ ಸಿನಿಮಾ.



ದರ್ಶನ್‌ರ ಐವತ್ತನೆಯ ಚಿತ್ರವಿದು. ಅಲ್ಲದೇ ಕನ್ನಡದ ಟಾಪ್ ನಟರು ತಾರಾಗಣದಲ್ಲಿ ಇರಲಿದ್ದಾರೆ. ಮುನಿರತ್ನ ನಿರ್ಮಾಣದಲ್ಲಿ ಚಿತ್ರ ಮೂಡಿಬರಲಿದೆ. ಜುಲೈ 23ರಂದು ಚಿತ್ರಕ್ಕೆ ಚಾಲನೆ ಸಿಗಲಿದ್ದು, ಆಗಸ್ಟ್‌ನಿಂದ ಶೂಟಿಂಗ್. 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಸಿನಿಮಾದ ನಿರ್ದೇಶಕ ನಾಗಣ್ಣ, ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ರವಿಚಂದ್ರನ್ ಕೂಡ ಒಂದು ಪಾತ್ರ ಮಾಡಲಿದ್ದಾರೆಂಬ ಸುದ್ದಿ ಹರಿದಾಡುತ್ತಿದೆ. ಉಳಿದ ತಾರಾಗಣದ ಬಗ್ಗೆ ಚಿತ್ರತಂಡದಿಂದ ಮಾಹಿತಿ ಇಲ್ಲ, ಆದರೆ, ಹಂಸಲೇಖ ಸಂಗೀತ ನಿರ್ದೇಶನ ಮಾಡಲಿರುವ ಸುದ್ದಿ ದೃಢಪಟ್ಟಿದೆ. ಈ ಸಿನಿಮಾದಲ್ಲಿ ಯಶ್, ಸುದೀಪ್, ಪುನೀತ್ ಇತರ ಪಾತ್ರಗಳನ್ನು ಮಾಡುತ್ತಾರೆಂಬ ಗಾಸಿಪ್ ಹರಡಿತ್ತು, ಆದರೆ, ಇವರೆಲ್ಲ ತಾರಾಗಣದಲ್ಲಿ ಇರಲ್ಲ ಅನ್ನುವುದನ್ನು ಈಗ ಒಬ್ಬೊಬ್ಬರಾಗಿ ಖಚಿತಪಡಿಸುತ್ತಿದ್ದಾರೆ.

ಉಪ್ಪಿಯ ಐವತ್ತನೆ ಚಿತ್ರ

ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ ಉಪ್ಪಿ, ಅವರ ಮೊಬೈಲ್ ರಿಂಗುಣಿಸಿದರೂ, ಅದನ್ನು ರಿಸೀವ್ ಮಾಡಲ್ಲ. ಇನ್ನಷ್ಟೇ 'ನಾಗಾರ್ಜುನ' ಸಿನಿಮಾದ ಶೂಟಿಂಗ್ ಶುರು ಆಗಬೇಕಿದೆ. ಕೈತುಂಬಾ ಕೆಲಸವಿರುವ ಉಪೇಂದ್ರ ಎಲ್ಲಿದ್ದಾರೆಂಬ ಕುತೂಹಲ ಅವರ ಅಭಿಮಾನಿಗಳದ್ದು. ಅದಕ್ಕೆ ಉತ್ತರವೂ ಸಿಕ್ಕಿದೆ. 'ಉಪ್ಪಿರುಪ್ಪಿ' ಸಿನಿಮಾದ ಶೂಟಿಂಗ್ ಮುಗಿಸಿಕೊಂಡು ಪೆನ್ನು ಪೇಪರ್ ಹಿಡಿದುಕೊಂಡು ಕೂತಿದ್ದಾರಂತೆ ರಿಯಲ್ ಸ್ಟಾರ್. ತಮ್ಮ ಐವತ್ತನೆಯ ಸಿನಿಮಾವನ್ನು ತಾವೇ ನಿರ್ದೇಶನ ಮಾಡಬೇಕಾಗಿರುವುದರಿಂದ, ಆ ಸ್ಕ್ರಿಪ್ಟ್‌ನ ತಯಾರಿಯಲ್ಲಿ ಅವರು ತೊಡಗಿದ್ದಾರಂತೆ. ಬೇಸಿಗೆ ಮುಗಿಯುವ ಹೊತ್ತಿಗೆ ಸಂಪೂರ್ಣ ಬರಹದ ಕೆಲಸ ಮುಗಿಸಿಕೊಂಡು ತಮ್ಮ ಹುಟ್ಟುಹಬ್ಬದಂದು ಚಿತ್ರಕ್ಕೆ ಚಾಲನೆ ನೀಡಲಿದ್ದಾರಂತೆ. ಉಪೇಂದ್ರ ಆಪ್ತರು ಹೇಳುವಂತೆ, ನಿರ್ಮಾಪಕ ಶ್ರೀರಾಮ್ ಜತೆ ಚಿಕ್ಕಮಗಳೂರಿನಲ್ಲಿ ಉಪೇಂದ್ರ ತಾತ್ಕಾಲಿಕವಾಗಿ ಬೀಡುಬಿಟ್ಟಿದ್ದಾರೆ. ಅಲ್ಲಿಯೇ ಸ್ಕ್ರಿಪ್ಟ್‌ನ ಬಹುತೇಕ ಕೆಲಸವನ್ನು ಅವರು ಮುಗಿಸಲಿದ್ದಾರೆ. ಇನ್ನೂ ಒಂದು ವಾರ ಚಿಕ್ಕಮಗಳೂರಿನಲ್ಲೇ ಇರುವ ಇವರು, ಅಲ್ಲಿಂದ ಬಂದನಂತರ 'ನಾಗಾರ್ಜುನ' ಸಿನಿಮಾದ ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.



ಉಪೇಂದ್ರರಿಗಾಗಿ ಮತ್ತೊಂದು ಸಿನಿಮಾ ತಂಡ ಕೂಡ ಕಾಯುತ್ತಿದೆ. ಈಗಾಗಲೇ ಸಂಪೂರ್ಣ ಶೂಟಿಂಗ್ ಮುಗಿಸಿರುವ 'ಉಪ್ಪಿ ಮತ್ತೆ ಹುಟ್ಟಿ ಬಾ- ಇಂತಿ ಪ್ರೇಮ' ಸಿನಿಮಾದ ಹಾಡುಗಳು ಬಿಡುಗಡೆ ಆಗಬೇಕಿದೆ. ಅಲ್ಲದೇ ಜೂನ್‌ನಲ್ಲಿ ಈ ಸಿನಿಮಾ ರಿಲೀಸ್ ಕೂಡ ಆಗಬೇಕು. ಇದೆಲ್ಲ ಆಗಬೇಕು ಅಂದರೆ, ಉಪೇಂದ್ರ ಸಿಗಬೇಕು.

ಕಿರಿಕ್ ಜೋಡಿಯ ಲವ್‌ಸ್ಟೋ

'ಕಿರಿಕ್ ಪಾರ್ಟಿ' ಸಿನಿಮಾ ಖ್ಯಾತಿಯ ರಕ್ಷಿತ್ ಶೆಟ್ಟಿ ಮತ್ತು ರಶ್ಮಿಕಾ ಮದುವೆಯಾಗಲಿದ್ದಾರೆಂಬ ಸುದ್ದಿ ಗಾಂಧಿನಗರದಲ್ಲಿ ಹರಿದಾಡುತ್ತಿತ್ತು, ಸಿನಿಮಾರಂಗದಲ್ಲಿ ಬಿಜಿ ಆಗಿರುವ ಕಾರಣ ಇನ್ನೂ ಎರಡು ವರ್ಷ ತಾವು ಆಗಲ್ಲ ಎಂಬ ಹೇಳಿಕೆಯನ್ನೂ ರಕ್ಷಿತ್ ಕೊಟ್ಟರು. ತಾವಿಬ್ಬರೂ ಮದುವೆ ಏನೂ ಯೋಚಿಸಿಲ್ಲ ಎಂಬ ಮಾತು ಎರಡೂ ಕಡೆಯಿಂದಲೂ ಬಂತು. ಈ ತನ್ನ ಆಪ್ತರ ಮುಂದೆ ಮದುವೆ ಆಗುವುದಾಗಿ ಹೇಳಿದ್ದ ರಕ್ಷಿತ್ ಏಕಾ ವಿಷಯದ ಬಗ್ಗೆ ಉಲ್ಟಾ ಹೊಡೆಯಲು ಕಾರಣ ಅವರ ಕೆರಿಯರ್. ಸ್ವತಃ ಒಪ್ಪಿಕೊಂಡಂತೆ, ಇಬ್ಬರೂ ಇಂದಲ್ಲ ನಾಳೆ ಮದುವೆ ಆಗಲಿದ್ದಾರೆ. ಅದಕ್ಕೂ ಬದುಕನ್ನ ಗಟ್ಟಿಯಾಗಿ ಕಟ್ಟಿಕೊಳ್ಳಲು ಯೋಜನೆ ಹಾಕಿಕೊಂಡಿದ್ದಾರೆ. ರಶ್ಮಿಕಾ ಮತ್ತು ತಮಿಳಿನ ಸೂಪರ್ ಸ್ಟಾರ್ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಕನ್ನಡ ಟಾಪ್ ನಟರ ಚಿತ್ರಗಳು ಸಿಕ್ಕಿವೆ. ಅಲ್ಲದೇ ರಕ್ಷಿತ್ ಕೂಡ ಎರಡು ಸಿನಿಮಾ ನಾಯಕರಾಗಿ ನಟಿಸುತ್ತಿದ್ದಾರೆ. ಸುದೀಪ್ ನಟನೆಯ ಚಿತ್ರಕ್ಕೆ ಆಕ್ಷನ್ ಕಟ್ ಹೇ ಮದುವೆಯಾದರೆ, ಪ್ರೇಕ್ಷಕರು ದೂರ ಇಡುತ್ತಾರೆಂಬ ಭಯ ಇಬ್ಬರದ್ದು. ಹಾ ಮದುವೆಯ ಬಗ್ಗೆ ಇಬ್ಬರೂ ಏನೂ ಮಾತಾಡುತ್ತಿಲ್ಲ.

'ಕಿರಿಕ್ ಪಾರ್ಟಿ' ಶೂಟಿಂಗ್ ಟೈಮ್‌ನಲ್ಲಿ ಇಬ್ಬರೂ ಪ್ರೇಮಿಗಳಾ ಎರಡೂ ಮನೆಯಲ್ಲೂ ಒಂದು ಹಂತದ ಮಾತುಕತೆ ಕೂಡ ಆಗಿದೆ. ಈ ವಿ ಹೇಗೋ ರಕ್ಷಿತ್ ಆಪ್ತರಿಗೆ ಗೊತ್ತಾಗಿ, ಅವರು ಸುದ್ದಿಯನ್ನು ಹರಿಬಿಟ್ಟಿದ್ದಾರೆ. ಸುಳ್ಳಾಗಿಸಲು ರಕ್ಷಿತ್ ಮತ್ತು ರಶ್ಮಿಕಾ ಕಷ್ಟಪಟ್ಟಿದ್ದಂತೂ ಸುಳ್ಳಲ್ಲ.

'ಭೂಮಿಪುತ್ರ'ನಿಗಾಗಿ ಮುನಿಸಿಕೊಂಡ ರಾಧಿ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಜೀವನದ ಒಂದು ಈಗ 'ಭೂಮಿಪುತ್ರ' ಅನ್ನುವ ಹೆಸರಿನಲ್ಲಿ ಸಿನಿಮಾವಾಗಿ ಮೂಡಿ ಬ ಮೊನ್ನೆಯಷ್ಟೇ ಚಿತ್ರಕ್ಕೆ ಚಾಲನೆ ಕೂಡ ಸಿಕ್ಕಿದೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ 20 ತಿಂಗಳ ಅವಧಿಯ ಕತೆಯನ್ನು ನಿ ಎಸ್.ನಾರಾಯಣ್ ಸಿನಿಮಾ ಮಾಡುತ್ತಿದ್ದು, ಅದರಲ್ಲಿ ತಮ್ಮನ್ನು ಕಡೆಗಣಿಸಿದ್ದಾ ರಾಧಿಕಾ ಆರೋಪಿಸಿದ್ದಾರಂತೆ. ಸಿನಿಮಾದ ಕತೆಯ ಕುರಿತು ಅವರು ಆಕ್ಷೇಪಿಸಿ ಸುದ್ದಿ ಗಾಂಧಿನಗರದಲ್ಲಿ ವೈರಲ್ ಆಗಿದೆ. ಆ ಇಪ್ಪತ್ತು ತಿಂಗಳ ಅವಧಿಯ ರಾಧಿಕಾ ಅವರು ಕುಮಾರಸ್ವಾಮಿ ಅವರಿಗೆ ಪರಿಚಯ ಆಗಿದ್ದಂತೆ. ಹಾಗಾಗಿ ಪಾತ್ರವೂ ಇರಲಿ ಅನ್ನುವ ಬೇಡಿಕೆ ರಾಧಿಕಾ ಅವರದ್ದಂತೆ. ಆದರೆ, ನಿರ್ದೇಶಕ ಅಂಶವನ್ನು ಚಿತ್ರಕತೆಯಲ್ಲಿ ಸೇರಿಸಿಲ್ಲ ಅನ್ನುವ ಕಾರಣಕ್ಕಾಗಿ ರಾ ತರಾಟೆಗೆ ತೆಗೆದುಕೊಂಡಿದ್ದಾರೆಂಬ ಸುದ್ದಿ ಕೂಡ ಓಡಾಡುತ್ತಿದೆ. ಆದರೆ, ಅಧಿಕೃತವಾಗಿ ಈ ಕುರಿತು ಯಾರೂ ಮಾತಾಡುತ್ತಿಲ್ಲ, ಅಂದಹಾಗೆ ಈ ಸಿನಿಮಾದಲ್ಲಿ ಕುಮಾರಸ್ವಾಮಿ ಅವರ ಪಾತ್ರವನ್ನು ಅರ್ಜುನ್ ಸರ್ಜಾ ನಿರ್ವಹಿಸುತ್ತಿದ್ದಾರೆ. ಈ ಚಿತ್ರಕ್ಕಾಗಿ ಅರ್ಜುನ್ ಬರೋಬ್ಬರಿ ನಾಲ್ಕು ಕೋಟಿ ರೂಪಾಯಿ ಸಂಭಾವನೆಯನ್ನು ತೆಗೆದುಕೊಂಡಿದ್ದಾರಂತೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com